ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 8 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 290 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಅಧಿಕಾರ ಹಂಚಿಕೆ ಒಪ್ಪಂದ ಆಗಿದೆ

- ಡಿಕೆಶಿ ಹೇಳಿದರೆ ಪ್ರಾಣ ಕೊಡುವುದಕ್ಕೂ ಸಿದ್ಧ: ಶಾಸಕ ಬಸವರಾಜ್ ಶಿವಗಂಗಾ
- ಒಪ್ಪಂದ ಬಹಿರಂಗಪಡಿಸಲು ವರಿಷ್ಠರಿಗೆ ಡಿ.ಕೆ.ಶಿವಕುಮಾರ್ ಬಣದ ಒತ್ತಾಯ

ದಾವಣಗೆರೆ: ಕಾಂಗ್ರೆಸ್ ಶಾಸಕ ಶಿವಗಂಗಾ ಬಸವರಾಜ್, ಮತ್ತೆ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಪರ ಬ್ಯಾಟಿಂಗ್ ಬೀಸಿದ್ದು, ಎರಡೂವರೆ ವರ್ಷ ಅಧಿಕಾರ ಹಂಚಿಕೆಗೆ ಒಪ್ಪಂದ ಆಗಿರುವುದು ಸತ್ಯ. ಈ ಬಗ್ಗೆ ನನಗೆ ಮಾಹಿತಿ ಇದೆ ಎಂದು ಹೇಳಿದ್ದಾರೆ.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 139 ಶಾಸಕರ ಬೆಂಬಲ ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಇದೆ. 40ರಿಂದ 50 ಜನ ನಮ್ಮಂತಹ ಯುವ ಶಾಸಕರು ಡಿಕೆಶಿ ಏನೇ ಹೇಳಿದರೂ ಮಾಡಲು ಸಿದ್ಧರಿದ್ದೇವೆ. ಅವರು ಪ್ರಾಣ ಕೇಳಿದರೂ ಕೊಡೋಕೆ ನಾವುಗಳು ಸಿದ್ಧರಿದ್ದೇವೆಂದು ಹೇಳಿದ್ದಾರೆ.


ಶಿವಗಂಗಾ ಬಸವರಾಜ್

ನನಗಿರುವ ಮಾಹಿತಿ ಪ್ರಕಾರ ಅಧಿಕಾರ ಹಂಚಿಕೆ ಒಪ್ಪಂದ ಆಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಐದು ವರ್ಷದ ತನಕ ಸಿಎಂ ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರು ಪದೇ ಪದೆ ಹೇಳಿಕೆ ನೀಡುತ್ತಲೇ ಇದ್ದಾರೆ. ಯತೀಂದ್ರ ಸಿದ್ದರಾಮಯ್ಯ ಹೇಳಿಕೆಯನ್ನು ಪಕ್ಷದ ಹೈಕಮಾಂಡ್ ಗಮನಿಸಿದೆ. ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಾ ಗಾಂಧಿ ಇದ್ದಾರೆ. ಪಕ್ಷದಲ್ಲಿ ಅಧಿಕಾರ ಹಂಚಿಕೆಯ ಒಪ್ಪಂದ ಆಗಿದೆಯಾ ಇಲ್ಲವಾ ಎಂಬುದನ್ನು ಸ್ಪಷ್ಟಪಡಿಸಬೇಕು

▶ 6ನೇ ಪುಟಕ್ಕೆ

ಹೈಕಮಾಂಡ್ ಹೇಳಿದರೆ ಡಿಕೆಶಿ ಸಿಎಂ ಆಗ್ತಾರೆ

ಬೀದರ್: ಹೈಕಮಾಂಡ್ ಅಂದರೆ ಹೈಕಮಾಂಡೇ, ಅವರ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ. ನಾನು ಅದನ್ನೇ ನಿನ್ನೆ ಹೇಳಿದ್ದು, ಹೈಕಮಾಂಡ್ ಸದ್ಯಕ್ಕೆ ನಾಯಕತ್ವ ಬದಲಾವಣೆ ಬಗ್ಗೆ ಹೇಳಿಲ್ಲ. ಹಾಗಾಗಿ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ ಎಂದು ಹೇಳಿದ್ದು ಎಂದು ಡಾ.ಯತೀಂದ್ರ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.


ಡಾ.ಯತೀಂದ್ರ

ನಿನ್ನೆ ಮೈಸೂರಿನಲ್ಲಿ ಹೈಕಮಾಂಡ್ ಸದ್ಯಕ್ಕೆ ನಾಯಕತ್ವ ಬದಲಾವಣೆ ಬಗ್ಗೆ ಮಾತನಾಡುತ್ತಿಲ್ಲ. ತಂದೆಯವರೇ 5 ವರ್ಷ ಸಿಎಂ ಆಗಿ ಇರುತ್ತಾರೆ ಎಂದು ನಾನು ಅಂದುಕೊಳ್ಳುತ್ತೇನೆ ಎಂದಿದ್ದರು. ಅದಕ್ಕೆ ಡಿ.ಕೆ.ಶಿವಕುಮಾರ್, ಯತೀಂದ್ರ ಅವರು ಹೇಳಿದ ಮೇಲೆ ಮುಗೀತು, ಅವರೇ ಹೈಕಮಾಂಡ್ ಎಂದು ಭಾವಿಸೋಣ ಎಂದಿದ್ದರು. ಈ ಬಗ್ಗೆ ಇಂದು ಬೀದರ್‌ನಲ್ಲಿ ಸುದ್ದಿಗಾರರು ಕೇಳಿದಾಗ, ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರವೇ ಅಂತಿಮ. ಎಲ್ಲಾ ಪಕ್ಷಗಳಲ್ಲಿಯೂ ಮುಖ್ಯಮಂತ್ರಿ ಆಕಾಂಕ್ಷಿಗಳು ಇರುತ್ತಾರೆ. ನಿಜವಾದ ಅರ್ಹತೆ ಇರುವವರು ಸಹ ಕೇಳುತ್ತಿರುತ್ತಾರೆ. ಅಂತಿಮವಾಗಿ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ. ನಮ್ಮ ಪಕ್ಷದಲ್ಲೇನೂ ಹೊಸ ವಿಚಾರವಲ್ಲ, ಹೈಕಮಾಂಡ್ ಸದ್ಯಕ್ಕೆ ಏನೂ ಹೇಳಿಲ್ಲ. ಹೀಗಾಗಿ ಸಿದ್ದರಾಮಯ್ಯನವರೇ ಮುಂದುವರಿಯುತ್ತಾರೆ ಎಂದರು.

ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಸಿಎಂ

ಮೈಸೂರು: ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಪುನರುಚ್ಚರಿಸಿದರು.


ಡಾ.ಪರಮೇಶ್ವರ್

ನಮ್ಮ ತಂದೆ ಐದು ವರ್ಷದವರೆಗೆ ಪೂರ್ಣಾವಧಿಗೆ ಸಿಎಂ ಆಗಿರುತ್ತಾರೆ ಎಂಬ ಯತೀಂದ್ರ ಹೇಳಿಕೆ ಬೆನ್ನಲ್ಲೆ ಡಾ.ಪರಮೇಶ್ವರ್ ಕೂಡ ಅದಕ್ಕೆ ಸಹಮತ ವ್ಯಕ್ತಪಡಿಸುವಂತೆ ಪ್ರತಿಕ್ರಿಯಿಸಿರುವುದು ಮಹತ್ವ ಪಡೆದಿದೆ. ಹೈಕಮಾಂಡ್ ಮಟ್ಟದಲ್ಲೆ ಆಗಲಿ ಅಥವಾ ನಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಾಗಲೀ ಈ ತನಕ ಅಧಿಕಾರ ಹಸ್ತಾಂತರ ವಿಚಾರ ಪ್ರಸ್ತಾಪವಾಗಿಲ್ಲ. ಹೀಗಿರುವ ಅಧಿಕಾರ ಹಂಚಿಕೆಯ ಪ್ರಶ್ನೆಯೇ ಎದುರಾಗುವುದಿಲ್ಲ ಎಂದರು.

ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡುವ ಬಗ್ಗೆ ಹೈಕಮಾಂಡ್ ಎಲ್ಲೂ ಪ್ರಸ್ತಾಪ ಮಾಡಿಲ್ಲ. ಅಲ್ಲದೆ ಕರ್ನಾಟಕದಲ್ಲಿ ನಡೆಯುತ್ತಿರುವ

▶ 6ನೇ ಪುಟಕ್ಕೆ

ಮೈಸೂರಿನ ಸಿದ್ಧಾರ್ಥ ಸಂಚಾರ ಪೊಲೀಸ್ ಠಾಣೆ ಲೋಕಾರ್ಪಣೆ

ಡ್ರಗ್ಸ್ ದಂಧೆ ಮಟ್ಟ ಹಾಕಲು ಸೀಕ್ರೆಟ್ ಆಪರೇಷನ್ ನಡೀತಿದೆ!

- ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಾಹಿತಿ
- ಕಾರ್ಯಾಚರಣೆ ಬಹಿರಂಗಪಡಿಸಲ್ಲ
- ಕೆಮಿಕಲ್ಸ್ ಫ್ಯಾಕ್ಟರಿಯವರು 15 ದಿನಕ್ಕೊಮ್ಮೆ ಮಾಹಿತಿ ನೀಡಬೇಕು
- ಪೊಲೀಸರು ಸದಾ ಜನಸ್ನೇಹಿಯಾಗಿರಬೇಕು



ಮೈಸೂರು ಸಿದ್ಧಾರ್ಥನಗರ ಸಂಚಾರ ಪೊಲೀಸ್ ಠಾಣೆಯನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಶನಿವಾರ ಉದ್ಘಾಟಿಸಿದರು. ಶಾಸಕರಾದ ತನ್ವೀರ್ ಸೇಠ್, ಟಿ.ಎಸ್.ಶ್ರೀವತ್ಸ, ಸಿ.ಎನ್.ಮಂಜೇಗೌಡ, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಇತರರಿದ್ದಾರೆ.

ಮೈಸೂರು,ಫೆ.7(ಬಿಎಲ್‌ಯು)– ಡ್ರಗ್ಸ್ ಜಾಲವನ್ನು ವ್ಯವಸ್ಥಿತವಾಗಿ ಮಟ್ಟ ಹಾಕುತ್ತಿದ್ದು, ಮೈಸೂರು ಸೇರಿದಂತೆ ಕರ್ನಾಟಕವನ್ನು ಉಡ್ತಾ ಪಂಜಾಬ್ ಆಗಲು ಬಿಡುವುದಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಘೋಷಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥ ಲೇಔಟ್‌ನಲ್ಲಿರುವ ಸಿದ್ಧಾರ್ಥ ಸಂಚಾರ ಪೊಲೀಸ್ ಠಾಣೆಯ ನೂತನ ಕಟ್ಟಡ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಡ್ರಗ್ಸ್ ವಿರುದ್ಧ ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳುತ್ತಿದೆ. ಆದರೆ ಇದನ್ನು ಬಹಿರಂಗಗೊಳಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

▶ 6ನೇ ಪುಟಕ್ಕೆ

ಮೈಸೂರಲ್ಲಿ ಶೀಘ್ರ 2 ಸಾವಿರ ಸಿಸಿಟಿವಿ ಕ್ಯಾಮರಾ ಅಳವಡಿಸಿ

ಮೈಸೂರು: ನಗರದಲ್ಲಿ ಕನಿಷ್ಠ ಎರಡು ಸಾವಿರ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸುವಂತೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರಿಗೆ ಸೂಚಿಸಿದರು. ಪ್ರಸ್ತುತ ಮೈಸೂರು ನಗರದಲ್ಲಿ 380 ಸಿಸಿಟಿವಿ ಕ್ಯಾಮರಾಗಳಿದ್ದು, ಇವು ಏನೇನು ಸಾಲದಾಗಿವೆ. ಈ ಹಿನ್ನೆಲೆಯಲ್ಲಿ ಆದಷ್ಟು ಬೇಗ ಎರಡು ಸಾವಿರ ಕ್ಯಾಮರಾ ಅಳವಡಿಸಲು ಕ್ರಮ ಕೈಗೊಳ್ಳಬೇಕು ಎಂದು ವೇದಿಕೆಯಲ್ಲಿದ್ದ ಸೀಮಾ ಲಾಟ್ಕರ್ ಅವರಿಗೆ ತಾಕೀತು ಮಾಡಿದರು. ಕುವೆಂಪುನಗರ ಸಂಚಾರ ಪೊಲೀಸ್ ಠಾಣೆಗೆ ಹೊಸ ಕಟ್ಟಡದ ಬೇಡಿಕೆ ಇಟ್ಟಿದ್ದೀರಾ. ಈ ಸಂಬಂಧ ಪ್ರಸ್ತಾವನೆ ಕಳುಹಿಸಿದರೆ ಮಂಜೂರು

ಕುವೆಂಪುನಗರ ಸಂಚಾರ ಠಾಣೆ; ಉದಯಗಿರಿಯಲ್ಲಿ ಮತ್ತೊಂದು ಠಾಣೆಗೆ ಕಟ್ಟಡ

▶ 6ನೇ ಪುಟಕ್ಕೆ

ಎಲ್ಲೆಡೆ ಕೆಮಿಕಲ್ಸ್ ಫ್ಯಾಕ್ಟರಿ ಮೇಲೆ ಹದ್ದಿನ ಕಣ್ಣಿಡಿ

- ಮೈಸೂರಲ್ಲಿ ಡ್ರಗ್ಸ್ ಪತ್ತೆಯಾಗಿಲ್ಲ
- ಎನ್‌ಸಿಬಿ ಅಧಿಕಾರಿಗಳಿಂದ ದ್ವಂದ್ವ ಹೇಳಿಕೆ
- ದಾಳಿ ವೇಳೆ ನಮ್ಮ ಪೊಲೀಸರು ಅಲ್ಲಿದ್ದರು
- ನಮ್ಮ ಪೊಲೀಸರ ಮಾಹಿತಿ ನಂಬುವೆ

ಮೈಸೂರು, ಫೆ.7(ಬಿಎಲ್‌ಯು)– ಮೈಸೂರು ಸೇರಿದಂತೆ ರಾಜ್ಯದ ಎಲ್ಲಾ ಕೆಮಿಕಲ್ಸ್ ಫ್ಯಾಕ್ಟರಿಗಳ ಮೇಲೆ ಹದ್ದಿನ ಕಣ್ಣಿಡುವಂತೆ ಪೊಲೀಸರಿಗೆ ಕಟ್ಟಾಜ್ಞೆ ಮಾಡಿದ್ದೇನೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಕಾರ್ಖಾನೆ ಮೇಲೆ ಎನ್ ಸಿಬಿ ಅಧಿಕಾರಿಗಳು ದಾಳಿ ಮಾಡಿದಾಗ ಅಲ್ಲಿ ಯಾವುದೇ ರೀತಿಯ ಡ್ರಗ್ಸ್ ಪತ್ತೆಯಾಗಿಲ್ಲ ಎಂದು ಸ್ಪಷ್ಟಪಡಿಸಿದರು.


ಎನ್ ಸಿಬಿ ಅಧಿಕಾರಿಗಳು ದಾಳಿ ಮಾಡಿದ ವೇಳೆ ನಮ್ಮ ಪೊಲೀಸರು ಕೂಡ ಸ್ಥಳದಲ್ಲಿ ಹಾಜರಿದ್ದರು. ಆದರೆ ಅಲ್ಲಿ ಡ್ರಗ್ಸ್ ಪತ್ತೆಯಾಗಿಲ್ಲ. ಈ ಸಂಬಂಧ ಕೋರ್ಟ್‌ಗೆ ಸಲ್ಲಿಸಿರುವ ಮಾಹಿತಿಯಲ್ಲಿ ಕೂಡ ಡ್ರಗ್ಸ್ ಸಿಕ್ಕಿಲ್ಲ ಎಂದು ಎನ್‌ಸಿಬಿ ಅಧಿಕಾರಿಗಳೆ ಹೇಳಿದ್ದಾರೆ ಎಂದು ಡಾ.ಪರಮೇಶ್ವರ್ ತಿಳಿಸಿದರು.

▶ 6ನೇ ಪುಟಕ್ಕೆ

ನಿಮ್ಮಲ್ಲಿ ಡ್ರಗ್ಸ್ ಬಗ್ಗೆ ಮಾಹಿತಿ ಇದೆಯಾ! ನಮ್ಮ ವಾಟ್ಸಾಪ್ ನಂ. 8277948080ಕ್ಕೆ ವಿವರ ನೀಡಿ

ಮೈಸೂರನ್ನು ಡ್ರಗ್ಸ್ ಮುಕ್ತ ನಗರವನ್ನಾಗಿಸಲು ಸಹಕರಿಸಿ; ಗೌಪ್ಯತೆ ಕಾಪಾಡುತ್ತೇವೆ

ಮೈಸೂರು,ಫೆ.7(ಬಿಎಲ್‌ಯು)– ಡ್ರಗ್ಸ್ ತಯಾರಿಕೆ, ಮಾರಾಟ, ಸೇವನೆ ಸೇರಿದಂತೆ ಮಾದಕ ವಸ್ತುಗಳ ವಿಚಾರಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರು ಮಾಹಿತಿ ನೀಡಲು ಮೈಸೂರು ನಗರ ಪೊಲೀಸರು ವಾಟ್ಸಾಪ್ ಸಂಖ್ಯೆಯನ್ನು ನೀಡಿದ್ದಾರೆ. 'ವಿಮುಕ್ತಿ' ಎಂಬ ಘೋಷವಾಕ್ಯದೊಂದಿಗೆ ಮಾದಕ ವಸ್ತು ಮುಕ್ತ ಮೈಸೂರಿನತ್ತ ಹೆಜ್ಜೆ ಇಡಲು ವಾಟ್ಸಾಪ್ ಸಂಖ್ಯೆ ನೀಡಲಾಗಿದೆ.



ಸಾರ್ವಜನಿಕರು ವಾಟ್ಸಾಪ್ ಸಂಖ್ಯೆ 8277948080 ಮೂಲಕ ಡ್ರಗ್ಸ್‌ಗೆ ಸಂಬಂಧಿಸಿದ

▶ 6ನೇ ಪುಟಕ್ಕೆ

ಟಿ.ನರಸೀಪುರದ ಕೊಳತ್ತೂರು ಗ್ರಾಪಂ ವ್ಯಾಪ್ತಿ ಲಘು ಭೂಕಂಪ

ಮೈಸೂರು,ಫೆ.7(ಪಿಎಂ)– ಟಿ.ನರಸೀಪುರ ತಾಲೂಕಿನ ಕೊಳತ್ತೂರು ಗ್ರಾಪಂ ವ್ಯಾಪ್ತಿಯಲ್ಲಿ 2.4ರಷ್ಟು ತೀವ್ರತೆಯ ಲಘು ಭೂಕಂಪನ ಶನಿವಾರ ಸಂಜೆ ಸಂಭವಿಸಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಮೇಲ್ವಿಚಾರಣಾ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ವರದಿಯಂತೆ ಶನಿವಾರ ಸಂಜೆ 5.13.13ಕ್ಕೆ ಕೊಳತ್ತೂರು ಗ್ರಾಪಂ ವ್ಯಾಪ್ತಿಯಲ್ಲಿ ಈ ಲಘು ಭೂಕಂಪನ ಉಂಟಾಗಿದೆ.

ಕೊಳತ್ತೂರು ಗ್ರಾಪಂನಿಂದ ಕೇಂದ್ರೀಕೃತವಾಗಿರುವ ಈ ಭೂಕಂಪವು ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಸುಜ್ಜಲೂರು ಗ್ರಾಪಂನ ಹನಕೋಳ ಗ್ರಾಮದ ದಕ್ಷಿಣಕ್ಕೆ 1.9 ಕಿ.ಮೀ., ಟಿ.ನರಸೀಪುರ ತಾಲೂಕಿನ ಚಿದರವಳ್ಳಿ ಗ್ರಾಪಂನ ಆಗ್ನೇಯಕ್ಕೆ 4.0 ಕಿಮೀ ಹಾಗೂ ಮೈಸೂರು ನಗರದ 38 ಕಿ.ಮೀ. ಪೂರ್ವದವರೆಗೆ ಅನುಭವಕ್ಕೆ ಬಂದಿರಬಹುದು.

ಭೂಕಂಪನದ ತೀವ್ರತೆ ಕಡಿಮೆ ಇದ್ದು, ಭೂಕಂಪನ ಕೇಂದ್ರದಿಂದ 20ರಿಂದ 30 ಕಿಮೀ ದೂರದವರೆಗೆ ಅನುಭವ ಆಗಿರಬಹುದು. ಈ ರೀತಿಯ ಭೂಕಂಪವು ಸ್ಥಳೀಯ ಸಮುದಾಯಕ್ಕೆ ಯಾವುದೇ ಹಾನಿಯನ್ನುಂಟು ಮಾಡುವುದಿಲ್ಲ. ಸಾರ್ವಜನಿಕರು ಭಯಭೀತರಾಗುವ ಯಾವುದೇ ಅಗತ್ಯವಿಲ್ಲವೆಂದು ಕೇಂದ್ರದ ನಿರ್ದೇಶಕರು ತಿಳಿಸಿದ್ದಾರೆ. ಭೂಕಂಪ ಸಂಭವಿಸಿದ ಪ್ರದೇಶವು ಭೂಕಂಪ ವಲಯ–2ಕ್ಕೆ ಒಳಪಟ್ಟಿದ್ದು, ಟೆಕ್ಟೋನಿಕ್ ನಕ್ಷೆಯ ಪ್ರಕಾರ ಯಾವುದೇ ಪ್ರಮುಖ ಭೌಗೋಳಿಕ ಬಿರುಕುಗಳು ಕಂಡುಬಂದಿಲ್ಲ.

> ಟಿ.ನರಸೀಪುರ ತಾಲೂಕು ಮುಡಕನಪುರ ಮತ್ತು ಕೊಳತ್ತೂರಿನಲ್ಲಿ ಲಘು ಭೂಕಂಪ ಸಂಭವಿಸಿದೆ. ಆದರೆ ಎರಡೂ ಗ್ರಾಮಗಳ ಗ್ರಾಮಸ್ಥರ ಅನುಭವಕ್ಕೆ ಬಾರದಷ್ಟು ಲಘುವಾಗಿದೆ. ಎರಡೂ ಗ್ರಾಮಗಳ ಜನತೆ ತಮಗೆ ಯಾವುದೇ ಭೂಕಂಪನದ ಅನುಭವವಾಗಿಲ್ಲ ಎಂದು ತಿಳಿಸಿದ್ದಾರೆ.
> –ಸುರೇಶಾಚಾರ್, ತಹಸೀಲ್ದಾರ್, ಟಿ.ನರಸೀಪುರ.


ಕೊಡಗಿನ ಉದ್ಯಮಿ ಕೇರಳದಲ್ಲಿ ಕುಟುಂಬ ಸಮೇತ ಕಾರಲ್ಲೇ ಬೆಂಕಿ ಹೊತ್ತಿಸಿಕೊಂಡು ಆತ್ಮಹತ್ಯೆ ಯತ್ನ


- ಉದ್ಯಮಿ ಸಾವು; ಪತ್ನಿ, ಮಕ್ಕಳು ಪಾರು
- ಸಾಲಗಾರನ ಮನೆ ಮುಂದೆಯೇ ಘಟನೆ!

ಮೈಸೂರು, ಫೆ.7–ಇತ್ತೀಚೆಗಷ್ಟೇ ಬೆಂಗಳೂರಲ್ಲಿ ತಮ್ಮ ಕಚೇರಿಯಲ್ಲೇ ಗುಂಡಿಕ್ಕಿಕೊಂಡು ಕಾನ್ಫಿಡೆಂಟ್ ಗ್ರೂಪ್‌ನ ಮುಖ್ಯಸ್ಥ ಸಿ.ಜೆ.ರಾಯ್ ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಇನ್ನು ಜನರ ಮನಸ್ಸಿನಲ್ಲಿ ಇರುವಾಗಲೇ ಕೊಡಗಿನ ಉದ್ಯಮಿಯೊಬ್ಬರು ಕೊಟ್ಟ ಸಾಲ ವಸೂಲಾಗದ್ದಕ್ಕೆ ಮನನೊಂದು ಕುಟುಂಬ ಸಮೇತ ಆತ್ಮಹತ್ಯೆಗೆ ಯತ್ನಿಸಿದ್ದು, ಅದೃಷ್ಟವಶಾತ್ ಪತ್ನಿ, ಇಬ್ಬರು ಮಕ್ಕಳು ಪಾರಾದರೆ, ಉದ್ಯಮಿ ಅಸುನೀಗಿದ್ದಾರೆ.

ಕೊಡಗಿನ ಪೊನ್ನಂಪೇಟೆ ತಾಲೂಕು ಕುಟ್ಟ ಗ್ರಾಮದ ನಿವಾಸಿ, ಉದ್ಯಮಿ ಸಜೀರ್ ಇಂದು ಕೇರಳದಲ್ಲಿ ಕುಟುಂಬ ಸಮೇತ ಕಾರಿನಲ್ಲೇ ಬೆಂಕಿ ಹೊತ್ತಿಸಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಸಜೀರ್, ಕೇರಳದ ಬಾಪು ಎಂಬಾತನಿಗೆ 20 ಲಕ್ಷ ರೂ. ಸಾಲ ನೀಡಿದ್ದರು. ಈ ವೇಳೆ ಬಾಪು ಕೊಡಗಿನಲ್ಲಿ ನೆಲೆಸಿದ್ದ. ಆದರೆ, ಕೊಟ್ಟ ಸಾಲ ಕೇಳಲು ಶುರು ಮಾಡಿದಾಗ ನಂತರ ಆತ ಕೇರಳದ ವೈನಾಡಿಗೆ ಸ್ಥಳಾಂತರಗೊಂಡಿದ್ದ. ಕುಟ್ಟದಲ್ಲಿ ವ್ಯಾಪಾರ ಮಳಿಗೆಯನ್ನು ಹೊಂದಿದ್ದ ಉದ್ಯಮಿ ಸಜೀರ್, ಸಾಕಷ್ಟು ಬಾರಿ ಬಾಪುವಿಗೆ ಹಣ ಹಿಂದಿರುಗಿಸುವಂತೆ ಒತ್ತಾಯಿಸುತ್ತಲೇ ಇದ್ದರು. ಆದರೆ ಸಾಲ ಕೊಡುವ ಮನಸ್ಸು ಮಾತ್ರ ಬಾಪು ಮಾಡಿರಲಿಲ್ಲ.


ಉದ್ಯಮಿ ಸಜೀರ್


ಹೊತ್ತಿ ಉರಿಯುತ್ತಿರುವ ಕಾರು

ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದ ಸಜೀರ್, ಹಣ ವಸೂಲಿಗೋಸ್ಕರ ಇಂದು ಪತ್ನಿ, ಇಬ್ಬರು ಮಕ್ಕಳೊಂದಿಗೆ ತಮ್ಮ ಕಾರಿನಲ್ಲಿ ಕೇರಳಕ್ಕೆ ತೆರಳಿದ್ದರು. ವೈನಾಡಿನ ಬಾಪು ಮನೆಗೆ ಹೋದಾಗ ಆತ ಮನೆಯಲ್ಲಿ ಇಲ್ಲದಿರುವುದು ತಿಳಿದು ಬಂದಿದೆ. ಕೊನೆಗೆ ವಾಪಸ್ಸಾಗುವ ನಿರ್ಧಾರಕ್ಕೆ ಬಂದ ಸಜೀರ್, ಅದೇಕೋ ಮನಸ್ಸು ಬದಲಾಯಿಸಿ ಬಾಪು ಮನೆಯ ಎದುರೇ, ಕಾರಲ್ಲಿಯೇ ಕುಳಿತು ಹೆಂಡತಿ–ಮಕ್ಕಳಿಗೆ ಬೆಂಕಿ ಹೊತ್ತಿಸಿ, ತಾವೂ ಹಚ್ಚಿಕೊಂಡಿದ್ದಾರೆ.

ಕ್ಷಣಾರ್ಧದಲ್ಲಿ ಬೆಂಕಿ ಧಗಧಗಿಸಲಾರಂಭಿಸಿದೆ.

▶ 6ನೇ ಪುಟಕ್ಕೆ

ಮೈಸೂರು ವಿಜಯನಗರ ಮೂರನೇ ಹಂತದಲ್ಲಿ ಎಂಡಿಎ ಅಧಿಕಾರಿಗಳ ಕಾರ್ಯಾಚರಣೆ

140 ಕೋಟಿ ಮೌಲ್ಯದ 7 ಎಕರೆ ಭೂಮಿ ವಶಕ್ಕೆ

ಮೈಸೂರು, ಫೆ. 7(ಆರ್‌ಕೆ)–ಮೈಸೂರು ತಾಲೂಕು ಆಡಳಿತವು ತಹಶೀಲ್ದಾರ್ ನೇತೃತ್ವದಲ್ಲಿ ನಿನ್ನೆಯಷ್ಟೇ ನಂಜನಗೂಡು ರಸ್ತೆಯ ಜೆಎಸ್‌ಎಸ್ ಕಾಲೇಜು ಎದುರು ಅತಿಕ್ರಮಣ ಮಾಡಿದ್ದ ಸುಮಾರು 25 ಕೋಟಿ ರೂ. ಬೆಲೆಬಾಳುವ 38 ಗುಂಟೆ ಜಾಗವನ್ನು ತೆರವುಗೊಳಿಸಿದ ಬೆನ್ನಲ್ಲೇ ಇಂದು ಬೆಳಿಗ್ಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ವಿಜಯನಗರ 3ನೇ ಹಂತದಲ್ಲಿ ಸುಮಾರು 140 ಕೋಟಿ ಮೌಲ್ಯದ 7 ಎಕರೆ ಭೂಮಿಯನ್ನು ಪ್ರಾಧಿಕಾರದ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಜಿಲ್ಲಾಧಿಕಾರಿಗಳಾದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ಅಧ್ಯಕ್ಷ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರ ನಿರ್ದೇಶನದಂತೆ ಕಮಿಷ್ನರ್ ಕೆ.ಆರ್.ರಕ್ಷಿತ್ ಖುದ್ದು ಹಾಜರಿದ್ದು ಮುಂಜಾನೆ 5.30ರಿಂದ ಬೆಳಿಗ್ಗೆ 9.30 ಗಂಟೆವರೆಗೆ ಪೊಲೀಸ್ ಭದ್ರತೆಯಲ್ಲಿ ಕಾರ್ಯಾಚರಣೆ ನಡೆಸಿ, ಅನಧಿಕೃತವಾಗಿ ಶೆಡ್ ನಿರ್ಮಿಸಿಕೊಂಡು ವಾಸವಿದ್ದವರನ್ನು ತೆರವುಗೊಳಿಸಿ ಪ್ರಾಧಿಕಾರಕ್ಕೆ ಸೇರಿದ ನೂರಾರು ಕೋಟಿ ಮೌಲ್ಯದ ಆಸ್ತಿಯನ್ನು ವಶಕ್ಕೆ ಪಡೆದು, ಸುತ್ತ ತಂತಿ ಬೇಲಿ ಅಳವಡಿಸುವ ಕೆಲಸ ಆರಂಭಿಸಿದ್ದಾರೆ. ಕಳೆದ 42 ವರ್ಷಗಳ ಹಿಂದೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು

▶ 6ನೇ ಪುಟಕ್ಕೆ



ಶನಿವಾರ ಬೆಳಿಗ್ಗೆ ಮೈಸೂರಿನ ವಿಜಯನಗರ 3ನೇ ಹಂತದಲ್ಲಿ ಎಂಡಿಎ ಅಧಿಕಾರಿಗಳು ಅತಿಕ್ರಮಣ ತೆರವು ಕಾರ್ಯಾಚರಣೆ ನಡೆಸಿದರು.

ಸ್ಥಳದಲ್ಲಿ ಹೈಡ್ರಾಮಾ

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ತೆರವು ಕಾರ್ಯಾಚರಣೆಗಿಳಿದಾಗ ಸ್ಥಳದಲ್ಲಿದ್ದವರು ಅಡ್ಡಿಪಡಿಸಿ, ಜಗಳಕ್ಕೆ ಮುಂದಾಗಿದ್ದರು. ಅಲ್ಲದೇ ಕಾರ್ಯಾಚರಣೆ ನಡೆಸುತ್ತಿದ್ದ ಜೆಸಿಬಿ ಮುಂದೆ ಮಲಗಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುವುದಾಗಿಯೂ ಬೆದರಿಕೆಯೊಡ್ಡಿದರು. ಈ ವೇಳೆ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಯಿತಾದರೂ ಬಂದೋಬಸ್ತ್ ನೇತೃತ್ವ ವಹಿಸಿದ್ದ ಇನ್‌ಸ್ಪೆಕ್ಟರ್ ಸುರೇಶ್‌ಕುಮಾರ್ ನೇತೃತ್ವದ ಪೊಲೀಸರು ಅವರನ್ನು ವಶಕ್ಕೆ ಪಡೆದು, ವ್ಯಾನ್ ಒಳಗೆ ಕೂರಿಸಿ ತೆರವು ಕಾರ್ಯಾಚರಣೆಗೆ ಅನುವು ಮಾಡಿಕೊಟ್ಟರು.

> ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ತೆರವುಗೊಳಿಸಲೆಂದು ಹಲವು ಬಾರಿ ತೆರಳಿದಾಗ ಅನಧಿಕೃತವಾಗಿ ವಾಸವಿದ್ದವರು ಪ್ರತಿರೋಧ ತೋರಿ ಕಳುಹಿಸಿದ್ದರು. ಹಾಗಾಗಿ ಹಲವು ವರ್ಷಗಳಿಂದ ಬೆಲೆ ಬಾಳುವ ಈ 7 ಎಕರೆ ಪ್ರಮುಖ ಭೂಮಿಯನ್ನು ಪ್ರಾಧಿಕಾರದ ವಶಕ್ಕೆ ಪಡೆಯಲು ವಿಳಂಬವಾಗಿತ್ತು. ಇದೀಗ ದಾಖಲೆಗಳೆಲ್ಲವೂ ಪ್ರಾಧಿಕಾರದ ಹೆಸರಿನಲ್ಲಿರುವ ಕಾರಣ ಆಸ್ತಿಯನ್ನು ಸಂರಕ್ಷಿಸಲಾಗಿದೆ.
> –ಕೆ.ಆರ್. ರಕ್ಷಿತ್, ಮುಡಾ ಆಯುಕ್ತ

ಮೆಟ್ರೋ ಪ್ರಯಾಣ ದರ ವಿವಾದಕ್ಕೆ ಹೆಚ್.ಡಿ.ಕುಮಾರಸ್ವಾಮಿ ಕಿಡಿ

ಮೆಟ್ರೋ ಪಾಲು 80% ರಾಜ್ಯದ್ದೇ ಆಗಿರುವಾಗ ಕೇಂದ್ರ ದರ ಏರಿಸಲು ಸಾಧ್ಯವೇ?





ಬೆಂಗಳೂರು: ಮೆಟ್ರೋ ರೈಲು ಪ್ರಯಾಣ ದರ ಏರಿಕೆ ವಿಚಾರದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಜನತೆಗೆ ಸುಳ್ಳು ಹೇಳುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರ ಸ್ವಾಮಿ ಆರೋಪಿಸಿದರು.

ಬೆಂಗಳೂರಿನ ತಮ್ಮ ನಿವಾಸದಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು; ಮೆಟ್ರೋ ಯೋಜನೆಯಲ್ಲಿ ತನ್ನ ಪಾಲು ಜಾಸ್ತಿ ಇದೆ. ಹಾಗಿದ್ದ ಮೇಲೆ ಬೆಲೆ ಏರಿಕೆ ಮಾಡುವುದು ಯಾರು ರಾಜ್ಯ ಸರ್ಕಾರ ಜನರಿಗೆ ಮಂಕುಬೂದಿ ಎರಚುತ್ತಿದೆ ಎಂದರು.

ಕೇಂದ್ರ ಸರ್ಕಾರ ಕೇವಲ 20%ರಷ್ಟು ಮಾತ್ರ ಅನುದಾನ ನೀಡುತ್ತದೆ. ಉಳಿದ 80%ರಷ್ಟು ಅನುದಾನವನ್ನು ರಾಜ್ಯ ಸರಕಾರವೇ ಭರಿಸುತ್ತದೆ ಎಂದು ಸ್ವತಃ ಮುಖ್ಯಮಂತ್ರಿ ಅವರೇ ಹೇಳಿದ್ದಾರೆ. ಹೀಗಿದ್ದ ಮೇಲೆ ದರ ಏರಿಕೆ ಮಾಡಿದ್ದು ಯಾರು ಕೇಂದ್ರ ಸರ್ಕಾರವ ಅಥವಾ ರಾಜ್ಯ ಸರ್ಕಾರ ಎಂದು ಪ್ರಶ್ನಿಸಿದರು.

ಕರ್ನಾಟಕದಲ್ಲಿ ಮಾತ್ರ ಮೆಟ್ರೋ ಪ್ರಯಾಣ ಪದೇ ಪದೇ ದೊಡ್ಡ ಮೊತ್ತದಲ್ಲಿ ಏರಿಕೆಯಾಗುತ್ತಿದೆ. ಅದೇ ರೀತಿ ಬೇರೆ ರಾಜ್ಯಗಳ ಮೆಟ್ರೋ ದರ ಯಾಕೆ ಏರಿಕೆ ಆಗುತ್ತಿಲ್ಲ? ಅಲ್ಲಿನ ಸರ್ಕಾರಗಳು ಹೇಗೆ ನಡೆಸುತ್ತಿವೆ ಎಂಬುದನ್ನು ಇವರು ಹೇಳಬೇಕಲ್ಲವೇ. ಬೇರೆಯದಕ್ಕೆಲ್ಲ ನಮ್ಮ ಪಾಲು ಜಾಸ್ತಿ ಎನ್ನುವವರು ಪ್ರಯಾಣ ದರದ ವಿಷಯದಲ್ಲಿ ಯಾಕೆ ಉಲ್ಟಾ ಹೊಡೆಯುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಕಳೆದ ಎರಡೂವರೆ ವರ್ಷದಿಂದ ಇವರು ಮಾಡುತ್ತಿರುವ ತಪ್ಪು ನಿರ್ಣಯಗಳಿಂದ ಜನ ರೋಸಿ ಹೋಗಿದ್ದಾರೆ. ಅದನ್ನು ಕೇಂದ್ರದ ತಲೆಗೆ ಕಟ್ಟುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಿಕೊಂಡು ಬರುತ್ತಿದ್ದಾರೆ. ಜನರು ಎಚ್ಚೆತ್ತುಕೊಳ್ಳಬೇಕು ಎಂದು ನಾನು ಹೇಳಲು ಇಚ್ಛಿಸುತ್ತೇನೆ ಎಂದು ಕೇಂದ್ರ ಸಚಿವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಈಗ ಐದು ಗ್ಯಾರಂಟಿ ಕೊಡ್ತಾ ಇದ್ದಾರೆ. ಅವುಗಳಿಂದ ನಾವು ಜನರನ್ನು ಬದುಕಿಸುತ್ತಿದ್ದೇವೆ. ಜನರಿಗೆ ಖರ್ಚು ಮಾಡುವ ಶಕ್ತಿ ಕೊಟ್ಟಿದ್ದೇವೆ. ಕರ್ನಾಟಕದಲ್ಲಿ ತಲಾ ಆದಾಯ ಹೆಚ್ಚಳವಾಗಿದೆ ಎಂದೆಲ್ಲಾ ಹೇಳುತ್ತಿದ್ದಾರೆ. ಅದಕ್ಕೆ ಇರಬೇಕು, ಜನರಲ್ಲಿ ದುಡ್ಡಿದೆ ಎಂದು ಮನಸ್ಸೋ ಇಚ್ಛೆ ತೆರಿಗೆ ಹಾಕುವುದು ಎಂದು ಕೇಂದ್ರ ಸಚಿವರು ಟೀಕಾಪ್ರಹಾರ ನಡೆಸಿದರು.

ಗ್ಯಾರಂಟಿಗಳಿಂದ ಜನರ ಸ್ವಾಭಿಮಾನದ ಬದುಕು ನಡೆಸುತ್ತಿದ್ದಾರೆ, ಸಂತೋಷವಾಗಿದ್ದಾರೆ. ಏನೇ ದರ ಏರಿಕೆ ಮಾಡಿದರೂ ಜನರು ಸಂತೋಷವಾಗಿ ಕೊಡುತ್ತಾರೆ ಎನ್ನುವ ಭಾವನೆ ಸರ್ಕಾರಕ್ಕೆ ಬಂದ ಹಾಗಿದೆ. ಮುಖ್ಯಮಂತ್ರಿಗಳು ಸಹ ಆ ಭ್ರಮೆಯಲ್ಲಿ ಇದ್ದಾರೆ. ಹೀಗಾಗಿ ಜನರೇ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಕುಮಾರಸ್ವಾಮಿ ಹೇಳಿದರು.

ಡಾ.ಕೆ.ಬಿ.ಲಿಂಗರಾಜು ಅವರಿಗೆ ಅಭಿನಂದನೆ...



ಕರ್ನಾಟಕ ರಾಜ್ಯ ಮುಕ್ತ ವಿವಿಯಿಂದ ಗೌರವ ಡಾಕ್ಟರೇಟ್ ಪಡೆದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು ಅವರನ್ನು ಅಭಿನಂದಿಸಲಾಯಿತು. ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ನವೀನ್, ಮುಖ್ಯ ಶಿಕ್ಷಕ ಲೋಹಿತೇಶ್, ಎಸ್‌ಡಿಎಂಸಿ ಅಧ್ಯಕ್ಷ ನಂಜೇಗೌಡ ಇನ್ನಿತರರು ಉಪಸ್ಥಿತರಿದ್ದರು.

ಬಸ್ ಫ್ರೀ ನೀಡಿ ದೊಡ್ಡ ಸಮಸ್ಯೆಯಾಗಿದೆ!

ಬಿಜೆಪಿ ನಾಯಕರ ಮುಂದೆಯೇ ಗ್ಯಾರಂಟಿ ಬಗ್ಗೆ ವ್ಯಂಗ್ಯವಾಡಿದ ಕಾಂಗ್ರೆಸ್ ಶಾಸಕ...



ಆರ್.ವಿ. ದೇಶಪಾಂಡೆ

ಕಾರವಾರ, ಫೆ.7: ಉತ್ತರ ಕನ್ನಡದ ದಾಂಡೇಲಿಯಲ್ಲಿ ನಡೆದ ರೈಲ್ವೆ ಇಲಾಖೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್‌ನ ಹಿರಿಯ ಶಾಸಕ ಮತ್ತು ಮಾಜಿ ಸಚಿವ ಆರ್.ವಿ. ದೇಶಪಾಂಡೆ ಬಿಜೆಪಿ ನಾಯಕರನ್ನ ಹೊಗಳಿ, ಗ್ಯಾರಂಟಿಗಳ ಬಗ್ಗೆ ವ್ಯಂಗ್ಯವಾಡಿದ್ದಾರೆ. ಇದೀಗ ಈ ಹೇಳಿಕೆ ರಾಜ್ಯ ರಾಜಕೀಯದಲ್ಲಿ ಸಂಚಲನ ಸೃಷ್ಟಿಸಿದೆ. ಸ್ವಪಕ್ಷದ 'ಶಕ್ತಿ' ಯೋಜನೆ ಬಗ್ಗೆ ಅವರು ಮಾಡಿರುವ ವ್ಯಂಗ್ಯ ಮತ್ತು ಬಿಜೆಪಿ ಸಚಿವರ ಬಗ್ಗೆ ತೋರಿದ ಪ್ರೀತಿ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಕಾರ್ಯಕ್ರಮದಲ್ಲಿ ಭಾಷಣ ಮಾಡುವ ವೇಳೆ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರ ಕಾರ್ಯವೈಖರಿಯನ್ನು ದೇಶಪಾಂಡೆ ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಸೋಮಣ್ಣ ಅವರು ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಶ್ರಮದಿಂದಲೇ ಇಂದು ದಾಂಡೇಲಿ–ಅಳ್ನಾವರ ರೈಲು ಸಂಚಾರ ಮತ್ತೆ ಶುರುವಾಗಿದೆ ಎಂದಿದ್ದಾರೆ.

ಪಕ್ಷ ಬೇರೆಯಾಗಿದ್ದರೂ ಸತ್ಯ ಹೇಳಲು ನಾನು ಹಿಂಜರಿಯುವುದಿಲ್ಲ ಎಂದು ಹೇಳಿದ್ದಾರೆ. ಇದೇ ವೇಳೆ ತಮ್ಮ ಪಕ್ಷ ತಂದಿರುವ ಗ್ಯಾರಂಟಿಗಳನ್ನು ಟೀಕಿಸಿದ್ದಾರೆ. ಸಿದ್ದರಾಮಯ್ಯ ಮಹಿಳೆಯರಿಗೆ ಬಸ್ ಫ್ರೀ ಮಾಡಿದ್ದಾರೆ. ಈಗ ಯಾವುದೇ ಬಸ್ ನೋಡಿದರೂ ಫುಲ್ ಇರುತ್ತವೆ. ಗಂಡಸರು ಮತ್ತು ಮಕ್ಕಳಿಗೆ ಬಸ್ ಹತ್ತಲು ಜಾಗವೇ ಇಲ್ಲದಂತಾಗಿದೆ. ಬಸ್‌ನಲ್ಲಿ ಅಪ್ಪಿತಪ್ಪಿ ಮಹಿಳೆಯರಿಗೆ ಕೈ ತಗುಲಿದರೆ ಸಾಕು, ಅಲ್ಲಿಗೆ ಹೆಣವೇ ಬಿದ್ದಂತೆ! ಗಂಡಸರು ಆ ಕಡೆ ಈ ಕಡೆ ನೋಡಿಕೊಂಡು ಬಹಳ ಎಚ್ಚರಿಕೆಯಿಂದ ಓಡಾಡಬೇಕಾದ ಪರಿಸ್ಥಿತಿ ಇದೆ ಎಂದು ತಮಾಷೆಯಾಗಿ ಹೇಳಿದರು.

ಆರ್.ವಿ. ದೇಶಪಾಂಡೆ ಅವರು ಕಾಂಗ್ರೆಸ್‌ನ ಅತ್ಯಂತ ಹಿರಿಯ ನಾಯಕರಾಗಿದ್ದರೂ, ಇತ್ತೀಚಿನ ದಿನಗಳಲ್ಲಿ ಸರ್ಕಾರದ ಕೆಲವು ನಿರ್ಧಾರಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಿರುವುದು ಕಂಡುಬರುತ್ತಿದೆ. ವಿಶೇಷವಾಗಿ ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕೆಲಸಗಳಿಗೆ ಹಿನ್ನಡೆಯಾಗುತ್ತಿದೆ ಎಂಬ ಆತಂಕವನ್ನು ಅವರು ಈ ಹಿಂದೆಯೂ ಪರೋಕ್ಷವಾಗಿ ವ್ಯಕ್ತಪಡಿಸಿದ್ದರು. ಈಗ ನೇರವಾಗಿ ಹಾಸ್ಯದ ರೂಪದಲ್ಲಿ ಶಕ್ತಿ ಯೋಜನೆಯ ಅಡ್ಡ ಪರಿಣಾಮಗಳ ಬಗ್ಗೆ ಮಾತನಾಡಿದ್ದಾರೆ.

ಇಂದು ಶ್ರದ್ಧಾಂಜಲಿ ಸಭೆ

ಮೈಸೂರು: ಎಐಟಿಯುಸಿ ರಾಜ್ಯಾಧ್ಯಕ್ಷ ಅನಂತ ಸುಬ್ಬರಾವ್ ನಿಧನರಾದ ಹಿನ್ನೆಲೆಯಲ್ಲಿ ಮೈಸೂರಿನ ಎಐಟಿಯುಸಿ ಜಿಲ್ಲಾ ಸಮಿತಿ, ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್, ಎಲ್‌ಐಸಿ ಎಂಪ್ಲಾಯೀಸ್ ಯೂನಿಯನ್ ವತಿಯಿಂದ ಶ್ರದ್ಧಾಂಜಲಿ ಸಭೆಯನ್ನು ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಕಿರು ಸಭಾಂಗಣದಲ್ಲಿ, ಫೆ.8ರಂದು ಏರ್ಪಡಿಸಲಾಗಿದೆ. ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜಯ ಭಾಸ್ಕರ್ ಹಾಗೂ ಮುಖಂಡರು ಭಾಗವಹಿಸಲಿದ್ದಾರೆ.

ಆದರ್ಶ ಮಹಿಳೆ ರಮಾಬಾಯಿ ಅಂಬೇಡ್ಕರ್ ಜಯಂತಿ



ಭೀಮಬಲ ಬಳಗದ ಮಹಿಳಾ ತಂಡದಿಂದ 'ಆದರ್ಶ ಮಹಿಳೆ ರಮಾಬಾಯಿ ಅಂಬೇಡ್ಕರ್' ಜಯಂತಿಯನ್ನು ಮಹಿಳಾ ವಿದ್ಯಾರ್ಥಿನಿಲಯದಲ್ಲಿ ಆಚರಿಸಲಾಯಿತು. ದಿನಮಣಿ ಅಧ್ಯಕ್ಷತೆ ವಹಿಸಿದ್ದರು. ಮುಕ್ತ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರದ ಮುಖ್ಯಸ್ಥೆ ಡಾ.ರಮ್ಯಾ.ಎಸ್, ಭೀಮ ಬಲ ಬಳಗದ ಮಹಿಳಾ ತಂಡದ ಮುಖಂಡರಾದ ವೇದಾವತಿ, ನಗರಪಾಲಿಕೆ ಮಾಜಿ ಸದಸ್ಯರಾದ ಡಾ.ಅಶ್ವಿನಿ ಶರತ್, ಶುಭಲಕ್ಷ್ಮಿ, ನಿವೃತ್ತ ಶಿಕ್ಷಕಿ ಎನ್.ರತ್ನ ರಾಜಪ್ಪ, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಅಧಿಕಾರಿಗಳು, ಪುಷ್ಪ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಮೈಂದಪಂಡ ತಿಮ್ಮಣ್ಣ ನಿಧನ



ಮೈಸೂರು,ಫೆ.7– ಮೈಸೂರಿನ ಗೋಕುಲಂ 3ನೇ ಹಂತದ ನಿವಾಸಿ ಮೈಂದಪಂಡ ತಿಮ್ಮಣ್ಣ (ರಾಜ) ಶನಿವಾರ ನಿಧನರಾದರು. ಮೃತರಿಗೆ 71 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಪಾರ್ವತಿ (ಪಾಲಿ), ಪುತ್ರ ಸಜನ್ ನಂಜಪ್ಪ, ಪುತ್ರಿ ಸಿಂಪು ದೇವಯ್ಯ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ (ಫೆ.8ರ ಭಾನುವಾರ) ಮಧ್ಯಾಹ್ನ 2 ಗಂಟೆಗೆ ಮೈಸೂರಿನ ಗೋಕುಲಂ ಚಿರಶಾಂತಿಧಾಮದಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೇಂದ್ರ, ರಾಜ್ಯ ಸರ್ಕಾರದಿಂದ ರೈತ ವಿರೋಧಿ ನೀತಿ

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮ್ಮೇಳನದಲ್ಲಿ ಬೇಸರ



ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ರಾಮಸ್ವಾಮಿ ವೃತ್ತದಿಂದ ಬುದ್ಧ ವಿಹಾರದವರೆಗೆ ಮೆರವಣಿಗೆ ನಡೆಸಲಾಯಿತು.

ಮೈಸೂರು, ಫೆ.7(ಜಿಎ)–ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನಿರಂತರವಾಗಿ ರೈತ ವಿರೋಧಿ ನೀತಿಗಳನ್ನು ಅನುಸರಿಸುತ್ತಿದ್ದಾರೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ಕಾರ್ಯದರ್ಶಿ ಹೆಚ್.ಆರ್.ನವೀನ್ ಕುಮಾರ್ ಆಪಾದಿಸಿದರು.

ಮೈಸೂರಿನ ಬುದ್ಧ ವಿಹಾರದ ಆವರಣದಲ್ಲಿ ಗೋಮಾಳ, ಅರಣ್ಯ ಭೂಮಿ, ಸರ್ಕಾರಿ ಜಾಗಗಳಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಸಾಗುವಳಿ ಪತ್ರಕ್ಕೆ ಒತ್ತಾಯಿಸಿ ಜಿಲ್ಲೆಯ ಎಲ್ಲಾ ಜಮೀನುಗಳನ್ನು ಪಕ್ಕಾ ಪೋಡು ಮಾಡಲು ಆಗ್ರಹಿಸಿ, ಬೆಳೆಗಳಿಗೆ ನ್ಯಾಯಯುತ ಬೆಲೆ ನಿಗದಿ ಮತ್ತು ರೈತರ ಎಲ್ಲಾ ರೀತಿಯ ಸಾಲವನ್ನಾ ಮಾಡಲು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಆಯೋಜಿಸಿದ್ದ 3ನೇ ಮೈಸೂರು ಜಿಲ್ಲಾ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇಂದು ಭಾರತವನ್ನು ವಿಶ್ವಗುರು ಎಂದು ಎಲ್ಲೆಡೆ ಪ್ರಚಾರ ಮಾಡುತ್ತಿದ್ದಾರೆ. ಅದನ್ನು ಕೇಳಿದಾಗ ನಿಜವಾಗಿಯೂ ಸಂತೋಷವಾಗುತ್ತದೆ. ಮತ್ತೊಂದೆಡೆ ದೇಶದಾದ್ಯಂತ ರೈತರು ನಿರಂತರವಾಗಿ ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ. ಇಂದಿನ ನಿಜವಾದ ಅಭಿವೃದ್ಧಿ ಎಂದರೆ ಈ ಹಿಂದೆ ಜನರು ಮೂರು ಹೊತ್ತು ಊಟ ಮಾಡುತ್ತಿದ್ದರು. ಈಗ ಎರಡು ಹೊತ್ತಿನ ಊಟ ಮಾಡುತ್ತಿದ್ದಾರೆ. ರೈತರು ಸಾಲ ತೀರಿಸಲು ಸಾಧ್ಯವಾಗದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದೇ ಇಂದಿನ ಅಭಿವೃದ್ಧಿಯಾಗಿದೆ ಎಂದರು.


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೇವರಾಜ ಅರಸು ಅವರ ಅವತಾರ ಎಂದು ಹೇಳಿಕೆ ನೀಡುತ್ತಿದ್ದಾರೆ. ಆದರೆ, ದೇವರಾಜ ಅರಸು ಅವರು ಉಳುವವನೇ ಭೂಮಿ ಒಡೆಯ ಕಾಯ್ದೆ ತಂದು ಉಳುವವನನ್ನು ಭೂಮಿ ಒಡೆಯ ಮಾಡಿದ್ದಾರೆ. ಭೂ ಸುಧಾರಣ ಕಾಯ್ದೆ ತಂದಿದ್ದು, ಕರ್ನಾಟಕದಲ್ಲಿ ರೈತರ ಜಮೀನನ್ನು ರೈತರು ಮಾತ್ರ ಖರೀದಿ ಮಾಡಬೇಕು ಎಂದು ಕಾನೂನು ರೂಪಿಸಿದ್ದರು. ಈಗ ಅದಕ್ಕೆ ತಿದ್ದುಪಡಿ ಮಾಡಿ ರೈತರ ಭೂಮಿಯನ್ನು ಯಾರು ಬೇಕಾದರೂ ಖರೀದಿ ಮಾಡಬಹುದು ಎಂದು ಮಾಡಿರುವುದರಿಂದ ಇಂದು ಕೃಷಿ ಯೋಗ್ಯ ಭೂಮಿಯಲ್ಲಿ ರಸ್ತೆ ನಿರ್ಮಾಣ ಮಾಡುತ್ತಿದ್ದು, ಕೃಷಿ ಭೂಮಿಯನ್ನು ಕಬ್ಜಾ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಇತ್ತೀಚೆಗೆ ಬೆಂಗಳೂರಿನ ದೇವನಹಳ್ಳಿ ಪಕ್ಕದಲ್ಲಿ 1777 ಎಕರೆ ಭೂಮಿಯನ್ನು ರೈತರಿಂದ ಪಡೆದುಕೊಂಡು ಖಾಸಗಿ ಕಾರ್ಖಾನೆಗೆ ನೀಡಲು ಸರ್ಕಾರ ಮುಂದಾಗಿತ್ತು. ಈ ವೇಳೆ 1300 ದಿನ ನಿರಂತರ ಹೋರಾಟ ಮಾಡಿದ ಪ್ರತಿಫಲ ಅದನ್ನು ಸರ್ಕಾರ ಡಿನೋಟಿಫಿಕೇಷನ್ ಮಾಡಿ ಮತ್ತೆ ರೈತರಿಗೆ ನೀಡಿದೆ ಎಂದು ತಿಳಿಸಿದರು.

ಹೀಗೆ ಒಂದೆಡೆ ಭೂಮಿಗಾಗಿ ಹೋರಾಟ ನಡೆದರೆ ಮತ್ತೊಂದೆಡೆ ಬೆಳೆದ ಬೆಳೆಗೆ ಬೆಂಬಲ ನೀಡಿ ಎಂಬ ಸ್ಥಿತಿಗೆ ರೈತರು ಇಂದು ತಲುಪಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು 12 ವರ್ಷಗಳ ಹಿಂದೆ ನನಗೆ ಅಧಿಕಾರ ನೀಡಿ, ಅಧಿಕಾರಕ್ಕೆ ಬಂದ ನಂತರ ರೈತರ ಆದಾಯವನ್ನು ದ್ವಿಗುಣ ಮಾಡುತ್ತೇವೆ ಎಂದಿ ಹೇಳಿಕೆ ನೀಡಿದ್ದರು. ಅದನ್ನು ನಂಬಿಕೊಂಡು ನಾವೆಲ್ಲರೂ ಅವರಿಗೆ ಓಟ್ ಹಾಕಿದ್ದಾಯಿತು. ಆದರೆ, 12 ವರ್ಷ ದಲ್ಲಿ ಮೋದಿ ಸರ್ಕಾರ ರೈತರ ಆದಾಯ ವನ್ನು ದ್ವಿಗುಣದ ಬದಲು ಕಡಿತ ಗೊಳಿಸಿದೆ. ಮತ್ತೊಂದೆಡೆ ದೇಶದ ಬಜೆಟ್ ನಿಂದ ಏನಾದರೂ ಸಿಗುತ್ತದೆ ಎಂದು ಕಾಯಲಾಗಿತ್ತು. ಅದರೆ, ಕೇಂದ್ರ ವಿತ್ತ ಸಚಿವೆ ನಿರ್ಮಾಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ರಸಗೊಬ್ಬರ, ಕೃಷಿ ಉಪಕರಣ ಹಾಗೂ ಕೀಟನಾಶಕಕ್ಕೆ ಸಬ್ಸಿಡಿ ನೀಡುವ ಬದಲು ಬೆಲೆ ಏರಿಕೆ ಮಾಡಿದ್ದಾರೆ. ಹೀಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರಂತರವಾಗಿ ರೈತ ವಿರೋಧ ನೀತಿಯನ್ನು ವಿರೋಧಿಸುತ್ತಿದ್ದಾರೆ ಎಂದು ವಿವರಿಸಿದರು.

ಸಭೆಗೂ ಮುನ್ನ ಮೈಸೂರಿನ ರಾಮಸ್ವಾಮಿ ವೃತ್ತದಿಂದ ಬುದ್ಧ ವಿಹಾರ್ ವರೆಗೂ ಮೆರವಣಿಗೆ ನಡೆಸಿದರು. ಸಭೆಯಲ್ಲಿ ಮೈಸೂರು ಜಿಲ್ಲಾ ಸಮಿತಿ ಅಧ್ಯಕ್ಷ ಚಿಕ್ಕಣ್ಣಗೌಡ, ಕೆ.ಬಸವರಾಜು, ಸಿಐಟಿಯೂ ಅಣ್ಣಪ್ಪ, ದೇವರಾಜಮ್ಮ,ಎಸ್.ಜಗದೀಶ್ ಸೂರ್ಯ, ಚಂದ್ರ ಶೇಖರ್, ಬೀರೇಶ್, ದೂರ ಲೋಕೇಶ್, ಸಣ್ಣನಾಯಕ, ವೀರಭದ್ರಪ್ಪ, ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ, ನಾಡಿದ್ದು ವಿವಿಧೆಡೆ ನೀರು ವ್ಯತ್ಯಯ



ಮೈಸೂರು, ಫೆ.7(ಎಸ್‌ಪಿಎನ್)– ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಾಗೂ 3ನೇ ಹಂತದ ಯಂತ್ರಾಗಾರಕ್ಕೆ ವಿದ್ಯುತ್ ಸರಬರಾಜು ಮಾಡುವ ಬೆಳಗೊಳ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣೆ ಹಮ್ಮಿಕೊಳ್ಳಲಾಗಿದೆ.

ಈ ಹಿನ್ನಲೆಯಲ್ಲಿ ಫೆ.9 ಮತ್ತು 10ರಂದು ನೀರಿನ ಸರಬರಾಜಿನಲ್ಲಿ ವ್ಯತ್ಯಯವಾಗುವ ಪ್ರದೇಶಗಳಾದ ಸಿಎಸ್‌ಆರ್ ಮತ್ತು ಹೆಚ್‌ಎಲ್‌ಆರ್ ಪ್ರದೇಶಗಳು, ವಾರ್ಡ್ ನಂ.1ರಿಂದ 7, ವಾರ್ಡ್ ನಂ.20, 23, 38, ವಾರ್ಡ್ ನಂ.42ರಿಂದ 45, ವಾರ್ಡ್ ನಂ.47 ಮತ್ತು ಡಿಎಂಎ ಪ್ರದೇಶಗಳಾದ ಹೆಬ್ಬಾಳ, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆ.ಜಿ.ಕೊಪ್ಪಲು, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ವಿನಾಯಕನಗರ, ಬನ್ನಿಮಂಟಪ, ಎಬಿಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇ ಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ, ಭಾಗಶಃ ಎನ್.ಆರ್.ಮೊಹಲ್ಲಾ, ಭಾಗಶಃ ಪ್ರದೇಶಗಳಾದ ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆ.ಹೆಚ್.ಬಿ. ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತ ಹಾಗೂ ಇತರೆ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಪಶ್ಚಿಮ ವಿಭಾಗ) ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿನಂದನೆ...



ಮೈಸೂರಿನ ಕುವೆಂಪುನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ನೂತನ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡ ಅಂಕಣಕಾರರೂ ಆದ ಡಾ.ಗುಬ್ಬಿಗೂಡು ರಮೇಶ್ ಅವರನ್ನು ಅಕ್ಷಯ ಆಹಾರ ಜೋಳಿಗೆ ಫೌಂಡೇಶನ್ ಸಂಸ್ಥಾಪಕರಾದ ರಾಜೇಂದ್ರ, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಜ್ಞಾನ ಬುತ್ತಿಯ ಕಾರ್ಯದರ್ಶಿ ಬಾಲಕೃಷ್ಣ ಅಭಿನಂದಿಸಿದರು. ಈ ಸಂದರ್ಭದಲ್ಲಿ ನಿವೃತ್ತ ಉಪನಿರ್ದೇಶಕ ಚಿದಾನಂದಕುಮಾರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.2.2026 ಭಾನುವಾರ, ಮಳೆ ನಕ್ಷತ್ರ: ಧನಿಷ್ಠ 6.02.2026 ರಿಂದ 18.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಸ್ವಾತಿ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳಲ್ಲಿ ಕಂಡುಬರುವ ಸೆರೆಬ್ರಲ್ ಪಾಲ್ಸಿ ಹಾಗೂ ಕುಂಠಿತ ಬೆಳವಣಿಗೆ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ಗಂಟೆಯಿಂದ.
- **ಸುಯೋಗ್ ಆಸ್ಪತ್ರೆ :** ಉಚಿತ ಹೃದ್ರೋಗ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣ ನಗರ, ಬೆಳಗ್ಗೆ 10 ರಿಂದ.
- **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ :** ವಚನ ಗಾಯನ ಸ್ಪರ್ಧೆ, ಉದ್ಘಾಟನೆ : ಸಂತ ಶಿಶುನಾಳ ಷರೀಫ ಪ್ರಶಸ್ತಿ ಪುರಸ್ಕೃತ ಪ್ರೊ. ಎಸ್. ಮಲ್ಲಣ್ಣ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ಉಪಸ್ಥಿತರು : ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶೋಭರಾಣಿ ಜೈ ಪ್ರಕಾಶ್, ಸ್ಥಳ: ಶ್ರೀ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 10ಕ್ಕೆ.
- **ಕುಮಾರವ್ಯಾಸ ಗುರುಕುಲ ಮತ್ತು ಕಾವ್ಯರಂಜಿನಿ ಸಭಾ :** ಕುಮಾರವ್ಯಾಸ ಜಯಂತಿ ಮತ್ತು ಹಿರಿಯ ಗಮಕಿ ಹೆಚ್.ಎಸ್. ಸತ್ಯನಾರಾಯಣ ಅವರ ಸಂಸ್ಮರಣೆ ಕಾರ್ಯಕ್ರಮ, ವಾಚನ: ಶ್ರೀಮತಿ ಭಾಗ್ಯಲಕ್ಷ್ಮಿ, ವ್ಯಾಖ್ಯಾನ : ಫಣಿ ಶ್ರೀನಿವಾಸ್, ಸ್ಥಳ: 1315/2, ಹರಿಪ್ರಿಯ, 3ನೇ ಅಡ್ಡ ರಸ್ತೆ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30 ರಿಂದ.
- **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ಯುವ ಜನತೆಗಾಗಿ ಗಾಂಧಿ ಮತ್ತು ಅಂಬೇಡ್ಕರ್ ಸಿದ್ಧಾಂತಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಅಧ್ಯಕ್ಷತೆ : ಚಾಮರಾಜನಗರ ಶಾಂತಲಾ ಕಲಾ ತಂಡದ ಅಧ್ಯಕ್ಷ ವೆಂಕಟರಾಜು, ಸ್ಥಳ: ಶ್ರೀರಂಗ ವೇದಿಕೆ, ರಂಗಾಯಣ, ಬೆಳಗ್ಗೆ 11ಕ್ಕೆ.
- **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಮಧ್ವ–ಪುರಂದರ ನಮನ, 'ವರಾಹಪುರಾಣ ಮತ್ತು ಸ್ಕಂದಪುರಾಣ' ವಿಶ್ಲೇಷಣೆ ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ.
- **ರಂಗಾಂತರಂಗ ಮೈಸೂರು :** ಸಂಜೆ 5.30ಕ್ಕೆ ರಂಗಾಂತರಂಗ ಮಕ್ಕಳ ನಾಟಕೋತ್ಸವ, ಮಧ್ಯಾಹ್ನ 2.30ಕ್ಕೆ ದೊಡ್ಡಹುಂಡಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ವಿದ್ಯಾರ್ಥಿಗಳಿಂದ ತಿಕ್ಕಲು ರಾಜ ತಿರುಬೋಕಿ ರಾಜ್ಯ ನಾಟಕ ಪ್ರದರ್ಶನ, ರಚನೆ : ಸಂತೋಷ್ ಗುಡ್ಡಿಯಂಗಡಿ, ನಿರ್ದೇಶನ : ಕೆ.ಎಂ. ಕೀರ್ತಿರಾಜ್, ಸಂಜೆ 6ಕ್ಕೆ ಲಂಕೇಶ್ ಅವರ ಕಥೆಯಾಧಾರಿತ ಮುಟ್ಟಿಸಿಕೊಂಡವನು ನಾಟಕ ಪ್ರದರ್ಶನ, ನಿರ್ದೇಶನ : ಕೆ.ಎಂ. ಕೀರ್ತಿರಾಜ್, ಸ್ಥಳ: ಕಿರು ರಂಗ ಮಂದಿರ.
- **ಕೃಷ್ಣೆ ನೃತ್ಯ ಶಾಲೆ :** ಕು. ಎನ್.ಎ. ಮನಸ್ವಿ ಅವರ ಭರತನಾಟ್ಯ ರಂಗ ಪ್ರವೇಶ, ಉಪಸ್ಥಿತರು : ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಮೈಸೂರು ವಿವಿ ನೃತ್ಯ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ಶೀಲಾ ಶ್ರೀಧರ್, ಡಾ. ಸುಕನ್ಯಾ ಪ್ರಭಾಕರ್, ಸ್ಥಳ: ಕಲಾಂದಿಕಾ ಸಭಾಂಗಣ, ವಾಸುದೇವ ಭವನ, ಸರಸ್ವತಿಪುರಂ, ಸಂಜೆ 6ಕ್ಕೆ.
- **ರಾಗ ವೈಭವ:** ವಿದ್ವಾನ್ ಅಭಿಷೇಕ್ ರಘುರಾಮ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಹೆಚ್.ಎಂ.ಸ್ಮಿತಾ–ವಯೋಲಿನ್, ವಿದ್ವಾನ್ ಕಿಶೋರ್ ರಮೇಶ್–ಮೃದಂಗ, ವಿದ್ವಾನ್ ಸುಮುಖ್ ಕಾರಂತ್–ಖಂಜೀರಾ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ ಹಾಗೂ ಮಹಾಶಿವರಾತ್ರಿಯ ಪ್ರಯುಕ್ತ ಗುಜರಾತಿನ ಪ್ರಸಿದ್ಧ ಶ್ರೀ ಸೋಮನಾಥ ದಿವ್ಯ ದರ್ಶನ, ಸಾನ್ನಿಧ್ಯ: ರಾಜಯೋಗಿನಿ ಬ್ರಹ್ಮಾಕುಮಾರಿ ಡಾ. ಲಕ್ಷ್ಮೀಜಿ, ಉದ್ಘಾಟನೆ: ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ನಿಶ್ಚಲಾನಂದನಾಥ ಮಹಾಸ್ವಾಮೀಜಿ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕರಾದ ಕೆ. ಹರೀಶ್‌ಗೌಡ, ಡಿ. ರವಿಶಂಕರ್, ಕರಾಮುವಿವಿ ಕುಲಪತಿ ಡಾ. ಶರಣಪ್ಪ ವಿ. ಹಲಸೆ, ಹಿರಿಯ ನ್ಯಾಯವಾದಿ ಅಶೋಕ್ ಹಾರನಹಳ್ಳಿ, ಆದಿಚುಂಚನಗಿರಿ ವಿವಿ ಕುಲಪತಿ ಡಾ. ಸಿ.ಕೆ. ಸುಬ್ಬರಾಯ, ಈಶ್ವರೀಯ ಪ್ರಶಸ್ತಿ ಪ್ರದಾನ : ಸಾಹಿತಿ ಕೆ.ಸಿ.ಶಿವಪ್ಪ, ನೃತ್ಯಪಟು ಡಾ. ವಸುಂಧರಾ ದೊರೆಸ್ವಾಮಿ, ಚಲನಚಿತ್ರ ಹಿನ್ನೆಲೆ ಗಾಯಕಿ ಕು. ಅಮೂಲ್ಯ ಅವರಿಂದ ಗಾಯನ, ಸ್ಥಳ: ಐಶ್ವರ್ಯ ಪೆಟ್ರೋಲ್ ಬಂಕ್ ಎದುರು, ಹುಣಸೂರು ರಸ್ತೆ, ಸಂಜೆ 6.30ಕ್ಕೆ.
- **ಶ್ರೀ ಘನ ನೀಲ ಸಿದ್ದಪ್ಪಾಜಿ ಸ್ವಾಮಿ ದೇವಸ್ಥಾನ :** 5ನೇ ವರ್ಷದ ಜಾತ್ರಾ ಮಹೋತ್ಸವ, ಸಂಜೆ 6.30ಕ್ಕೆ ಗಣಪತಿ ಹೋಮ, ಸ್ಥಳ: ದೇವಸ್ಥಾನ, ಮಂಚೇಗೌಡನಕೊಪ್ಪಲು.
- **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವಿಗಡ ವಿಕ್ರಮರಾಯ ನಾಟಕ ಪ್ರದರ್ಶನ, ರಚನೆ : ಸಂಸ, ನಿರ್ದೇಶನ : ಸಾಲಿಯಾನ್ ಉಮೇಶ್ ನಾರಾಯಣ, ಸ್ಥಳ: ವನರಂಗ, ರಂಗಾಯಣ, ಸಂಜೆ 6.30ಕ್ಕೆ.
- **ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ :** ವಿದ್ವಾನ್ ಜಗದೀಶ ಶರ್ಮಾ ಅವರಿಂದ ಮಹಾಶಿವರಾತ್ರಿ ವಿಷಯ ಕುರಿತು ಪ್ರವಚನ, ಸ್ಥಳ: ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಶೇಷಾದ್ರಿ ಅಯ್ಯರ್ ರಸ್ತೆ, ಲಕ್ಷ್ಮೀಪುರಂ, ಸಂಜೆ 6.45ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಟಿ. ಗುರುಬಸಪ್ಪ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಹಂಸಿನಿ. ಎಸ್.ಕುಮಾರ್, ವ್ಯಾಖ್ಯಾನ: ಡಾ. ಹೆಚ್. ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ– ಡಾ.ಎಸ್.ಎಲ್.ಭೈರಪ್ಪ ಅವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.05 ಗರ್ಭಕಂಠದ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.40 ನಮ್ಮ ಆರೋಗ್ಯ–ವಿಶ್ವ ರಕ್ತಹೀನತೆ ಜಾಗೃತಿ ದಿನದ ಅಂಗವಾಗಿ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್‌ನ ಮೈಸೂರು ಘಟಕದ ಅಧ್ಯಕ್ಷರಾದ ಡಾ.ಶಿವು.ಪಿ, ಕಾರ್ಯದರ್ಶಿಗಳಾದ ಡಾ.ಅನುಷ ರಾಜ್.ಕೆ ಹಾಗೂ ಪೀಡಿಯಾಟ್ರಿಕ್ಸ್ ಹೆಮೆಟೋ ಆಂಕಾಲಜಿಸ್ಟ್ ಡಾ.ತರಂಗಿಣಿ ದುರ್ಗಪ್ಪ ಅವರೊಂದಿಗೆ ಮಾತುಕತೆ. ವಿಷಯ: ಮಕ್ಕಳಲ್ಲಿ ರಕ್ತಹೀನತೆ – ಲಕ್ಷಣಗಳು ಮತ್ತು ಚಿಕಿತ್ಸೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.10 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟ, ಪ್ರಸ್ತುತಿ –ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಇಂಗ್ಲೀಷ್, ಭಾಗವಹಿಸುವವರು–ಮರಿಮಲ್ಲಪ್ಪನವರ ಶಾಲೆಯಲ್ಲಿ ಶಿಕ್ಷಕರಾಗಿರುವ ಜಿ.ಸಿದ್ದೇಶ್ವರ ಪ್ರಸಾದ್ ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ – ಆನಂದನಗರ ವಾಗ್ದೇವಿ ಮಹಿಳಾ ತಂಡದ ಸದಸ್ಯರಿಂದ ಕಾರ್ಯಕ್ರಮ ವೈವಿಧ್ಯ, 12.35 ಭಕ್ತಿಗೀತೆಗಳು : ಸುಶ್ಮಿತಾ.ಐ.ಎನ್, 12.45 ಜನಪದ ಸಂಗೀತ : ಚಾಮರಾಜನಗರ ಜಿಲ್ಲೆ ರಾಮಸಮುದ್ರದ ಚಿನ್ನಮ್ಮ ಮತ್ತು ಸಂಗಡಿಗರಿಂದ ರಾಗಿಕಲ್ಲಿನ ಪದ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ – ಪ್ರಧಾನಮಂತ್ರಿ Start up India ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು–ನವನೀತ್ ಕೃಷ್ಣ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ– ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕಥೆ, ಭಾಗವಹಿಸಲಿರುವ ಅತಿಥಿ=ಹಿರಿಯ ನಟ ವಿನೋದ್ ರಾಜ್, ಪ್ರಸ್ತುತಿ–ಶ್ರೀಮಾನ್.ಎಸ್., 3.40 ಸಿರಿಗನ್ನಡಂ ಗೆಲ್ಗೆ. ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಚ್.ಎನ್.ಭಾಸ್ಕರ್ –ವೈಯೋಲಿನ್ ವಾದನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ :1.ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ:– ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ – ಜಿ.ಎಸ್. ಶಿವರುದ್ರಪ್ಪ ಕಾವ್ಯಮಿಮಾಂಸೆ ಮತ್ತು ಕಾವ್ಯತತ್ವ ಕುರಿತ ನಿಲುವುಗಳು ಈ ಕುರಿತು ಮಾತನಾಡುತ್ತಾರೆ ಪ್ರಾಧ್ಯಾಪಕರಾದ ಡಾ.ಅಶೋಕ್ ಜಿ.ಎಸ್., 8.00 ಫಸ್ಟ್ ಫಿಲ್ಮ್, ಪ್ರಸ್ತುತಿ–ಎಸ್.ಶ್ರೀಮಾನ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು –ಶ್ರೀನಿವಾಸ ಕಲ್ಯಾಣ ನಾಟಕದ ಹಾಡುಗಳು, 9.30 ರಾಷ್ಟ್ರೀಯ ಕಾರ್ಯಕ್ರಮದಲ್ಲಿ ರೂಪಕ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಎನ್.ಶಿವಾಜಿ– ಕರಗಟ್ಟಂ ಜನಪದ ಸಂಗೀತ, ಡಾ. ನಾಜಿಯಾ ಸಯ್ಯದ್–ಲಘು ಶಾಸ್ತ್ರೀಯ ಗಾಯನ.

ಮೈಸೂರು ಮಿತ್ರ

ಐಸಿಸಿ ಟಿ20 ವಿಶ್ವಕಪ್: ಯುಎಸ್ಎ ವಿರುದ್ಧ ಗೆದ್ದು ಭಾರತದ ಶುಭಾರಂಭ

●ನಾಯಕ ಸೂರ್ಯಕುಮಾರ್ ಯಾದವ್ ಅರ್ಧಶತಕ ●ಮೊಹಮ್ಮದ್ ಸಿರಾಜ್‌ಗೆ 3 ವಿಕೆಟ್ ●ಅಭಿಷೇಕ್ ಶರ್ಮಾ ಹಾಗೂ ಶಿವಂ ದುಬೆ ಗೋಲ್ಡನ್ ಡಕ್

ಮುಂಬೈ, ಫೆ.7(ವಿವಿಹೆಚ್)– ನಾಯಕ ಸೂರ್ಯಕುಮಾರ್ ಯಾದವ್ ಅವರ ಅರ್ಧಶತಕದ ಬಲದಿಂದಾಗಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ (ಯುಎಸ್ಎ) ವಿರುದ್ಧ 29 ರನ್‌ಗಳ ಗೆಲುವು ದಾಖಲಿಸಿತು. ಆ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ 'ಎ' ಗುಂಪಿನ ಇತ್ತಂಡಗಳ ನಡುವೆ ನಡೆದ ಐಸಿಸಿ ಟಿ ಟ್ವೆಂಟಿ ವಿಶ್ವಕಪ್ 2026ರ ಮೂರನೇ ಪಂದ್ಯದಲ್ಲಿ ಟಾಸ್ ಸೋತ ಭಾರತ ತಂಡ ಮೊದಲು ಬ್ಯಾಟಿಂಗ್ ಮಾಡಿತು. ತಂಡದ ಪರ ಆರಂಭಿಕರಾಗಿ ಕಣಕ್ಕಿಳಿದ ಅಭಿಷೇಕ್ ಶರ್ಮಾ ಗೋಲ್ಡನ್ ಡಕ್‌ಔಟ್ ಆಗುವ ಮೂಲಕ ಭಾರತ ಆರಂಭಿಕ ಆಘಾತ ಅನುಭವಿಸಿತು.



ಮೂರು ವಿಕೆಟ್ ಕಿತ್ತ ಸಿರಾಜ್ ಅವರನ್ನು ಟೀಂ ಇಂಡಿಯಾ ಆಟಗಾರರು ಅಭಿನಂದಿಸಿದರು.

ಮತ್ತೋರ್ವ ಆರಂಭಿಕ ಆಟಗಾರ ಇಶಾನ್ ಕಿಶನ್ 20 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ತಿಲಕ್ ವರ್ಮಾ 25 ರನ್‌ಗೆ ಔಟ್ ಆದರು. ಬೆನ್ನಲ್ಲೇ ಶಿವಮ್ ದುಬೆ ಕೂಡ ಗೋಲ್ಡನ್ ಡಕ್‌ಔಟ್ ಆದರು. ಬಳಿಕ ಕಣಕ್ಕಿಳಿದ ರಿಂಕು ಸಿಂಗ್ 6 ರನ್, ಹಾರ್ದಿಕ್ ಪಾಂಡ್ಯ 5 ರನ್‌ಗೆ ವಿಕೆಟ್ ಕಳೆದುಕೊಂಡರು. ಅಲ್ಲಿಗೆ ಭಾರತ ಕೇವಲ 77 ರನ್‌ಗೆ 6 ವಿಕೆಟ್ ಕಳೆದುಕೊಂಡು ಸಂಕಷ್ಟದ ಹಂತ ತಲುಪಿತು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಸುಭದ್ರ ಇನ್ನಿಂಗ್ಸ್ ಆಡುವ ಮೂಲಕ ನಾಯಕ ಸೂರ್ಯಕುಮಾರ್ ಯಾದವ್ ಏಕಾಂಗಿ ಹೋರಾಟ ನಡೆಸಿದರು. ಸೂರ್ಯಕುಮಾರ್ ಯಾದವ್ ಅಜೇಯರಾಗಿ ಉಳಿದು 49 ಎಸೆತ ಗಳಲ್ಲಿ 10 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 84 ರನ್ ಬಾರಿಸಿದರು. ಅಕ್ಷರ್ ಪಟೇಲ್ 14 ರನ್, ವರುಣ್ ಚಕ್ರವರ್ತಿ ಡಕ್‌ಔಟ್, ಅರ್ಷ್‌ದೀಪ್ ಸಿಂಗ್ ಅಜೇಯ 4 ರನ್ ಗಳಿಸಿದರು. ಅಂತಿಮವಾಗಿ ಭಾರತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 161 ರನ್ ಕಲೆಹಾಕಿತು.

ಯುಎಸ್ಎ ಪರ ಶಾಡ್ಲಿ ವಾನ್ ಶಾಕ್‌ವಿಕ್ ಪ್ರಮುಖ 4 ವಿಕೆಟ್ ಕಿತ್ತರು. ಹರ್ಮೀತ್ ಸಿಂಗ್ 2 ವಿಕೆಟ್, ಅಲಿ ಖಾನ್ ಹಾಗೂ ಮೊಹಮ್ಮದ್ ಮೊಹ್ಸಿನ್ ತಲಾ ಒಂದೊಂದು ವಿಕೆಟ್ ಪಡೆದರು.

ಈ ಮೊತ್ತ ಬೆನ್ನತ್ತಿದ ಯುಎಸ್ಎಗೆ ಆರಂಭಿಕ ಆಘಾತ ಎದುರಾಯಿತು. ಆರಂಭಿಕರಾದ ಆಂಡ್ರೀಸ್ ಗೌಸ್ 6 ರನ್ ಹಾಗೂ ಸಾಯ್‌ತೇಜಾ ಮುಕ್ಕಾಮಲ್ಲಾ 2 ರನ್ ಗಳಿಸಿ ಔಟಾದರು. ಬಳಿಕ ಬಂದ ನಾಯಕ ಮೋನಕ್ ಪಟೇಲ್ ಡಕ್‌ಔಟ್ ಆದರು. ಆ ಮೂಲಕ ಯುಎಸ್ಎ ಕೇವಲ 13 ರನ್ ಗಳಿಗೆ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ನಂತರ ಒಂದಾದ ಮಿಲಿಂದ್ ಕುಮಾರ್ ಮತ್ತು ಸಂಜಯ್ ಕೃಷ್ಣಮೂರ್ತಿ ಅಲ್ಪ ಪ್ರತಿರೋಧ ತೋರಿದರೂ ಪಂದ್ಯ ಗೆಲ್ಲುವ ಇನ್ನಿಂಗ್ಸ್ ಕಟ್ಟುವಲ್ಲಿ ವಿಫಲರಾದರು. ಮಿಲಿಂದ್ 34 ಎಸೆತಗಳಲ್ಲಿ 34 ರನ್ ಬಾರಿಸಿದರೆ, ಸಂಜಯ್ 31 ಎಸೆತಗಳಲ್ಲಿ 37 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಕೊನೆಯಲ್ಲಿ ಅಲ್ಪ ಹೋರಾಟ ಮಾಡಿದ ಶುಭಂ ರಂಜನೆ 22 ಎಸೆತಗಳಲ್ಲಿ 37 ರನ್ ಗಳಿಸಿದ್ದ ವೇಳೆ ಸಿರಾಜ್ ಎಲ್‌ಬಿಡಬ್ಲ್ಯೂ ಬಲೆಗೆ ಬಿದ್ದು ವಿಕೆಟ್ ಒಪ್ಪಿಸಿ ಹೊರನಡೆದರು. ಉಳಿದಂತೆ ಹರ್ಮೀತ್ ಸಿಂಗ್ ಗೋಲ್ಡನ್ ಡಕ್, ಮೊಹಮ್ಮದ್ ಮೊಹ್ಸಿನ್ 8 ರನ್ ಹಾಗೂ ಶಾಡ್ಲಿ ವಾನ್ ಶಾಕ್‌ವಿಕ್ 2 ರನ್ ಗಳಿಸಿ ಅಜೇಯರಾಗಿ ಉಳಿದರು. ಯುಎಸ್ಎ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 132 ರನ್ ಗಳಿಸಿ 29ರನ್‌ಗಳ ಅಂತರದಿಂದ ಸೋಲೊಪ್ಪಿಕೊಂಡರು.

ಟೀಂ ಇಂಡಿಯಾ ಪರ ಮೊಹಮ್ಮದ್ ಸಿರಾಜ್ 3 ವಿಕೆಟ್, ಅರ್ಶ್‌ದೀಪ್ ಸಿಂಗ್ ಹಾಗೂ ಅಕ್ಷರ್ ಪಟೇಲ್ ತಲಾ 2 ವಿಕೆಟ್, ವರುಣ್ ಚಕ್ರವರ್ತಿ 1 ವಿಕೆಟ್ ಕಿತ್ತು ಗಮನ ಸೆಳೆದರು. ಅಮೋಘ ಬ್ಯಾಟಿಂಗ್ ಪ್ರದರ್ಶನ ತೋರಿದ ಟೀಂ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



ಮುಂಬೈನ್ ವಾಖೆಂಡೆ ಕ್ರೀಡಾಂಗಣದಲ್ಲಿ ನಡೆದ ಟಿ20 ವಿಶ್ವಕಪ್ ಉದ್ಘಾಟನಾ ಸಮಾರಂಭದಲ್ಲಿ ಬಾಲಿವುಡ್‌ನ ಖ್ಯಾತ ಗಾಯಕ ಬಾದ್‌ಷಾ ತಮ್ಮ ಗಾಯನ ಮೋಡಿಯಿಂದ ಕಮಾಲ್ ಮಾಡಿದರು.

ನೆದರ್ಲ್ಯಾಂಡ್ಸ್ ಮಣಿಸಿದ ಪಾಕಿಸ್ತಾನ



ಪಂದ್ಯದ ಬಳಿಕ ಪಾಕಿಸ್ತಾನ ಮತ್ತು ನೆದರ್ಲ್ಯಾಂಡ್ಸ್ ತಂಡದ ಆಟಗಾರರು ಪರಸ್ಪರ ಹಸ್ತಲಾಘವ ಮಾಡಿದರು.

ಸಂಕ್ಷಿಪ್ತ ಸ್ಕೋರ್

ನೆದರ್ಲ್ಯಾಂಡ್ಸ್: 147/10 (19.5 ಓವರ್)– ಸ್ಕಾಟ್ ಎಡ್ವರ್ಡ್ಸ್ 37(29), ಬಾಸ್ ಡಿ ಲೀಡೆ 30(25), ಮೈಕಲ್ ಲೆವಿಟ್ 24(15), ಸಲ್ಮಾನ್ ಮಿರ್ಜಾ 24ಕ್ಕೆ3, ಸೈಮ್ ಆಯುಬ್ 7ಕ್ಕೆ2

ಪಾಕಿಸ್ತಾನ್: 148/7 (19.3 ಓವರ್)– ಶಾಹೀಬ್‌ಜಾದಾ ಫರ್ಹಾನ್ 47(31), ಫಾಹೀಮ್ ಅಶ್ರಫ್ 29(11), ಸೈಮ್ ಆಯುಬ್ 24(13), ಆರ್ಯನ್ ದತ್ 33ಕ್ಕೆ2, ಪಾಲ್ ವ್ಯಾನ್ ಮಿಕೆರನ್ 20ಕ್ಕೆ2

ಮೈಸೂರು, ಫೆ.7(ವಿವಿಹೆಚ್)– ಭಾರತ ಮತ್ತು ಶ್ರೀಲಂಕಾ ನಡುವಣ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ ಐಸಿಸಿ ಟಿ20 ವಿಶ್ವಕಪ್‌ನ ಉದ್ಘಾಟನಾ ಪಂದ್ಯದಲ್ಲಿ ನೆದರ್ಲ್ಯಾಂಡ್ಸ್ ವಿರುದ್ಧ 3 ವಿಕೆಟ್‌ಗಳಿಂದ ಗೆದ್ದ ಪಾಕಿಸ್ತಾನ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಸಿಂಹಳೀಸ್ ಸ್ಪೋರ್ಟ್ಸ್ ಕ್ಲಬ್ ಮೈದಾನದಲ್ಲಿ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ನೆದರ್ಲ್ಯಾಂಡ್ಸ್ 19.5 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 147 ರನ್ ಗಳಿಸಿತು. ಈ ಸಾಧಾರಣ ಮೊತ್ತ ಬೆನ್ನತ್ತಿದ ಪಾಕಿಸ್ತಾನ 19.3 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 148 ರನ್ ಗಳಿಸಿ 3 ವಿಕೆಟ್‌ಗಳ ಪ್ರಾಯಾಸದ ಗೆಲುವು ದಾಖಲಿಸಿತು. ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ ಫಾಹೀಮ್ ಅಶ್ರಫ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸ್ಕಾಟ್‌ಲೆಂಡ್ ವಿರುದ್ಧ ವೆಸ್ಟ್ ಇಂಡೀಸ್‌ಗೆ ಜಯ



ಮೊದಲ ಪಂದ್ಯದಲ್ಲೇ 5 ವಿಕೆಟ್ ಗೊಂಚಲು ಪಡೆದ ಶೇಫರ್ಡ್ ಅವರನ್ನು ತಂಡದ ಸಹ ಆಟಗಾರರು ಅಭಿನಂದಿಸಿದರು.

ಮೈಸೂರು, ಫೆ7(ವಿವಿಹೆಚ್)–ಐಸಿಸಿ ಟಿ20 ವಿಶ್ವಕಪ್‌ನ ಎರಡನೇ ಪಂದ್ಯದಲ್ಲಿ ಬಲಿಷ್ಠ ವೆಸ್ಟ್ ಇಂಡೀಸ್ ತಂಡ ಸ್ಕಾಟ್‌ಲೆಂಡ್ ತಂಡವನ್ನು 35 ರನ್‌ಗಳಿಂದ ಮಣಿಸಿ ಟೂರ್ನಿಯಲ್ಲಿ ಮೊದಲ ಗೆಲುವು ದಾಖಲಿಸಿತು. ಕೋಲ್ಕತ್ತಾದ ಈಡೆನ್ ಗಾರ್ಡನ್ ಮೈದಾನದಲ್ಲಿ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 182ರನ್ ಕಲೆಹಾಕಿತು. ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಸ್ಕಾಟ್‌ಲೆಂಡ್ 18.5 ಓವರ್‌ಗಳಲ್ಲಿ ಆಲ್‌ಔಟ್ ಆಗುವ ಮೂಲಕ 147 ರನ್ ಗಳಿಸಿ 35 ರನ್‌ಗಳಿಂದ ಸೋಲನನುಭವಿಸಿತು. ಭರ್ಜರಿ ಬ್ಯಾಟಿಂಗ್ ಮೂಲಕ ವೆಸ್ಟ್ ಇಂಡೀಸ್‌ಗೆ ನೆರವಾದ ಶಿಮ್ರಾನ್ ಹೇಟ್ಮಾಯರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸಂಕ್ಷಿಪ್ತ ಸ್ಕೋರ್

ವೆಸ್ಟ್ ಇಂಡೀಸ್: 182/5 (20 ಓವರ್)– ಶಿಮ್ರಾನ್ ಹೇಟ್ಮಾಯೆರ್ 64(36), ಬ್ರೆಂಡನ್ ಕಿಂಗ್ 35(30), ರುದರ್‌ಫೋರ್ಡ್ 26(13), ಬ್ರಾಡ್ ಕ್ಯೂರಿ 23ಕ್ಕೆ2,

ಸ್ಕಾಟ್‌ಲೆಂಡ್: 147/10 (18.5 ಓವರ್)– ರಿಚೀ ಬೆರಿಂಗ್ಟನ್ 42(24), ಟಾಮ್ ಬ್ರೂಸ್ 35(28), ರೋಮಾರಿಯೋ ಶೇಫರ್ಡ್ 20ಕ್ಕೆ5, ಜಾಸನ್ ಹೋಲ್ಡರ್ 30ಕ್ಕೆ3

54 ನಿಗಮ–ಮಂಡಳಿಗಳ ಅಧ್ಯಕ್ಷರ ಅವಧಿ ವಿಸ್ತರಿಸಿದ ಸರ್ಕಾರ

ಬೆಂಗಳೂರು: ಅವಧಿ ಪೂರ್ಣ ಗೊಂಡಿರುವ ವಿವಿಧ 54 ನಿಗಮ–ಮಂಡಳಿ, ಪ್ರಾಧಿಕಾರ ಅಧ್ಯಕ್ಷರ ಪದಾವಧಿಯನ್ನು ಮುಂದಿನ ಆದೇಶದವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಶನಿವಾರ ಆದೇಶ ಹೊರಡಿಸಿದೆ.

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯ್ಕ್, ದೇವರಾಜ ಅರಸು ನಿಗಮದ ಅಧ್ಯಕ್ಷ ಕೀರ್ತಿ ಗಣೇಶ್, ಒಕ್ಕಲಿಗ ನಿಗಮ ಅಧ್ಯಕ್ಷ ಎಂ.ಎಸ್. ಆತ್ಮಾನಂದ, ಮರಾಠ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಚ್. ಮರಿಯೋಜಿರಾವ್, ವಿಶ್ವಕರ್ಮ ಅಭಿವೃದ್ಧಿ ನಿಗಮದ ಪಿ. ಸುಜ್ಞಾನ ಮೂರ್ತಿ ಸೇರಿದಂತೆ ವಿವಿಧ ನಿಗಮ–ಮಂಡಳಿಗಳ ಅಧ್ಯಕ್ಷರನ್ನು ಅದೇ ಹುದ್ದೆಯಲ್ಲಿ ಮುಂದುವರೆಸಿ, ಅವರಿಗೆ ನೀಡಲಾಗುತ್ತಿದ್ದ ರಾಜ್ಯ ಸಚಿವರ ಸ್ಥಾನಮಾನ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ನೀಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಅಪ್ಪಾಜಿ ನಾಡಗೌಡ, ರಾಜು ಕಾಗೆ, ಎಚ್.ಸಿ. ಬಾಲಕೃಷ್ಣ, ಕೆ.ಎಂ. ಶಿವಲಿಂಗೇಗೌಡ, ಬೇಳೂರು ಗೋಪಾಲಕೃಷ್ಣ, ಟಿ.ಡಿ. ರಾಜೇ ಗೌಡ, ಶರತ್ ಬಚ್ಚೇಗೌಡ ಸೇರಿ ಅವಧಿ ಪೂರ್ಣಗೊಂಡಿದ್ದ ವಿವಿಧ 25 ನಿಗಮ ಮಂಡಳಿಗಳ ಅಧ್ಯಕ್ಷರ ಪದಾವಧಿಯನ್ನು ಮುಂದಿನ ಆದೇಶದವರೆಗೆ ವಿಸ್ತರಿಸಿ ಸರ್ಕಾರ ಇತ್ತೀಚೆಗೆ ಆದೇಶ ಹೊರಡಿಸಿತ್ತು.

ಸಾರ್ವಜನಿಕ ಸಮಾಲೋಚನಾ ಸಭೆ

ಮೈಸೂರು,ಫೆ.7– ಜಿಲ್ಲಾಧಿಕಾರಿಗಳು ಹಾಗೂ ನಂಜನಗೂಡು ನಗರಸಭೆ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಂಜನಗೂಡು ನಗರಸಭೆಯ 2026–27ನೇ ಸಾಲಿನ ಆಯ–ವ್ಯಯ ತಯಾರಿಸುವ ಸಂಬಂಧ ಸಾರ್ವಜನಿಕ ಸಮಾಲೋಚನಾ ಸಭೆ ಫೆ.16 ರಂದು ಬೆಳಿಗ್ಗೆ 11 ಗಂಟೆಗೆ ಡಾ. ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿದೆ.

ಸಭೆಯನ್ನು ಸಾರ್ವಜನಿಕವಾಗಿ ಸಮಾಲೋಚನೆ ಮಾಡಲು ನೋಂದಾಯಿತ ಸ್ಥಳೀಯ ಸಂಘ ಸಂಸ್ಥೆಗಳು, ನೋಂದಾಯಿತ ಸರ್ಕಾರೇತರ ಸಂಘ ಸಂಸ್ಥೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಸಂಘಗಳು ಹಾಗೂ ಇತರೇ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ನಗರದ ಗಣ್ಯ ವ್ಯಕ್ತಿಗಳನ್ನು ಒಳಗೊಂಡಂತೆ ಏರ್ಪಡಿಸಲಾಗಿದೆ. ಸಭೆಗೆ ಗಣ್ಯರು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಆಗಮಿಸಿ 2026–27ನೇ ಸಾಲಿನ ಆಯವ್ಯಯ ತಯಾರಿಕೆಗೆ ನಂಜನಗೂಡು ನಗರಕ್ಕೆ ಅಗತ್ಯವೆನಿಸುವ ಯೋಜನೆಗಳು ಹಾಗೂ ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ತಮ್ಮ ಸಲಹೆ–ಸೂಚನೆಗಳನ್ನು ನೀಡಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ನಂಜನಗೂಡು ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ ಉಗ್ರ ಸಾದಿಕ್ ಪಾಷಾ ನಿಧನ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಶಂಕಿತ ಉಗ್ರ ಸಾದಿಕ್ ಪಾಷಾ ಎಂಬಾತ ಅನಾರೋಗ್ಯದಿಂದ ಮೃತಪಟ್ಟಿದ್ದಾನೆ. ಸದ್ದುಗುಂಟೆಪಾಳ್ಯ ಠಾಣಾ ವ್ಯಾಪ್ತಿಯಲ್ಲಿ 2020ರಲ್ಲಿ ಎನ್‌ಐಎ ತಂಡವು ಉಗ್ರನನ್ನು ಬಂಧಿಸಿತ್ತು. ಅಕ್ರಮ ಕೂಟ ರಚಿಸಿಕೊಂಡು ಶಸ್ತ್ರಾಸ್ತ್ರಗಳನ್ನು ಸಂಗ್ರಹ ಮಾಡಿಕೊಂಡಿದ್ದ ಆರೋಪ ಈತನ ಮೇಲಿತ್ತು.

ಬಿಡುಗಡೆ ಬಳಿಕ ಸಮಾಜಮುಖಿ ಜೀವನ ನಡೆಸಲು ನಿರ್ಧರಿಸಿ

ಸಜಾ ಬಂಧಿಗಳಿಗೆ ಬಂಧಿಖಾನೆ ಡಿಜಿಪಿ ಅಲೋಕಕುಮಾರ್ ಸಲಹೆ

ಮೈಸೂರು, ಫೆ.7(ಎಸ್‌ಪಿಎನ್)– ಸಜಾ ಬಂಧಿಗಳು ಕಾರಾಗೃಹದಿಂದ ಬಿಡುಗಡೆಯಾಗುವುದೊಳಗೆ ಉತ್ತಮ ನಡತೆಯನ್ನು ಹೊಂದಿ ಕಾರಾಗೃಹದ ಹೊರಗೆ ಸಮಾಜಮುಖಿ ಜೀವನ ಆರಂಭಿಸಬೇಕು ಎಂದು ಕರ್ನಾಟಕ ರಾಜ್ಯ ಕಾರಾಗೃಹ ಮತ್ತು ಸುಧಾರಣಾ ಸೇವೆ ಪೊಲೀಸ್ ಮಹಾನಿರ್ದೇಶಕ ಅಲೋಕ್ ಕುಮಾರ್ ಕಿವಿಮಾತು ಹೇಳಿದರು.

ಮೈಸೂರು ಕೇಂದ್ರ ಕಾರಾಗೃಹಕ್ಕೆ ಶನಿವಾರ ಭೇಟಿ ನೀಡಿ, ಪರಿಶೀಲಿಸಿದ ಬಳಿಕ ಬಂಧಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಶಿಕ್ಷಾ ಬಂಧಿಗಳಿಗೆ ಸರ್ಕಾರದಿಂದ ದೊರೆಯಬಹುದಾದ ಎಲ್ಲಾ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ಒದಗಿಸಲು ಪ್ರಯತ್ನಿಸಲಾಗುತ್ತದೆ ಎಂದು ಭರವಸೆ ನೀಡಿದರು.



ಮೈಸೂರು ಕೇಂದ್ರ ಕಾರಾಗೃಹದ ಆವರಣದಲ್ಲಿ ಸಜಾ ಬಂಧಿಗಳಿಗಾಗಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಕಾರಾಗೃಹ ಮತ್ತು ಸುಧಾರಣಾ ಸೇವೆ ಪೊಲೀಸ್ ಮಹಾನಿರ್ದೇಶಕ ಅಲೋಕ್ ಕುಮಾರ್ ಉದ್ಘಾಟಿಸಿದರು.

ಈ ವೇಳೆ ಕಾರಾಗೃಹದಲ್ಲಿ ಉತ್ತಮ ನಡತೆಯುಳ್ಳ ಶಿಕ್ಷಾಬಂಧಿ ಹಾಗೂ ವಿಚಾರಣಾ ಬಂಧಿಗಳಿಗೆ ಪ್ರಶಂಸನಾ ಪತ್ರ ನೀಡಿದರು. ಬಂಧಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು. 2025ನೇ ಸಾಲಿನಲ್ಲಿ ಕಾರಾಗೃಹದಲ್ಲಿ ಉತ್ತಮ ಕಾರ್ಯನಿರ್ವಹಿಸಿದ ಅಧಿಕಾರಿಗಳು, ಸಿಬ್ಬಂದಿಗಳಿಗೆ ಪ್ರಶಂಸನಾ ಪತ್ರ ನೀಡಿದರು. ಬಳಿಕ 2026ನೇ ವರ್ಷದ ಟೇಬಲ್ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.

ಸಮಾರಂಭದಲ್ಲಿ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ ದಕ್ಷಿಣ ವಲಯದ ಉಪ ಮಹಾನಿರೀಕ್ಷಕಿ ಕೆ.ಸಿ.ದಿವ್ಯಶ್ರೀ, ಕೆಎಸ್‌ಐಎಸ್‌ಎಫ್ ಕಮಾಂಡೆಂಟ್ ಕೆ.ಎಂ.ಮಹದೇವ ಪ್ರಸಾದ್, ಮುಖ್ಯ ಅಧೀಕ್ಷಕ ವಿ.ಶೇಷುಮೂರ್ತಿ, ಅಧೀಕ್ಷಕ ಎಂ.ಎಚ್.ಆಶೇಖಾನ್ ಸ್ವಾಗತಿಸಿದರು.

ನಮ್ಮ ಮೆಟ್ರೋ; ಕೇಂದ್ರ ಸರ್ಕಾರದ ಅದ್ಭುತ ಕೊಡುಗೆಯ ಪ್ರತಿಬಿಂಬ

ಸಂಸದ ಯದುವೀರ್ ಒಡೆಯರ್

ಮೈಸೂರು,ಫೆ.7(ಪಿಎಂ)– ಬೆಂಗಳೂರಿನ 'ನಮ್ಮ ಮೆಟ್ರೋ (ಮೆಟ್ರೋ ರೈಲು) ಸೇವೆ'ಯು ಕೇಂದ್ರ ಸರ್ಕಾರ ಮತ್ತು ನಮ್ಮ ಬಿಜೆಪಿ ಸಂಸದರ ನೇತೃತ್ವದ ಅದ್ಭುತ ಕಾರ್ಯದ ಪ್ರತಿಬಿಂಬವೆಂದು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹರ್ಷ ವ್ಯಕ್ತಪಡಿಸಿದ್ದಾರೆ.

ಇಂದು ಬೆಂಗಳೂರು ನಗರದ ಕೇಂದ್ರ ಸ್ಥಾನದಲ್ಲಿ ತುರ್ತು ಕಾರ್ಯಕ್ರಮದ ನಿಮಿತ್ತ ಶೀಘ್ರವಾಗಿ ತಲುಪಲು ನಾನು ಮೈಸೂರು ರಸ್ತೆಯಿಂದ ನಮ್ಮ ಮೆಟ್ರೊ ನೇರಳೆ ಮಾರ್ಗದ ಮೂಲಕ ಸಂಚರಿಸಿದೆ ಎಂದು ತಿಳಿಸಿರುವ ಅವರು, ರಸ್ತೆಯ ಮೂಲಕ ಬಹಳ ಸಮಯ ತೆಗೆದುಕೊಳ್ಳಬಹುದಾಗಿದ್ದ ಕೆಲಸವನ್ನು ಬೆಂಗಳೂರು ಮೆಟ್ರೋದ ತಡೆರಹಿತ ಸಂಪರ್ಕದಿಂದಾಗಿ ಬಹಳ ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಲಾಯಿತು. ಇಂತಹ ವಿಶ್ವ ದರ್ಜೆಯ ಸಾರ್ವಜನಿಕ ಸಾರಿಗೆ ಮೂಲ ಸೌಕರ್ಯವು ಕೇಂದ್ರ ಸರ್ಕಾರ ಮತ್ತು ನಮ್ಮ ಬಿಜೆಪಿ ಸಂಸದರ ನೇತೃತ್ವದಲ್ಲಿ ನಗರ ಚಲನಶೀಲತೆಯನ್ನು ಬಲಪಡಿಸಲು ನಡೆಯುತ್ತಿರುವ ಅದ್ಭುತ ಕೆಲಸವನ್ನು ಪ್ರತಿಬಿಂಬಿಸುತ್ತದೆ. ಬೆಂಗಳೂರಿನ ಬೆಳೆಯುತ್ತಿರುವ ಇಂತಹ ಸಾರಿಗೆ ಜಾಲವು ನಿಜವಾಗಿಯೂ ಅನುಕೂಲಕರ, ಪರಿಣಾಮಕಾರಿ ಮತ್ತು ಸಾರ್ವಜನಿಕ ಸ್ನೇಹಿಯಾಗಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದ್ದಾರೆ.



ನಮ್ಮ ಮೆಟ್ರೋದಲ್ಲಿ ಸಂಸದ ಯದುವೀರ್ ಒಡೆಯರ್ ಸಂಚರಿಸಿದರು.

ನಂಬಿಕೆಯೇ ಭಾರತದ ಬಲಿಷ್ಠ ಕರೆನ್ಸಿ

ಮಲೇಷ್ಯಾದಲ್ಲಿ ಪ್ರಧಾನಿ ಮೋದಿ ಪ್ರತಿಪಾದನೆ

ಕೌಲಾಲಂಪುರ: ಭಾರತವನ್ನು ಅಭಿವೃದ್ಧಿಗೆ ವಿಶ್ವಾಸಾರ್ಹ ಪಾಲುದಾರ ಎಂದು ನೋಡಲಾಗುತ್ತಿದೆ ಮತ್ತು ಇದು ಯುಕೆ, ಯುಎಸ್ಎ ಮತ್ತು ಇಯು ಸೇರಿದಂತೆ ವಿವಿಧ ದೇಶಗಳೊಂದಿಗೆ ಮಾಡಿಕೊಂಡಿರುವ ಇತ್ತೀಚಿನ ವ್ಯಾಪಾರ ಒಪ್ಪಂದಗಳಲ್ಲಿ ಪ್ರತಿಫಲಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

ಇಂದು ಮಲೇಷ್ಯಾದಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಮೋದಿ, ಭಾರತೀಯ ವಲಸಿಗರು ಭಾರತ ಮತ್ತು ಮಲೇಷ್ಯಾ ನಡುವೆ ಜೀವಂತ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು. ಅಲ್ಲದೆ ದ್ವೀಪ ರಾಷ್ಟ್ರದಲ್ಲಿ ಹೊಸ ಕಾನ್ಸುಲೇಟ್ ಹಾಗೂ ವಿದ್ಯಾರ್ಥಿಗಳು ಭಾರತದಲ್ಲಿ ಅಧ್ಯಯನ ಮಾಡಲು ಅನುವು ಮಾಡಿಕೊಡಲು ತಿರುವಳ್ಳುವರ್ ವಿದ್ಯಾರ್ಥಿವೇತನವನ್ನು ಪ್ರಧಾನಿ ಮೋದಿ ಘೋಷಿಸಿದರು.

ಎರಡು ದಿನಗಳ ಮಲೇಷ್ಯಾ ಭೇಟಿಗಾಗಿ ಇಂದು ಕೌಲಾಲಂಪುರಕ್ಕೆ ಆಗಮಿಸಿದ ಪ್ರಧಾನಿ ಮೋದಿ, ಭಾರತ ವಿವಿಧ ದೇಶಗಳೊಂದಿಗೆ ಮಾಡಿಕೊಂಡ ವ್ಯಾಪಾರ ಒಪ್ಪಂದಗಳನ್ನು ಉಲ್ಲೇಖಿಸಿದರು ಮತ್ತು ಭಾರತವನ್ನು "ಅಭಿವೃದ್ಧಿಗೆ ವಿಶ್ವಾಸಾರ್ಹ ಪಾಲುದಾರ ಎಂದು ನೋಡಲಾಗುತ್ತಿದೆ ಎಂದರು.

ನಂಬಿಕೆಯೇ ಭಾರತದ ಪ್ರಬಲ ಕರೆನ್ಸಿಯಾಗಿದೆ" ಎಂದು ಯುಕೆ, ಯುಎಇ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಓಮನ್, ಇಯು ಮತ್ತು ಯುಎಸ್ ಜೊತೆಗಿನ ವ್ಯಾಪಾರ ಒಪ್ಪಂದಗಳನ್ನು ಪ್ರಧಾನಿ ಮೋದಿ ಉಲ್ಲೇಖಿಸಿದರು.



ಮಲೇಷ್ಯಾದಲ್ಲಿ ಪ್ರಧಾನಿ ಮೋದಿ

ಮಲೇಷ್ಯಾ ವಿಶ್ವದ ಎರಡನೇ ಅತಿ ದೊಡ್ಡ ಭಾರತೀಯ ಮೂಲದ ಸಮುದಾಯವನ್ನು ಹೊಂದಿದೆ. ಭಾರತೀಯ ಮತ್ತು ಮಲೇಷಿಯಾದ ಹೃದಯಗಳನ್ನು ಸಂಪರ್ಕಿಸುವ ಬಹಳಷ್ಟು ವಿಷಯಗಳಿವೆ. ನೀವು ನಮ್ಮನ್ನು ಸಂಪರ್ಕಿಸುವ ಜೀವಂತ ಸೇತುವೆ ಎಂದು ಮೋದಿ ಹೇಳಿದರು.

ಭಾರತೀಯ ಮೂಲದ ಸುಮಾರು ಮೂರು ಮಿಲಿಯನ್ ಜನರು ಮಲೇಷ್ಯಾದಲ್ಲಿ ವಾಸಿಸುತ್ತಿದ್ದಾರೆ. ಅವರಲ್ಲಿ ಬಹುಪಾಲು ತಮಿಳು ಮೂಲದವರು. ಹೀಗಾಗಿ, ತಮಿಳು ಭಾಷೆಯ ಕುರಿತು ತಮ್ಮ ಭಾಷಣದಲ್ಲಿ ಮಾತನಾಡಿದ ಮೋದಿ, ತಮಿಳು ಜಗತ್ತಿಗೆ ಭಾರತ ನೀಡಿದ ಕೊಡುಗೆ. ತಮಿಳು ಸಾಹಿತ್ಯ ಶಾಶ್ವತ ಮತ್ತು ಜಗತ್ತಿಗೆ ದೊಡ್ಡ ಕೊಡುಗೆ ನೀಡಿದೆ. ಭಾರತದ ಉಪರಾಷ್ಟ್ರಪತಿ ಸಿ.ಪಿ ರಾಧಾಕೃಷ್ಣನ್, ಕೇಂದ್ರ ಸಚಿವರಾದ ಎಸ್. ಜೈಶಂಕರ್ ಮತ್ತು ನಿರ್ಮಲಾ ಸೀತಾರಾಮನ್ ಅವರಂತಹ ತಮಿಳು ಸಮುದಾಯದ ನಾಯಕರು ತಮ್ಮ ಪ್ರತಿಭೆಯಿಂದ ಮಾನವೀಯತೆಗೆ ಸೇವೆ ಸಲ್ಲಿಸಿದ್ದಾರೆ ಎಂದರು.

ಇದಕ್ಕು ಮುನ್ನ ಕೌಲಾಲಂಪುರಕ್ಕೆ ಆಗಮಿಸಿದ ಪ್ರಧಾನಿ ಮೋದಿ ಅವರಿಗೆ 80 ಕ್ಕೂ ಹೆಚ್ಚು ನೃತ್ಯಗಾರರು ಭರತನಾಟ್ಯ, ಕಥಕ್, ಕಥಕ್ಕಳಿ, ಕೂಚಿಪುಡಿ, ಯಕ್ಷಗಾನ, ಲಾವಣಿ ಮತ್ತು ಓಡಿಸಿ ಸೇರಿದಂತೆ ಭಾರತೀಯ ಶಾಸ್ತ್ರೀಯ ಮತ್ತು ಜಾನಪದ ನೃತ್ಯಗಳನ್ನು ಪ್ರದರ್ಶಿಸುವ ಮೂಲಕ ಅದ್ಧೂರಿ ಸ್ವಾಗತ ನೀಡಲಾಯಿತು.

ಗ್ಯಾರಂಟಿ ಹಣ ಉಳಿತಾಯ ಮಾಡಿ

●ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ●ಎಂಎಸ್‌ಐಎಲ್ ಚಿಟ್ಸ್‌ನ ಹೊಸ ಸಾಫ್ಟ್‌ವೇರ್, ಮೊಬೈಲ್ ಆಪ್ ಬಿಡುಗಡೆ

ಬೆಂಗಳೂರು, ಫೆ.7(ಕೆಎಂಶಿ)–ಗ್ಯಾರಂಟಿ ಯೋಜನೆಗಳು ಬದುಕು ಕಟ್ಟುತ್ತಿದ್ದು, ನೀವು ಸಂಪಾದಿಸುವ ಹಣವನ್ನು ಉಳಿತಾಯದಲ್ಲಿ ತೊಡಗಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಫಲಾನುಭವಿಗಳಿಗೆ ಕಿವಿಮಾತು ಹೇಳಿದ್ದಾರೆ.



ಹಣ ಇದ್ದರೆ ಎಲ್ಲರೂ ನಿಮ್ಮನ್ನು ನೋಡುತ್ತಾರೆ. ಇಲ್ಲ ಎಂದರೆ ಯಾರೂ ನಿಮ್ಮ ಬಳಿ ಸುಳಿಯುವುದಿಲ್ಲ. ದೈನಂದಿನ ಬದುಕಿಗೆ ಗ್ಯಾರಂಟಿ ಯೋಜನೆ ಸಹಕಾರಿ ಆಗಿರುವುದರಿಂದ ಹಣ ಉಳಿತಾಯ ಮಾಡಿ ಕಷ್ಟಕಾಲದಲ್ಲಿ ಬಳಸಿಕೊಳ್ಳುವಂತೆ ಸಲಹೆ ಮಾಡಿದರು. ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಎಂಎಸ್‌ಐಎಲ್ ಚಿಟ್ಸ್ ಹೊಸ ಸಾಫ್ಟ್‌ವೇರ್ ಹಾಗೂ ಮೊಬೈಲ್ ಆಪ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಮಾಸಿಕ ಚೀಟಿಗೆ ಹಣ ಹಾಕಿ ಕಳೆದುಕೊಳ್ಳಬೇಡಿ ಎಂದರು.

ಸರ್ಕಾರಿ ಸ್ವಾಮ್ಯದ ಎಂಎಸ್‌ಐಎಲ್ ಚಿಟ್ ಫಂಡ್ ಯೋಜನೆ ಜಾರಿಗೊಳಿಸಿದೆ. ಇಲ್ಲಿ ನಿಮ್ಮ ಹಣ ಹೂಡಿಕೆ ಮಾಡಿದರೆ ಮೋಸ ಆಗುವುದಿಲ್ಲ. ನೀವು ಪಾವತಿಸಿದ ಹಣಕ್ಕೆ ಒಳ್ಳೆಯ ಲಾಭ ಬರುತ್ತದೆ. ಕಷ್ಟ ಕಾಲದಲ್ಲಿ ಉಪಯೋಗ ಆಗಲಿದೆ. ಅಲ್ಲದೆ, ಯಾವುದಾದರೂ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗೂ ಅನುಕೂಲವಾಗುತ್ತದೆ ಎಂದರು. ಕೇರಳದಲ್ಲಿ 47,000 ಕೋಟಿ ರೂ. ವಹಿವಾಟು ನಡೆಯುತ್ತದೆ. ಕರ್ನಾಟಕದಲ್ಲಿ ಕೇವಲ 500 ಕೋಟಿ ರೂ. ವ್ಯವಹಾರ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಈ ಮೊತ್ತ 10,000 ಕೋಟಿ ರೂ.ಗೆ ಹೆಚ್ಚಿಸುವ ಗುರಿಯನ್ನು ಸಂಸ್ಥೆ ಹೊಂದಿದೆ. ಶಿಕ್ಷಣ, ಆರೋಗ್ಯ, ಮದುವೆ, ಮನೆ ಖರೀದಿ ಹಾಗೂ ಹೂಡಿಕೆಗಳಿಗೆ ಉಳಿತಾಯ ಮೊತ್ತ ಸುಭದ್ರವಾಗಿರುವ ಗ್ಯಾರಂಟಿ ಇದೆ. ಹಣ ಗಳಿಸುವುದು ಹಾಗೂ ಸುಭದ್ರ ಹೂಡಿಕೆ ಮಾಡುವುದೂ ಮುಖ್ಯ ಎಂದರು. ಮೈಕ್ರೋ ಫೈನಾನ್ಸ್ ಸಾಲದ ಸುಳಿಯಲ್ಲಿ ಅನೇಕ ಜನರು ಸಿಲುಕುತ್ತಾರೆ. ಕಿರು ಸಾಲ ಮತ್ತು ಸಣ್ಣ ಸಾಲ ಅಧ್ಯಾದೇಶ 2025ರಲ್ಲಿ ರಕ್ಷಣೆ ನೀಡಲಾಗಿದೆ. ಸಾಲ ಪಡೆದು ಕಿರುಕುಳ ಅನುಭವಿಸುತ್ತಿರುವ ಜನರ ರಕ್ಷಣೆಗೆ ಕಾಯ್ದೆ ಜಾರಿಗೊಳಿಸಲಾಗಿದೆ ಎಂದರು.

ಪಾರದರ್ಶಕ ವ್ಯವಹಾರ: ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾತನಾಡಿ, ಸುಗಮ ಮತ್ತು ಪಾರದರ್ಶಕ ವ್ಯವಹಾರಕ್ಕೆಂದೇ ಎಂಎಸ್‌ಐಎಲ್ ಚಿಟ್ಸ್ ಸಾಫ್ಟ್‌ವೇರ್ ಮತ್ತು ಮೊಬೈಲ್ ಆಪ್ ಅಭಿವೃದ್ಧಿಪಡಿಸಲಾಗಿದೆ ಎಂದರು. ಸಂಸ್ಥೆ

> **❝ ಜಾತಿ–ವರ್ಗಗಳ ಭೇದವಿಲ್ಲದೇ ಜಾರಿಯಾಗಿರುವ ಸರ್ಕಾರದ ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಲಕ್ಷ್ಮಿ, ಯುವನಿಧಿ, ಅನ್ನಭಾಗ್ಯದಿಂದ ಉಳಿತಾಯವಾಗುವ ಹಣವನ್ನು ಜನರು, ಅದರಲ್ಲೂ ವಿಶೇಷವಾಗಿ ಮಹಿಳೆಯರು ಹೂಡಿಕೆ ಮಾಡಬೇಕು. ಎಂಎಸ್‌ಐಎಲ್ ಸರ್ಕಾರಿ ಸಂಸ್ಥೆಯಾಗಿದೆ. ಜನರ ಹೂಡಿಕೆಗೆ ಭದ್ರತೆ ಒದಗಿಸುತ್ತದೆ. ತಮ್ಮ ಹೂಡಿಕೆಯ ಕೇವಲ ಶೇ.5ರಷ್ಟು ಲಾಭ ಪಡೆಯುವ ಸಂಸ್ಥೆ ಜನರ ಆರ್ಥಿಕ ಭದ್ರತೆಗೆ ನೆರವಾಗಲಿದೆ. –ಸಿದ್ದರಾಮಯ್ಯ**

27 ಶಾಖೆಗಳನ್ನು ಹೊಂದಿದ್ದು, ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆ ಮತ್ತು ತಾಲೂಕು ಕೇಂದ್ರಗಳಿಗೂ ವಿಸ್ತರಿಸಲಾಗುವುದು. ಮುಖ್ಯವಾಗಿ ಗ್ರಾಮೀಣ ಭಾಗ ಮತ್ತು ಮಹಿಳೆಯರ ಉಳಿತಾಯದ ಮೇಲೆ ನಮ್ಮ ಗಮನವಿದೆ, ಬ್ಯಾಂಕ್‌ಗಳಲ್ಲಿ ಕೊಡುವುದಕ್ಕಿಂತ ಹೆಚ್ಚಿನ ಬಡ್ಡಿ ಸಿಗಲಿದೆ.

ಸುಗಮ ಚಿಟ್ ವ್ಯವಹಾರಕ್ಕಾಗಿ ಸಂಸ್ಥೆ ಏಜೆಂಟರನ್ನು ನೇಮಿಸಲಿದ್ದು, ಇದರಿಂದ 10 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ಸಿಗಲಿದೆ. ಸ್ವಸಹಾಯ ಸಂಘ ಗಳ ಮಹಿಳೆಯರಿಗೆ ವಿಶೇಷ ಉಳಿತಾಯ ಯೋಜನೆಗಳನ್ನು ತರಲಾಗುವುದು.

ಸಂಘಗಳ ಸಖಿಯರೇ ಏಜೆಂಟರಾಗಿ ನೇಮಕ ಗೊಳ್ಳಲಿದ್ದಾರೆ. ಇವರಲ್ಲದೆ, ಹೋಟೆಲ್, ಕಿರಾಣಿ ಅಂಗಡಿಗಳು ಏಜೆಂಟ್ ರೀತಿ ಕಾರ್ಯನಿರ್ವಹಿಸಲು ವ್ಯವಸ್ಥೆ ರೂಪಿಸ ಲಾಗುವುದು. ಸರ್ಕಾರಿ ನೌಕರರ ಹೂಡಿಕೆಗೆ ಆದ್ಯತೆ ನೀಡಲಾಗುವುದು. ಒಟ್ಟಿನಲ್ಲಿ ಮನೆ ಮನೆಗೂ ಎಂಎಸ್‌ಐಎಲ್ ಚಿಟ್ ತಲುಪಿಸಲು ಪ್ರಯತ್ನ ನಡೆಯಲಿದೆ ಎಂದರು.

ಚಿಟ್‌ನಲ್ಲಿ ಹೂಡಿಕೆ ಮಾಡುವವರು, ತಮ್ಮ ಕಂತನ್ನು ಆಪ್ ಮೂಲಕ ಯುಪಿಐ, ವೆಬ್‌ಸೈಟ್ ಹಾಗೂ ಆನ್ ಲೈನ್ ಮೂಲಕವೂ ಪಾವತಿಸ ಬಹುದಾಗಿದೆ. ಆನ್‌ಲೈನ್ ಮೂಲಕ ಬಿಡ್‌ನಲ್ಲೂ ಭಾಗವಹಿಸುವ ಸೌಲಭ್ಯಗಳಿವೆ.

ಸರ್ಕಾರಿ ನೌಕರರಿಗೆ ಕ್ಯಾಂಟೀನ್?: ಸೇನಾ ಕ್ಯಾಂಟೀನ್ ಮಾದರಿಯಲ್ಲಿ ಸರ್ಕಾರಿ ನೌಕರರಿಗೆ ಎಲ್ಲ ವಸ್ತುಗಳು ಸಬ್ಸಿಡಿ ದರದಲ್ಲಿ ಸಿಗುವಂತೆ ಎಂಎಸ್‌ಐಎಲ್ ಸ್ಟೋರ್ ತೆರೆಯುವ ಚಿಂತನೆ ಇದ್ದು, ಸಾಧಕ–ಬಾಧಕ ಅಧ್ಯಯನ ಮಾಡಲಾಗುತ್ತಿದೆ. ಇದು ಸಾಕಾರಗೊಂಡರೆ 20 ಲಕ್ಷ ಕುಟುಂಬಗಳಿಗೆ ಅನುಕೂಲವಾಗಲಿದೆ ಎಂದರು.

ನಕ್ಕರೆ ಅದೇ ಸ್ವರ್ಗ

ಅಪ್ಪ : ಲೋ... ಗುಂಡ ನಿನ್ನಂತ ಪೋಲಿಗಳಿಗೆ ಆ ಲಕ್ಷ್ಮೀ ಖಂಡಿತ ಒಲಿಯುವುದಿಲ್ಲ.

ಗುಂಡ : ಅದಕ್ಕೆ ಅಪ್ಪಾ... ಅದು ನನಗೆ ಗೊತ್ತಾಗಿಯೇ ಈಗ ನಾನು ಸರಸ್ವತಿನ ಲವ್ ಮಾಡ್ತಿರೋದು!

ಮೈಸೂರು ಮಿತ್ರ

ಭಾನುವಾರ, ಫೆಬ್ರವರಿ 8, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಈ ಜಗತ್ತಿನಲ್ಲಿ ಖುಷಿಯಿಂದ ನಕ್ಕವರಿಗಿಂತ ವಿಧಿಯಿಲ್ಲದೆ ನಕ್ಕವರೇ ಹೆಚ್ಚು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎತ್ತು ಏರಿಗೆಳೀತು, ಕೋಣ ನೀರಿಗೆಳೀತು.

ನಿಮ್ಮ ಪತ್ರಗಳು

ಭೂಗತ ಕೇಬಲ್ ಅಳವಡಿಕೆ ಅವಾಂತರಗಳು

ಮಾನ್ಯರೆ,



ಮೈಸೂರಿನ ಕೆಲವು ಬಡಾವಣೆಗಳಲ್ಲಿ ಈಗಾಗಲೇ ಸೆಸ್ಕ್ ಇಲಾಖೆಯವರು ಅಂಡರ್‌ಗ್ರೌಂಡ್ ಕೇಬಲ್ ಅಳವಡಿಸುವ ಸಲುವಾಗಿ ಅಲ್ಲಲ್ಲಿ ಹಳ್ಳಗಳನ್ನು ತೆಗೆಯುತ್ತಾ ಕೆಲಸ ನಡೆಸುತ್ತಿದ್ದಾರೆ. ಆದರೆ, ಈ ರೀತಿ ಹಳ್ಳ ತೆಗೆಯುವವರು ಉತ್ತರ ಭಾರತದವರಾಗಿದ್ದು, ಅವರಿಗೆ ಬಡಾವಣೆಯ ಜನರ ಕನ್ನಡ ಭಾಷೆ ತಿಳಿಯುತ್ತಿಲ್ಲ. ಹೀಗಾಗಿ ಅವರಿಗೆ ಎಲ್ಲೆಂದರಲ್ಲಿ ಅಗೆದು ಹಾಗೆ ಬಿಡುತ್ತಾ ಬರುತ್ತಿರುವುದು, ಪುಟ್ಟ ಮಕ್ಕಳು ಹಳ್ಳಕ್ಕೆ ಬೀಳುವ ಸಾಧ್ಯತೆ ಮತ್ತು ವಾಹನ ಸವಾರರು ಚಾಲನೆಯಲ್ಲಿ ತೊಂದರೆಗೀಡಾಗುವ ಸಾಧ್ಯತೆಗಳು ಹೆಚ್ಚಿವೆ. ಇವೆಲ್ಲವನ್ನೂ ಮೀರಿ ಬಡಾವಣೆಯ ಕೆಲವು ನಿವಾಸಿಗಳು ಮನೆಯ ಮುಂದೆ ಸ್ವಚ್ಛವಾಗಿ ಸಿಮೆಂಟ್ ಹಾಕಿಸಿದ್ದನ್ನು ಅಗೆದು ಹಾಳುಗೆಡವಿರುವುದಲ್ಲದೇ, ನೀರಿನ ಪೈಪುಗಳಿವೆಯೇ, ಗ್ಯಾಸ್ ಮತ್ತು ವಿದ್ಯುತ್ ಕೇಬಲ್‌ಗಳಿವೆಯೇ ಎಂಬುದನ್ನೂ ಅರಿಯದೇ, ಕೆಲವು ಸಂದರ್ಭಗಳಲ್ಲಿ ತಿಳಿಸಿದ್ದರೂ ಉಡಾಫೆಯಾಗಿ ವರ್ತಿಸಿ, ಸಾರ್ವಜನಿಕ ಆಸ್ತಿಪಾಸ್ತಿಗೆ ತೊಂದರೆ ಮಾಡುತ್ತಿದ್ದಾರೆ. ಚಿತ್ರದಲ್ಲಿ ವಿಜಯನಗರ ರೈಲ್ವೆ ಬಡಾವಣೆಯ ಹತ್ತನೇ ಕ್ರಾಸ್‌ನ ಮನೆಯ ಮುಂದೆ ಹಳ್ಳ ತೆಗೆದು, ಅಲ್ಲಿನ ನೀರಿನ ಪೈಪು ಒಡೆದು, ಜೊತೆಗೆ ಮನೆಯ ಮುಂದಿನ ನೂತನ ಸಿಮೆಂಟ್ ಅಳವಡಿಕೆಯನ್ನೂ ಹಾಳು ಗೆಡವಿರುತ್ತಾರೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಕೆಲಸದ ಮುನ್ನ ನಿವಾಸಿಗಳನ್ನು ಸಂಪರ್ಕಿಸಿ, ಗ್ಯಾಸ್, ನೀರು, ವಿದ್ಯುತ್ ಕೇಬಲ್ ಎಲ್ಲಿ ಹೋಗಿದೆ ಎಂಬುದನ್ನು ಖಚಿತಪಡಿಸಿಕೊಂಡು, ಯಾರಿಗೂ ತೊಂದರೆಯಾಗದಂತೆ ಕ್ರಮ ವಹಿಸುವುದು ಅವಶ್ಯಕ. ವಿದ್ಯುತ್ ಕಂಬಗಳ ಮೂಲಕ ವಿದ್ಯುತ್ ಪಡೆಯುತ್ತಿದ್ದ ಬಡಾವಣೆಗಳಿಗೆ ಇದರ ಅವಶ್ಯಕವಿಲ್ಲದಿದ್ದರೂ ಅದನ್ನು ಗುತ್ತಿಗೆ ನೀಡಿರುವುದು ಬಹುಶಃ ಇದೂ ಒಂದು ಸರ್ಕಾರದ ಗುಳುಂ ಯೋಜನೆಯೇ ಎಂಬ ಅನುಮಾನವೂ ಕಾಡದಿರಲಾರದಷ್ಟೆ.

–ವಿಜಯ್ ಹೆಮ್ಮಿಗೆ, ಮೈಸೂರು

ನಿರ್ಲಕ್ಷ್ಯಕ್ಕೆ ಒಳಗಾಗಿರುವ ಬೆಳವಾಡಿ ಕೆರೆ



ಮಾನ್ಯರೆ,

ಮೈಸೂರು ತಾಲೂಕಿನ ಬೆಳವಾಡಿ ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾಗಿರುವುದು ಸ್ವಾಗತಾರ್ಹ ಸಂಗತಿಯಾದರೂ, ಗ್ರಾಮದ ನೈಸರ್ಗಿಕ ಸಂಪತ್ತಾದ 'ಬೆಳವಾಡಿ ಕೆರೆ' ಇಂದು ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ವಿಷಾದನೀಯ. ವಿವಿಧ ದೇಶ–ವಿದೇಶಗಳ ನೂರಾರು ಜಾತಿಯ ಪಕ್ಷಿಗಳಿಗೆ ತಾಣವಾಗಿದ್ದ ಈ ಹಸಿರು ಪರಿಸರವು, ಇಂದು ಒಳಚರಂಡಿ ನೀರಿನ ನೇರ ಸಂಪರ್ಕ ಮತ್ತು ತ್ಯಾಜ್ಯದ ರಾಶಿಯಿಂದಾಗಿ ಕಲುಷಿತಗೊಂಡು ನಾರುತ್ತಿದೆ; ಇದರಿಂದಾಗಿ ವಾಯು ವಿಹಾರಿಗಳು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ. ಅತ್ಯಂತ ಕಳವಳಕಾರಿ ವಿಷಯವೆಂದರೆ, ಈ ಕಲುಷಿತ ನೀರನ್ನೇ ಕುಡಿದು ರೈತರ ಜೀವನಾಧಾರವಾದ ಹಸುಗಳು ಕಾಯಿಲೆಗೆ ತುತ್ತಾಗುತ್ತಿವೆ ಹಾಗೂ ಹಲವಾರು ಕುರಿಗಳು ಈಗಾಗಲೇ ಪ್ರಾಣ ಕಳೆದುಕೊಂಡಿವೆ. ಪ್ರಕೃತಿಯ ಮಡಿಲಂತಿರುವ ಈ ಕೆರೆಯ ಹೂಳನ್ನು ತುರ್ತಾಗಿ ತೆಗೆಸಿ, ಒಳಚರಂಡಿ ಹರಿವನ್ನು ತಡೆಗಟ್ಟಿ, ಮಳೆಗಾಲದಲ್ಲಿ ನೀರು ಸಂಗ್ರಹವಾಗುವಂತೆ ಮಾಡುವ ಮೂಲಕ ಹಕ್ಕಿ–ಪಕ್ಷಿಗಳಿಗೆ ಹಾಗೂ ಜಾನುವಾರುಗಳಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಿ, ಈ ಕೆರೆಯನ್ನು ಉಳಿಸಿಕೊಡಬೇಕೆಂದು ಗ್ರಾಮಸ್ಥರ ಪರವಾಗಿ ವಿನಂತಿಸುತ್ತೇನೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಜಲಪುರಿ ಬಡಾವಣೆ ರಸ್ತೆ ಸರಿಪಡಿಸಿ



ಮಾನ್ಯರೆ,

ಮೈಸೂರಿನ ಜಲಪುರಿ ಬಡಾವಣೆಯಲ್ಲಿ 100ಕ್ಕೆ 100ರಷ್ಟು ಪೊಲೀಸರೇ ವಾಸ ಮಾಡುವ ಬಡಾವಣೆಯಾಗಿದೆ. ಪೊಲೀಸ್ ಆಸ್ಪತ್ರೆಯ ಮುಂಭಾಗದ ರಸ್ತೆ ತೀರಾ ಹದಗೆಟ್ಟಿದೆ. ಮತ್ತು ಕಾಳಿಕಾಂಬ ರಸ್ತೆ ದುರಸ್ತಿ ಕಾಮಗಾರಿ ನಡೆಯುತ್ತಿರುವುದರಿಂದ ಕೆಲವು ವಾಹನ ಸವಾರರು ಈ ಮಾರ್ಗದಲ್ಲಿ ಸಂಚರಿಸುತ್ತಾರೆ. ಒತ್ತು ಗೊತ್ತಿಲ್ಲದೇ ಪೊಲೀಸರು ತಮ್ಮ ಕೆಲಸ ಕಾರ್ಯಗಳಿಗೆ ಮಗ್ನರಾಗಬೇಕಾಗಿ ಈ ರಸ್ತೆಯಲ್ಲೇ ಹೋಗಬೇಕಾಗುತ್ತದೆ ಮತ್ತು ಸಾರ್ವಜನಿಕರಿಗೂ ಹಾಗೂ ವಾಹನ ಸಂಚಾರ ಮಾಡಲು ಈ ರಸ್ತೆ ಭಾರಿ ಕಷ್ಟಕರವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ರಸ್ತೆ ಡಾಂಬರೀಕರಣ ಮಾಡಿ ಪಾದಚಾರಿಗಳು ಮತ್ತು ವಾಹನ ಸವಾರರಿಗೆ ಅನುಕೂಲ ಮಾಡಿಕೊಡಬೇಕಾಗಿ ಮನವಿ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಡಾಂಬರೀಕರಣ ಭಾಗ್ಯ ಕಲ್ಪಿಸುವರೇ...!



ಮಾನ್ಯರೆ,

ಮೈಸೂರು ಪಾಲಿಕೆ ವಾರ್ಡ್ ನಂ.21ರ ವ್ಯಾಪ್ತಿಯ ಗಂಗೋತ್ರಿ ಬಡಾವಣೆಯ ಮುಖ್ಯ ರಸ್ತೆ, ಮಾರುತಿ ದೇವಸ್ಥಾನದ ಮುಖ್ಯ ರಸ್ತೆ ಆರ್‌ಟಿಟಿಸಿ ಕಾಂಪೌಂಡ್ ಪಕ್ಕದ ರಸ್ತೆ, ವಾಗ್ದೇವಿನಗರದ ಗಿರಿಗೌಡ ಬ್ಲಾಕ್ ರಸ್ತೆಗಳನ್ನು ಅಗೆದು ಯುಜಿಡಿ ಕಾಮಗಾರಿ ನಡೆಸಿ 2 ತಿಂಗಳಾದರೂ ರಸ್ತೆಗೆ ಡಾಂಬರೀಕರಣವಾಗಿಲ್ಲ. ವಾಹನ ದಟ್ಟಣೆ ಹೆಚ್ಚಾಗಿರುವ ಈ ರಸ್ತೆಗಳು ಗುಂಡಿ ಮತ್ತು ಧೂಳುಮಯ ವಾಗಿದ್ದು, ಭಾರೀ ತೊಂದರೆಯಾಗುತ್ತಿದೆ. ವಿಪರೀತ ಧೂಳಿನಿಂದ ಉಸಿರಾಟಕ್ಕೆ ಕಷ್ಟವಾಗುತ್ತಿದೆ. ಹಿರಿಯರಿಗೆ, ಮಕ್ಕಳಿಗೆ ಅಲರ್ಜಿ, ಕೆಮ್ಮು ಹೆಚ್ಚಾಗುತ್ತಿದ್ದು, ನಿತ್ಯ ನರಕ ಅನುಭವಿಸುವಂತಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು, ಇಲಾಖೆ ಇತ್ತ ಗಮನಹರಿಸಿ ರಸ್ತೆ ಡಾಂಬರೀಕರಣ ಭಾಗ್ಯ ಕಲ್ಪಿಸಬೇಕು ಎಂದು ಮನವಿ. **– ರಮೇಶ್, ಗಂಗೋತ್ರಿ ಬಡಾವಣೆ, ಮೈಸೂರು**



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ

ಕನ್ನಡ ನಾಡಿನಲ್ಲಿ 12–13ನೆಯ ಶತಮಾನದಲ್ಲಿ ಆದ ವಚನ ಕ್ರಾಂತಿಯ ಪರಿಣಾಮವು ನಾಡಿನ ಉದ್ದಗಲಕ್ಕೂ ಜನತೆಯ ಮನದ ಮೇಲೆ ಗಾಢವಾದ ಪರಿಣಾಮವನ್ನು ಬೀರಿ ಅವರ ಒಳ–ಹೊರಗನ್ನು ಶುದ್ಧೀಕರಿಸಲು ಮಾಡಿದ ಯತ್ನವು ಅಷ್ಟಿಷ್ಟಲ್ಲ. ಅಂದು ವಚನ ಲೋಕದ ಕ್ಷಿತಿಜದಲ್ಲಿ ಕಾಣಿಸಿಕೊಂಡ ನಕ್ಷತ್ರಗಳೆಲ್ಲಾ ಅಮೂಲ್ಯವಾದವುಗಳೇ.

ಅಲ್ಲಮ ಪ್ರಭು, ಭಕ್ತಿ ಭಂಡಾರಿ ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಹಡಪದ ಅಪ್ಪಣ್ಣ, ಉರಿಲಿಂಗಿಪೆದ್ದಿ ಒಬ್ಬರೇ ಇಬ್ಬರೇ? ಕಾಯಾವಾಚಾ ಮನಸಾ ಶುದ್ಧಿಯನ್ನು ಬಯಸಿ, ಇಷ್ಟ ಲಿಂಗದ ಪೂಜೆಯ ಮೂಲಕ ಶಿವನನ್ನು ಒಲಿಸಿಕೊಳ್ಳಲು ಸತ್ಯ ನಿಷ್ಠೂರದ ಹಾದಿಯನ್ನು ಆಯ್ಕೆ ಮಾಡಿಕೊಂಡು ತಮ್ಮನ್ನು ತಾವೇ ಪರೀಕ್ಷೆಯ ನಿಕಷಕ್ಕೆ ಒಡ್ಡಿಕೊಳ್ಳುತ್ತಿದ್ದ ಕಠೋರ ಸಾಧಕರು ಅವರು. ತಾವು ತಪ್ಪಿದೆವೆಂದು ಅನಿಸಿದಾಕ್ಷಣ ನಿಷ್ಠೂರ ನುಡಿಗಳಿಂದ ತಮ್ಮನ್ನು ತಾವೇ ಪರೀಕ್ಷಿಸಿಕೊಳ್ಳುತ್ತಿದ್ದ ಆ ಕೆಚ್ಚೆದೆ ಈಗೆಲ್ಲಿ?

ವೀರಶೈವ ಧರ್ಮದಲ್ಲಿ ಗುರು–ಲಿಂಗ–ಜಂಗಮಗಳಿಗೆ ಅತ್ಯಂತ ವಿಶೇಷವಾದ ಸ್ಥಾನ ಉಂಟು. ಭಕ್ತರ ಮನದಲ್ಲಿ ಬೇರೂರಿರುವ ಅವುಗಳ ಆಳ–ಅಗಲಗಳನ್ನು ಊಹಿಸಲೂ ಸಾಧ್ಯವಿಲ್ಲ. ಗುರು ಎಂಬುವನು ಶಿಷ್ಯನಿಗೆ ದಾರಿ ತೋರುವ ದೀವಿಗೆ. ಅವನ ನಡೆ–ನುಡಿ ಎಲ್ಲವೂ ಅತ್ಯಂತ ಸ್ವಚ್ಛ ಸ್ವಚ್ಛವಾಗಿರಬೇಕಾದುದು ಅನಿವಾರ್ಯ. ಹಾಗಿದ್ದಾಗ ಮಾತ್ರ ಅವನು ಶಿಷ್ಯನಿಗೆ ಸನ್ಮಾರ್ಗವನ್ನು ಬೋಧಿಸುವ ಅರ್ಹತೆಯನ್ನು ಪಡೆಯುತ್ತಾನೆ.

ಹಲವಾರು ವೀರಶೈವ ಮಠಗಳಿವೆ. ಅವುಗಳ ಪೀಠಾಧಿಪತಿಯು ಜನರನ್ನು–ಭಕ್ತರನ್ನು ಸರಿಯಾದ ಮಾರ್ಗದಲ್ಲಿ ನಡೆಸಬೇಕಾಗುತ್ತದೆ. ಮೊದಲಾಗಿ ಆತ ವೀರಶೈವ ಧರ್ಮವನ್ನು ಆಳವಾಗಿ ಅಧ್ಯಯನ ಮಾಡಿರಬೇಕು. ವೀರಶೈವ ಕಾವ್ಯಗಳ ಒಳಹೊರಗನ್ನು ತಿಳಿದವನಾಗಿರಬೇಕು. ಅದರಲ್ಲಿ ಗಾಢವಾಗಿ ನಿಷ್ಠೆಯನ್ನು ಹೊಂದಿರಬೇಕು. ತಿಳಿವಿನ ಆಗರವಾದ ವಚನಾಮೃತದ ಸಾರವನ್ನು ಅರಿತಿರಬೇಕು. ತ್ರಿಕರಣಪೂರ್ವಕವಾಗಿ ಪೂಜೆಯ ಒಳಹೊರಗನ್ನು ಅರಿತವನಾಗಿರಬೇಕು. ಎಲ್ಲಕಿಂತ ಮಿಗಿಲಾಗಿ ಮಂಡೆಯಷ್ಟೇ ಅಲ್ಲದೆ ಮನವನ್ನೂ ಬೋಳಾಗಿಸಿಕೊಂಡಿರಬೇಕು. ಅಂತಹ ವಿರಾಗಿ ಆಗಿರಬೇಕು. ಲೌಕಿಕ ಬದುಕಿಗೆ ಆತ ವಿಮುಖನಾಗಿರಬೇಕು. ಶಿವಾನುಭವದ ಮೂರ್ತಿರೂಪವೇ ಗುರು ಆಗಿರಬೇಕು ಅಂದರೆ, ಅದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಅಂತಹ ಗುರುವು ದೊರೆತರೆ, ಯಾವ ಶಿಷ್ಯ ತಾನೆ ತನ್ನನ್ನು ಮಹಾ ಅದೃಷ್ಟಶಾಲಿ ಎಂದು ಭಾವಿಸದೇ ಇರುತ್ತಾನೆ? ಗುರು ಎಂದಿಗೂ ಲಘುವಾಗಿ ವರ್ತಿಸಬಾರದು.

ಲಘು ಗುರುವಪ್ಪನೆ ಗುರು
ಲಘುವಪ್ಪನೆ ಆಗದಾಗದು
ಶ್ರೀ ಗುರು ಲಘುವರ್ತನದಲಿ
ವರ್ತಿಸಿದೊಡೆ ಆಗದು ಆಚಾರ
ಶ್ರೀಗುರು ಲಿಂಗ ಜಂಗಮ ಪ್ರಸಾದವನು
ತಾನೇ ಲಘು ಮಾಡಿ ಲಘುವಾದನಯ್ಯ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ।

ಅಂತಹ ಮಹಾಮಹಿಮ ಓರ್ವ ಗುರುವಿನ ಬಗ್ಗೆ ಈಗ ನಾನು ಹೇಳಹೊರಟಿರುವುದು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಸುತ್ತೂರು ಮಠದ ಶಾಖೆ ಇದೆಯಷ್ಟೆ ಅದರ ಹಿಂಭಾಗದಲ್ಲಿಯೇ ಶ್ರೀ ಗೌರೀಶಂಕರ ಸ್ವಾಮಿಗಳ ಮಠ ಅಥವಾ ಅರಮನೆ ಪಂಚಗವಿ ಮಠವು ಇದ್ದು, ಆ ಸುತ್ತಮುತ್ತಲ ಪ್ರದೇಶವನ್ನು ಗೌರೀಶಂಕರ ನಗರ ಎಂದೇ ಕರೆಯಲಾಗುತ್ತದೆ. ಇದಕ್ಕೆ ಒಂದು ಇತಿಹಾಸ ಇದೆ. ಒಮ್ಮೆ ಮುಮ್ಮಡಿ ಕೃಷ್ಣರಾಜ ಒಡೆಯರರಿಗೆ ಬೆನ್ನುಫಣಿ ಉಂಟಾಗಿ, ಏನೇನು ವೈದ್ಯ ಮಾಡಿಸಿದರೂ ಅದು ಕಡಿಮೆ ಆಗದೆ ಬಹಳ ಬಾಧೆ ಪಡುವಂತಾಯಿತು. ಆಗ ಗವಿಮಠದಲ್ಲಿದ್ದ ಶ್ರೀ ಶಿವಬಸವ ಸ್ವಾಮಿಗಳ ಶಿವನಿಷ್ಠೆ ಹಾಗೂ ಧಾರ್ಮಿಕತೆಯ ಬಗ್ಗೆ ಮಹಾರಾಜರಿಗೆ ತಿಳಿಸಿ, ಅವರು ಮನಸ್ಸು ಮಾಡಿದರೆ, ಇದು ಕಡಿಮೆ ಆಗಬಹುದೆಂದು ತಿಳಿಸಲಾಯಿತು. ಅಂತೆಯೇ ಮುಮ್ಮಡಿಯವರು ಶ್ರೀ ಶಿವಬಸವ ಸ್ವಾಮಿಗಳನ್ನು ಸಂಪರ್ಕಿಸಿದಾಗ, ಅದು ಕೇವಲ ರೋಗವನ್ನು ಕಡಿಮೆ ಮಾಡಿಕೊಳ್ಳುವುದಲ್ಲ, ಅನುಷ್ಠಾನಪೂರ್ವಕವಾಗಿ ಪ್ರಯತ್ನ ಮಾಡಬೇಕಾಗುತ್ತದೆ ಎಂದು ಹೇಳಿದಾಗ, ಮುಮ್ಮಡಿಯವರು ಅದಕ್ಕೆ ಒಪ್ಪಿ, ಅಂತೆಯೇ ಗೈದು ತಮ್ಮ ರೋಗವನ್ನು ಗುಣಮಾಡಿಕೊಳ್ಳುತ್ತಾರೆ. ಅದಕ್ಕೆ ಕಟ್ಟುನಿಟ್ಟಾದ ನೇಮ ನಿಷ್ಠೆಗಳನ್ನೂ ಮಾಡುತ್ತಾರೆ. ರೋಗ ವಾಸಿಯಾದಾಗ, ಅತೀವ ಸಂತಸದಿಂದ ಅವರು ಆ ಗವಿಮಠದ ಸುತ್ತಮುತ್ತಲಿನ ಮುವತ್ತು ಎಕರೆ ಜಾಗವನ್ನು ಅವರಿಗೆ ದಾನವಾಗಿ ನೀಡುತ್ತಾರೆ. ಇದೇ ಆ ಅರಮನೆ ಗವಿಮಠ. ಅರಮನೆಯ ಆಡಳಿತದಲ್ಲಿಯೇ ಇದ್ದ ಈ ಗವಿಮಠದ ಮುಂದಿನ ಪೀಠಾಧಿಕಾರಿಯನ್ನು ಅರಮನೆಯೇ ಆಯ್ಕೆ ಮಾಡುತ್ತದೆ.



ಅರಮನೆ ಶ್ರೀ ಪಂಚಗವಿ ಮಠ, ಮೈಸೂರು.

> ಶಿವಾನುಭವದ ಮೂರ್ತಿರೂಪವೇ ಗುರು ಆಗಿರಬೇಕು ಅಂದರೆ, ಅದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಅಂತಹ ಗುರುವು ದೊರೆತರೆ, ಯಾವ ಶಿಷ್ಯ ತಾನೆ ತನ್ನನ್ನು ಮಹಾ ಅದೃಷ್ಟಶಾಲಿ ಎಂದು ಭಾವಿಸದೇ ಇರುತ್ತಾನೆ? ಗುರು ಎಂದಿಗೂ ಲಘುವಾಗಿ ವರ್ತಿಸಬಾರದು.



ಗೌರಿಶಂಕರ ಸ್ವಾಮೀಜಿ

ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲೂಕಿನ ಉಕ್ಕಲಗೆರೆ ಶ್ರೀ ಬೆಟ್ಟದ ಮಠದ ಲಿಂಗಮ್ಮ ಮತ್ತು ಲಿಂಗಪ್ಪ ಶರಣ ದಂಪತಿ ಮಗನಾಗಿದ್ದ ಶ್ರೀ ಶಂಕರರನ್ನು ಚಿಕ್ಕಂದಿನಲ್ಲಿಯೇ ಗವಿಮಠದ ಆಶ್ರಮಾಧಿಕಾರವನ್ನು ಹೊಸ ಮಠದ ಚರಮೂರ್ತಿ ಶ್ರೀ ಸೋಮಶೇಖರ ಸ್ವಾಮಿಗಳವರ ಹಾಗೂ ಶ್ರೀಮನ್ಮಹಾರಾಜರ ಕೃಪೆಯಿಂದ ಸ್ವೀಕರಿಸಿದರು. ಅವರಲ್ಲಿ ಅಧ್ಯಯನ ಮಾಡುವ ಅಗಾಧ ಹಸಿವೆ ಇತ್ತು. ಅದನ್ನು ಗುರುತಿಸಿದ ಮಹಾರಾಜರು ಅವರನ್ನು ಹೆಚ್ಚಿನ ಅಧ್ಯಯನಕ್ಕಾಗಿ ಕಾಶಿಗೆ ಕಳುಹಿಸುತ್ತಾರೆ. ಅಲ್ಲಿ ಸುದೀರ್ಘವಾದ ಕಾಲದಲ್ಲಿ ಅಧ್ಯಯನ ಮಾಡಿ ವೇದ, ವೇದಾಂತ, ತರ್ಕ, ವ್ಯಾಕರಣ ಮುಂತಾದ ಶಾಸ್ತ್ರಗಳನ್ನು, ಹಿಂದಿ, ಬಂಗಾಲಿ, ಸಂಸ್ಕೃತ, ಇಂಗ್ಲಿಷ್ ಮೊದಲಾದ ಭಾಷೆಗಳಲ್ಲಿ ಪರಿಣತಿಯನ್ನು ಗಳಿಸಿದ್ದಲ್ಲದೆ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಗಾಂಧೀಜಿ, ಮದನಮೋಹನ ಮಾಲವೀಯ, ಕೃಪಲಾನಿ ಮುಂತಾದ ರಾಜಕೀಯ ಧುರೀಣರೊಡನೆ ಸಂಪರ್ಕಕ್ಕೂ ಬಂದರು.

ಹೀಗೆ ಮೂರು ನಾಕು ದಶಕಗಳ ಕಾಲ ಕಾಶಿಯಲ್ಲಿದ್ದು, ವಿದ್ಯೆಯನ್ನು ಸಂಪಾದಿಸಿದಲ್ಲದೆ, ಕಾಶೀ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದರು. ಎಲ್ಲ ವಿದ್ವಜ್ಜನರ ಆದರ, ಗೌರವಗಳಿಗೆ ಪಾತ್ರರಾಗಿ, ಅವರು ಕೊನೆಗೆ ಮೈಸೂರಿಗೆ ಆಗಮಿಸುತ್ತಾರೆ. ಮೈಸೂರಿನ ಅರಮನೆಯ ರಾಜಮಾತೆ ಒಬ್ಬರು ತಾವು ತಮ್ಮ ಕೊನೆಯ ದಿನಗಳನ್ನು ಕಾಶಿಯಲ್ಲಿಯೇ ಕಳೆಯಲು ಇಚ್ಛಿಸಿ, ನಿತ್ಯವೂ ಆತ್ಮಬೋಧನೆಯ ಅಮೃತವನ್ನು ಎರೆದು, ಅವರಿಗೆ ಪವಿತ್ರ ಪಾದೋದಕವನ್ನುನೀಡಿ, ಅವರ ಮನಸ್ಸಿಗೆ ತಂಪನ್ನೆರೆಯುತ್ತಿದ್ದರು. ಅವರ ದೇಹಾಂತ ಆದ ಕೂಡಲೇ ಮೈಸೂರಿನತ್ತ ಮುಖ ಮಾಡಿದರು.

ಅವರು ಮೈಸೂರಿನಲ್ಲಿ ಇದ್ದುದು ಕೇವಲ ಕೆಲವೇ ವರುಷಗಳು. (1946–1952) ಆದರೆ, ಅಷ್ಟರಲ್ಲಿ ಜನರ ಮನಸ್ಸಿನ ಮೇಲೆ ಅವರು ಬೀರಿದ ಪ್ರಭಾವವು ಅಗಾಧವಾದುದು. ಅವರಿಗೂ ಸುತ್ತೂರಿನ ಮಠಕ್ಕೂ ಅತ್ಯಂತ ನಿಕಟ ಸಂಪರ್ಕ ಉಂಟಾಯಿತು. ಆಗ ಶ್ರೀ ರಾಜೇಂದ್ರ ಮಹಾಸ್ವಾಮಿಗಳು ಮೈಸೂರಿನ ಗ್ರಾಮಾಂತರ ಪ್ರದೇಶಗಳಲ್ಲಿ ಜ್ಞಾನ ದಾಸೋಹ ಮತ್ತು ಉಚಿತ ಪ್ರಾಸಾದ ನಿಲಯಗಳನ್ನು ಆರಂಭಿಸುವ ಕಾಯಕದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಕಾಶಿಯಲ್ಲಿ ಬೇರೆ ಬೇರೆ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿದ್ದರೂ ಶ್ರೀ ಗೌರೀಶಂಕರರಿಗೆ ತಮ್ಮ ತಾಯಿನುಡಿಯಾದ ಕನ್ನಡದ ಬಗ್ಗೆ ಅಭಿಮಾನ ಎಳ್ಳಷ್ಟೂ ಕಡಿಮೆ ಆಗಿರಲಿಲ್ಲ. ಹರಿಹರ, ರಾಘವಾಂಕರ ಕಾವ್ಯಗಳನ್ನು, ವಚನ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದ್ದಲ್ಲದೆ ವಚನಗಳಿಗೆ ಅವರು ನೀಡುತ್ತಿದ್ದ ವ್ಯಾಖ್ಯಾನವು ಎಂಥವರನ್ನೂ ಮರುಳು ಮಾಡುವಂತೆ ಇತ್ತು. ಅವರ ಪ್ರವಚನಗಳಿಗೆ ಭಕ್ತರು ಪ್ರವಾಹೋಪಾದಿಯಲ್ಲಿ ಬರುತ್ತಿದ್ದರು. ಈ ಹಿಂದೆ ಎಂದೂ ಕಾಣದಿದ್ದ ನವ ಚೈತನ್ಯವೊಂದು ಅಲ್ಲಿ ಪುಟಿಯಲು ಆರಂಭಿಸಿತ್ತು. ಶ್ರೀಮನ್ನಾಲ್ವಡಿ ಕೃಷ್ಣರಾಜರ ಧರ್ಮಪತ್ನಿಯವರು ಗವಿಮಠಕ್ಕೆ ವಿದ್ಯುದ್ದೀಪಗಳನ್ನು ಒದಗಿಸಿದರು. ಗವಿಮಠದಲ್ಲಿಯೂ, ಕ್ಯಾತನಹಳ್ಳಿ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ಅವರ ಉಪನ್ಯಾಸಗಳು ಏರ್ಪಟ್ಟವು. ಮೈಸೂರಿನಲ್ಲಿ ವೀರಶೈವ ಯುವಕರ ಸಂಘವೊಂದು ಆರಂಭವಾಯಿತು. ಯುವ ಜನತೆಯನ್ನು ಸನ್ಮಾರ್ಗದಲ್ಲಿ ನಡೆಸುವ ದಿಸೆಯಲ್ಲಿ ಇದು ಮಾಡಿದ ಕಾರ್ಯವು ಅತ್ಯಂತ ಸ್ತುತ್ಯಾರ್ಹವಾದುದು. ಸಮಾಜಸೇವೆ ಮಾಡಬೇಕೆನ್ನುವ ಬೀಜವನ್ನು ಯುವಕರ ಎದೆಯಲ್ಲಿ ನಟ್ಟ ಮಹಿಮಾನ್ವಿತರು ಅವರು.

ಅವರು ಅದೆಷ್ಟು ಸರಳರಾಗಿದ್ದರೆಂದರೆ, ತಮ್ಮ ಫೋಟೋವನ್ನು ತೆಗೆಯಲು ಎಂದೂ ಅನುಮತಿ ಕೊಟ್ಟಿರಲಿಲ್ಲ. ಅಣ್ಣ ಬಸವಣ್ಣ ಮತ್ತು ಅಕ್ಕ ಮಹಾದೇವಿಯವರ ಬಗ್ಗೆ ಅವರಿಗೆ ಇದ್ದ ಅಚಲ ನಿಷ್ಠೆಯು ಅವರಿಂದ ಕನ್ನಡದಲ್ಲಿ ಚಂಪೂ ಶೈಲಿಯಲ್ಲಿ ಅಕ್ಕನನ್ನು ಕುರಿತ ಒಂದು ಕಾವ್ಯ ರಚನೆಗೆ ಪ್ರೇರೇಪಣೆ ನೀಡಿತ್ತು. ಅಪೂರ್ಣವಾದರೂ ತನ್ನ ಸುಭಗವಾದ ಕಾವ್ಯ ಶೈಲಿಯಿಂದ ಇದು ಓದುಗರನ್ನು ಆಕರ್ಷಿಸುತ್ತಲೇ ಇದೆ. ಒಮ್ಮೆ ಅವರಿಗೆ ಶ್ರೀ ಪರಂಜ್ಯೋತಿ ಸ್ವರೂಪರಾದ ಶ್ರೀ ಶಿವರಾತ್ರೀಶ್ವರರು ನೀಡಿದ ದರುಶನದಿಂದ ಅವರ ಭಾವಚಿತ್ರವನ್ನು ಹೇಳಿ ಬರೆಯಿಸಿ, ಅದನ್ನು ಸಾಕಾರಗೊಳಿಸಿದರು. ಅಹಂಕಾರ, ಮಮಕಾರಗಳನ್ನು ಬಿಡಬೇಕು. ಆಗ ಮಾತ್ರ ನಮ್ಮ ಉದ್ಧಾರ ಎಂದು ಹೇಳುತ್ತಿದ್ದ ಅವರು ನಡೆ–ನುಡಿ ಎರಡನ್ನೂ ಒಂದಾಗಿಸಿ ಬಾಳಿದ ಮಹಾನುಭಾವರು.


ಗೃಹಲಕ್ಷ್ಮಿ ಡಿಜಿಟಲ್ ಮಾರ್ಕೆಟಿಂಗ್ ಆಪ್ ಬಿಡುಗಡೆ

ಮೈಸೂರು: ಕರ್ನಾಟಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಫೆ.9ರಂದು ಗೃಹಲಕ್ಷ್ಮೀ ಡಿಜಿಟಲ್ ಮಾರ್ಕೆಟಿಂಗ್ ಆಪ್ ಅನ್ನು ಬಿಡುಗಡೆ ಮಾಡಲಾಗುತ್ತದೆ. ಮಹಿಳೆಯರನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿಗೊಳಿಸಲು ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಂಡಿರುವ ಮಹಿಳಾ ಉದ್ಯಮಿದಾರರನ್ನಾಗಿ ಮಾಡಲು ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಗೃಹಲಕ್ಷ್ಮೀ ಡಿಜಿಟಲ್ ವೇದಿಕೆ ಸೌಲಭ್ಯ ಕಲ್ಪಿಸಲಾಗಿರುತ್ತದೆ.

ಆದ್ದರಿಂದ ಮಹಿಳಾ ಉದ್ಯಮಿಗಳ ನೋಂದಣಿ ಕಾರ್ಯ ಕೈಗೊಳ್ಳಲು ಸ್ತ್ರೀ ಶಕ್ತಿ ಸ್ವಸಹಾಯ ಗುಂಪಿನ ಸದಸ್ಯರು, ಫಲಾನುಭವಿಗಳು, ಉದ್ಯಮಿಗಳು, ಅಕ್ಕ ಕೆಫೆ ಘಟಕಗಳನ್ನು ನಿರ್ವಹಿಸುತ್ತಿರುವ ಮಹಿಳೆಯರು, ಉದ್ಯಮಿಗಳು ಮೂಲಕ ತರಬೇತಿ ಪಡೆದು ಸ್ವ ಉದ್ಯೋಗ ನಡೆಸುತ್ತಿರುವ ಸೇರಿದ ಅರ್ಹ ಮಹಿಳಾ ಉದ್ಯಮಿಗಳು ಅರ್ಜಿ ಸಲ್ಲಿಸಬಹುದು. ನಿಗಮದಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಸೌಲಭ್ಯ ಪಡೆದ ಮಹಿಳಾ ಫಲಾನುಭವಿಗಳು, ಜಿಲ್ಲಾ ತಾಲೂಕು ಮತ್ತು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇತರೆ ಯಶಸ್ವಿ ಮಹಿಳಾ ಉದ್ಯಮಿಗಳು ತಾವು ತಯಾರಿಸುವ ಉತ್ಪನ್ನಗಳ ಮಾಹಿತಿಯನ್ನು ಕೃಷ್ಣದೇವರಾಯ ವೃತ್ತ(ಕೆ.ಡಿಸರ್ಕಲ್) ವಿಜಯನಗರ 2ನೇ ಹಂತದಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ತಮ್ಮ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ: 0821–2495432 ಸಂಪರ್ಕಿಸಬಹುದಾಗಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.7–ಹೂಟಗಳ್ಳಿ–ವಾಜಮಂಗಲ–ಟಿ.ಕೆ ಹಳ್ಳಿ ಏಕಮುಖ ವಿದ್ಯುತ್ ಪ್ರಸರಣ ಮಾರ್ಗದ ಬದಲಾಗಿ ದ್ವಿ ಮುಖ ಗೋಪುರ ಹಾಗೂ ದ್ವಿ–ಮುಖ ವಿದ್ಯುತ್ ಮಾರ್ಗವನ್ನಾಗಿ ನಿರ್ಮಿಸುವ ಕಾಮಗಾರಿ ನಿಮಿತ್ತ ಫೆ.8ರಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ಆರ್.ಬಿ.ಐ ರಸ್ತೆ, ಜಿ.ಆರ್.ಎಸ್ ಫ್ಯಾಂಟಸಿ ಪಾರ್ಕ್ ಸುತ್ತಮುತ್ತ, ವಿಪ್ರೋ ರಸ್ತೆ, ಆರ್.ಬಿ.ಐ ಮೇನ್‌ಗೇಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.



ಒಳ ಮೀಸಲಾತಿ ಸಂಬಂಧ ಚರ್ಚೆ...



ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಒಳ ಮೀಸಲಾತಿ ಸಂಬಂಧ ಮೈಸೂರು ವಿವಿ ಸಂಶೋಧಕರ ಜೊತೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಚರ್ಚೆ ನಡೆಸಿದರು. ಈ ವೇಳೆ ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ ಕುಮಾರ್, ರಾಜ್ಯ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಕೆಪಿಸಿಸಿ ಕಾರ್ಯದರ್ಶಿ ನರೇಂದ್ರ ನಾಗವಾಲ, ಸಿಂಡಿಕೇಟ್ ಸದಸ್ಯ ನಟರಾಜ್, ವಕೀಲರಾದ ತಿಮ್ಮಯ್ಯ, ಕಾಂತರಾಜ್, ಪುಟ್ಟರಸ ಇನ್ನಿತರರಿದ್ದರು.

ಡಾ.ಬಿ.ಆರ್. ಅಂಬೇಡ್ಕರ್ ಫ್ಲೆಕ್ಸ್‌ಗೆ ಅಪಮಾನ ಆರೋಪ

ಯರಗನಹಳ್ಳಿಯಲ್ಲಿ ಸ್ಥಳೀಯರಿಂದ ಪ್ರತಿಭಟನೆ

ಮೈಸೂರು,ಫೆ.7(ಜಿಎ)–ಫ್ಲೆಕ್ಸ್ ತೆರವುಗೊಳಿಸುವ ನೆಪದಲ್ಲಿ ಡಾ.ಅಂಬೇಡ್ಕರ್ ಫ್ಲೆಕ್ಸ್‌ಗೆ ಅಪಮಾನ ಮಾಡಿದ ಆರೋಪದ ಹಿನ್ನೆಲೆಯಲ್ಲಿ ಸ್ಥಳೀಯರು ಪಾಲಿಕೆಯ ಅಭಯ್ ತಂಡದ ವಿರುದ್ಧ ಯರಗನಹಳ್ಳಿಯಲ್ಲಿ ಪ್ರತಿಭಟನೆ ನಡೆಸಿದ್ದಾರೆ.

ಮೈಸೂರು ನಗರಪಾಲಿಕೆ ವ್ಯಾಪ್ತಿಯ ಯರಗನಹಳ್ಳಿ ಅಂಬೇಡ್ಕರ್ ಮಹಾದ್ವಾರ ಗುದ್ದಲಿ ಪೂಜೆ ಕಾರ್ಯಕ್ರಮ ನಡೆಸಲಾಗಿತ್ತು. ಇದಕ್ಕಾಗಿ ಮಹದೇವಪ್ಪ ವೃತ್ತ(ಟೆರೇಷಿಯನ್ ಕಾಲೇಜು ವೃತ್ತ) ಸೇರಿ ದೇವೇಗೌಡ ವೃತ್ತದವರೆಗೂ ಅಂಬೇಡ್ಕರ್ ಫ್ಲೆಕ್ಸ್ ಹಾಕಲಾಗಿತ್ತು. ಈ ವೇಳೆ ಅನುಮತಿ ಮುಗಿದ ಹಿನ್ನೆಲೆಯಲ್ಲಿ ಎಲ್ಲಾ ಫ್ಲೆಕ್ಸ್‌ಗಳನ್ನು ಪಾಲಿಕೆಯ ಅಭಯ ತಂಡ ತೆರವುಗೊಳಿಸಿದೆ. ವೃತ್ತದಲ್ಲಿದ್ದ ಅಂಬೇಡ್ಕರ್ ಫ್ಲೆಕ್ಸ್ ತೆರವುಗೊಳಿಸಿ ಪಕ್ಕದಲ್ಲಿ ಇಟ್ಟಿದ್ದು, ಗಾಳಿಗೆ ಫ್ಲೆಕ್ಸ್ ತಲೆಕೆಳಕಾಗಿದೆ. ಇದನ್ನು ಗಮನಿಸಿದ ಸ್ಥಳೀಯರು ಅಂಬೇಡ್ಕರ್ ಫ್ಲೆಕ್ಸ್‌ಗೆ ಅಪಮಾನ ಮಾಡಲಾಗಿದೆ ಎಂದು ಆರೋಪಿಸಿ ಪ್ರತಿಭಟಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಶಾಸಕ ತನ್ವೀರ್ ಸೇಠ್ ಗಣ್ಯರ ಫ್ಲೆಕ್ಸ್‌ಗಳನ್ನು ಗೌರವಯುತವಾಗಿ ವಿಲೇವಾರಿ ಮಾಡಬೇಕು. ಹೀಗೆ ಅಪಮಾನ ಮಾಡುವುದು ಸರಿಯಲ್ಲ ಎಂದು ಅಭಯ್ ತಂಡದ ಪಾಲಿಕೆ ವಿರುದ್ಧ ಕಿಡಿಕಾರಿದ್ದಾರೆ. ಬಳಿಕ ಪ್ರತಿಭಟನಾಕಾರರ ಆಶಯದಂತೆ ಅದೇ ಸ್ಥಳದಲ್ಲಿ ಮತ್ತೆ ಫ್ಲೆಕ್ಸ್ ಕಟ್ಟಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಪ್ರತಿಭಟನಾಕಾರರು ನಿನ್ನೆ ಕಾರ್ಯಕ್ರಮ ನಡೆದಿದೆ. ರಾಜಕಾರಣಿಗಳ ಫೋಟೊಗಳನ್ನು ಅನೇಕ ದಿನಗಳವರೆಗೂ ಬಿಡುತ್ತಾರೆ. ಅಂಬೇಡ್ಕರ್ ಚಿತ್ರವನ್ನು ಒಂದೇ ದಿನಕ್ಕೆ ತೆರವು ಮಾಡಿದ್ದಾರೆ. ನಮ್ಮ ಸಂಘಟನೆಯಿಂದ ಇದುವರೆಗೂ ನಾವೇ ಫ್ಲೆಕ್ಸ್ ಹಾಕಿ ನಾವೇ ತೆರವು ಮಾಡುತ್ತಿದ್ದೇವೆ. ನಮ್ಮ ಗಮನಕ್ಕೂ ತಾರದೇ ತೆರವುಗೊಳಿಸಿ, ಕಸದೊಟ್ಟಿಗೆ ಬಿಸಾಡುವ ಮೂಲಕ ರಾಷ್ಟ್ರ ನಾಯಕರಿಗೆ ಅಪಮಾನ ಮಾಡಿದ್ದರಿಂದ ಅನಿವಾರ್ಯವಾಗಿ ಪ್ರತಿಭಟಿಸಬೇಕಾಯಿತೆಂದು ಹೇಳಿದರು.

ಪ್ರತಿಭಟನೆಯಲ್ಲಿ ಅಹಿಂದ ಜವರಪ್ಪ, ಆನಂದ್, ವಿನೋದ್, ಸೋಮಶೇಖರ್, ದೊರೆಸ್ವಾಮಿ, ಪುಟ್ಟರಾಜು ಮತ್ತಿತರರು ಉಪಸ್ಥಿತರಿದ್ದರು.



ಅಂಬೇಡ್ಕರ್ ಫ್ಲೆಕ್ಸ್‌ಗೆ ಅಪಮಾನ ಮಾಡಿದ ಆರೋಪದ ಹಿನ್ನೆಲೆಯಲ್ಲಿ ಪಾಲಿಕೆಯ ಅಭಯ್ ತಂಡದ ವಿರುದ್ಧ ಯರಗನಹಳ್ಳಿಯಲ್ಲಿ ಸ್ಥಳೀಯರು ಪ್ರತಿಭಟನೆ ನಡೆಸಿದರು.

ನಾಳೆ ಐಎಎಸ್, ಕೆಎಎಸ್ ಪರೀಕ್ಷೆಗಳ ತರಬೇತಿ ಶಿಬಿರ

ಮೈಸೂರು,ಫೆ.7–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಫೆ.9ರಂದು 50 ದಿನಗಳ ಐಎಎಸ್ ಮತ್ತು ಕೆಎಎಸ್ ಪರೀಕ್ಷೆಗಳ ತರಬೇತಿ ಶಿಬಿರವನ್ನು ಬೆಳಗ್ಗೆ 11 ಗಂಟೆಗೆ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಲಿದ್ದಾರೆ. ಆಡಳಿತ ತರಬೇತಿ ಸಂಸ್ಥೆ ಜಂಟಿ ನಿರ್ದೇಶಕಿ ಸಾಧನಾ ಎ. ಪೋಟೆ ಶಿಬಿರಾರ್ಥಿಗಳಿಗೆ ಶುಭ ಹಾರೈಸಿ ಪರೀಕ್ಷಾ ತಯಾರಿ ಕ್ರಮದ ಬಗ್ಗೆ ಮಾರ್ಗದರ್ಶನ ನೀಡಲಿದ್ದಾರೆ. ಕುಲಸಚಿವ ಪ್ರೊ.ನವೀನ್‌ಕುಮಾರ್ ಎಸ್.ಕೆ ಉಪಸ್ಥಿತರಿರುವರು ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೃಗಾಲಯದಲ್ಲಿ ಜೀಬ್ರಾ 'ಪ್ರಾಚಿ' ಸಾವು



ಮೈಸೂರು, ಫೆ.7(ಎಂಟಿವೈ)– ಮೈಸೂರು ಮೃಗಾಲಯದಲ್ಲಿದ್ದ 10 ವರ್ಷದ 'ಪ್ರಾಚಿ' ಹೆಸರಿನ ಹೆಣ್ಣು ಜೀಬ್ರಾ ಶನಿವಾರ ಬೆಳಗ್ಗೆ ಅಸುನೀಗಿದೆ.

ಕರುಳಿನ ಸಮಸ್ಯೆಯಿಂದ ಬಳಲುತ್ತಿದ್ದ ಪ್ರಾಚಿ ಕಳೆದ ಎರಡು ದಿನದ ಹಿಂದಷ್ಟೇ ಹೆಣ್ಣು ಮರಿಗೆ ಜನ್ಮ ನೀಡಿತ್ತು. ಈ ವೇಳೆ ಅಸ್ವಸ್ಥಗೊಂಡಿತ್ತು. ಮೃಗಾಲಯದ ಪಶು ವೈದ್ಯರು ಮತ್ತು ಪಾಲಕರು ಪ್ರಾಚಿಗೆ ಸೂಕ್ತ ಚಿಕಿತ್ಸೆ ನೀಡಿ ಆರೈಕೆ ಮಾಡುತ್ತಿದ್ದರು. ಆದರೆ, ಶನಿವಾರ ಬೆಳಗ್ಗೆ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದೆ.

ಎರಡು ದಿನಗಳ ಹಿಂದಷ್ಟೇ ಜನಿಸಿದ ಹೆಣ್ಣು ಮರಿಗೆ ಪಾಲಕರು ಹಾಲುಣಿಸಿ ಆರೈಕೆ ಮಾಡುತ್ತಿದ್ದಾರೆ. ಅದರ ಆರೋಗ್ಯ ಉತ್ತಮವಾಗಿದ್ದು, ಪಶುವೈದ್ಯರ ಮೇಲ್ವಿಚಾರಣೆಯಲ್ಲಿ ಮರಿಯತ್ತ ನಿಗಾ ಇಡಲಾಗಿದೆ. 2018ರ ಸೆ.4ರಂದು ಇಸ್ರೇಲ್‌ನ ರಾಮತ್ ಗ್ಯಾನ್‌ನಲ್ಲಿರುವ ಮೃಗಾಲಯದಿಂದ ಮೈಸೂರು ಮೃಗಾಲಯಕ್ಕೆ ಇದನ್ನು ತರಲಾಗಿತ್ತು. ಮೈಸೂರು ಮೃಗಾಲಯಕ್ಕೆ ಬಂದ ಬಳಿಕ ಈಗಾಗಲೇ ಐದು ಮರಿಗಳಿಗೆ ಜನ್ಮ ನೀಡಿತ್ತು ಆರನೇ ಮರಿಗೆ ಜನ್ಮ ನೀಡಿದ ಬಳಿಕ ಅನಾರೋಗ್ಯಕ್ಕೆ ತುತ್ತಾಗಿತ್ತು. ಮೃಗಾಲಯಕ್ಕೆ ಬರುವ ಪ್ರವಾಸಿಗರು ಹಾಗೂ ಮಕ್ಕಳಿಗೆ ತನ್ನ ಮೈ ಬಣ್ಣ, ಮೈಮೇಲಿನ ಪಟ್ಟೆಯಿಂದಲೇ ಆಕರ್ಷಿಸುತ್ತಿತ್ತು. ಮರಣೋತ್ತರ ಪರೀಕ್ಷೆ ಬಳಿಕ ಸಂಜೆ ವೇಳೆಗೆ ನಿಯಮಾನುಸಾರ ಜೀಬ್ರಾದ ಅಂತ್ಯಕ್ರಿಯೆ ನೆರವೇರಿಸಲಾಗಿದೆ.

ಮಕ್ಕಳಲ್ಲಿ ಸಾಮಾಜಿಕ ಚಿಂತನೆ, ಮಾನವೀಯತೆ ಬೆಳೆಸಿ

ರಂಗಾಂತರಂಗ ಮಕ್ಕಳ ನಾಟಕೋತ್ಸವಕ್ಕೆ ಮೈಮ್ ರಮೇಶ್ ಚಾಲನೆ

ಮೈಸೂರು, ಫೆ.7– ಮಕ್ಕಳಲ್ಲಿ ಸಾಮಾಜಿಕ ಚಿಂತನೆ ಹಾಗೂ ಮಾನವೀಯತೆ ಬೆಳೆಸಿ ಎಂದು ರಂಗಕರ್ಮಿ ಮೈಮ್ ರಮೇಶ್ ಕರೆ ನೀಡಿದರು.

ರಂಗಾಂತರಂಗ ತಂಡವು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಏರ್ಪಡಿಸಿರುವ ಎರಡು ದಿನಗಳ ಮಕ್ಕಳ ನಾಟಕೋತ್ಸವಕ್ಕೆ ಶನಿವಾರ ಚಾಲನೆ ನೀಡಿ ಮಾತನಾಡಿದ ಅವರು, ಇದರ ಜೊತೆಗೆ ಸಂಸ್ಕೃತಿ, ಸಂಸ್ಕಾರವನ್ನು ಕೂಡ ಕಲಿಸಿ ಎಂದು ಪೋಷಕರಿಗೆ ಸಲಹೆ ನೀಡಿದರು.

ಪ್ರಸ್ತುತ ಸಮಾಜ ಹಾಳಾಗುತ್ತಿದೆ. ಪೋಷಕರು, ಮಕ್ಕಳು ರಿಯಾಲಿಟಿ ಶೋ, ಧಾರಾವಾಹಿಗಳನ್ನು ನೋಡಿಕೊಂಡು ಕೂರುತ್ತಾರೆ. ಇದರಿಂದ ಮಕ್ಕಳ ಮನೋವಿಕಾಸ ಆಗುತ್ತಿಲ್ಲ ಪೋಷಕರು ಹಾಗೂ ಶಿಕ್ಷಕರು. ಮಕ್ಕಳನ್ನು ತಿದ್ದಬೇಕು. ಡಾ.ಬಿ.ಆರ್. ಅಂಬೇಡ್ಕರ್, ಬಸವಣ್ಣ, ಮಹಾತ್ಮಗಾಂಧಿ ಮೊದಲಾದ ಮಹನೀಯರ ಬಗ್ಗೆ ತಿಳಿಸಿಕೊಡಬೇಕು ಎಂದು ಅವರು ಹೇಳಿದರು.

ಮಕ್ಕಳ ನಾಟಕಗಳನ್ನು ಪೋಷಕರು ಕೂಡ ನೋಡಿ, ಸಂವಾದಿಸಬೇಕು ಎಂದ ಅವರು, ರಂಗಭೂಮಿಯಲ್ಲಿ ಮಾತ್ರ ವಾಕ್ ಸ್ವಾತಂತ್ರ್ಯಕ್ಕೆ ಅವಕಾಶವಿದೆ. ಮೊದಲು ಬೀದಿ ನಾಟಕಗಳ ಮೂಲಕವೇ ಸಮಾಜದ ಓರೆಕೋರೆಗಳನ್ನು ಹೇಳಲಾಗುತ್ತಿತ್ತು ಎಂದರು.



ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ರಂಗಾಂತರಂಗ ಏರ್ಪಡಿಸಿರುವ ಮಕ್ಕಳ ನಾಟಕೋತ್ಸವವನ್ನು ರಂಗಕರ್ಮಿ ಮೈಮ್ ರಮೇಶ್ ಉದ್ಘಾಟಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಶಿಕ್ಷಣವು ಮಕ್ಕಳ ಬಾಲ್ಯವನ್ನು ಕಸಿಯಬಾರದು. ಮಕ್ಕಳ ವ್ಯಕ್ತಿತ್ವ ಬೆಳವಣಿಗೆಗೆ ಈ ರೀತಿಯ ನಾಟಕೋತ್ಸವಗಳು ನೆರವಾಗುತ್ತವೆ ಎಂದರು.

ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಎಸ್. ಅನಿತಾ ಮಾತನಾಡಿ, ಮಕ್ಕಳನ್ನು ಎರಡು– ಮೂರು ಗಂಟೆಗಳಾದರೂ ಸಾಮಾಜಿಕ ಜಾಲತಾಣ, ಟಿವಿ, ಮೊಬೈಲ್‌ಗಳಿಂದ ಹೊರಗೆ ತರಬೇಕು ಎಂಬ ಉದ್ದೇಶದಿಂದ ರಂಗಾಂತರಂಗ ತಂಡದೊಂದಿಗೆ ಒಡಂಬಡಿಕೆ ಮಾಡಿಕೊಂಡು, ಉತ್ತೇಜನ ನೀಡಲಾಗುತ್ತಿದೆ ಎಂದರು.

ಲೇಖಕ ಬಾರುಕೋಲು ಬಿ.ಆರ್. ರಂಗಸ್ವಾಮಿ ಮಾತನಾಡಿ, ಮಕ್ಕಳನ್ನು ವಿಶ್ವಮಾನವರನ್ನಾಗಿ ಮಾಡಬೇಕು. ಅವರಲ್ಲಿ ವಿಶ್ವಪ್ರಜ್ಞೆ ಬೆಳೆಸಬೇಕು ಎಂದರು.

ಲೇಖಕ ನಾ. ದಿವಾಕರ ಪ್ರಾಸ್ತಾವಿಕ ಭಾಷಣ ಮಾಡಿ, ರಂಗಭೂಮಿಯಲ್ಲಿ ದುಡಿಯುವುದು ಕಷ್ಟ, ಇದು ಸಿನಿಮಾ ರೀತಿ ಅಲ್ಲ. ಕೀರ್ತಿರಾಜ್ ಅವರು ಗ್ರಾಮಾಂತರ ಪ್ರದೇಶಗಳ ಶಾಲೆಗಳಿಗೆ ಭೇಟಿ ನೀಡಿ, ಮಕ್ಕಳಿಗಾಗಿಯೇ ನಾಟಕಗಳನ್ನು ಮಾಡುವ ಕೆಲಸ ಮಾಡುತ್ತಿದ್ದಾರೆ ಎಂದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸಿದ್ದರು. ನಾಟಕಕಾರ ಮೂರ್ತಿ ದೇರಾಜೆ ಮಾತನಾಡಿದರು. ರಂಗಾಂತರಂಗ ತಂಡದ ಅಧ್ಯಕ್ಷ ಕೆಎಂ. ಕೀರ್ತಿರಾಜ್ ಇದ್ದರು. ವೆಂಕಟೇಶ್ ಈಡಿಗರ್ ಕಾರ್ಯಕ್ರಮ ನಿರೂಪಿಸಿದರು. ಭವ್ಯಾ ಅವರನ್ನು ಸನ್ಮಾನಿಸಲಾಯಿತು.

ನಂತರ ವಾರಾಂತ್ಯ ತರಬೇತಿಯ ಮಕ್ಕಳು ಹುಲಿ ಬೇಟೆಯ ಹಿಂದೆ.. ಮುಂದೆ ನಾಟಕ ಪ್ರದರ್ಶಿಸಿದರು.

ರೇಷ್ಮೆ ಕೃಷಿ ಪ್ರಶಸ್ತಿಗಾಗಿ ರೇಷ್ಮೆ ಬೆಳೆಗಾರರಿಂದ ಅರ್ಜಿ ಆಹ್ವಾನ

ಮೈಸೂರು: ಜಿಲ್ಲೆ ರೇಷ್ಮೆ ಇಲಾಖೆಯ ವತಿಯಿಂದ 2023–24 ಹಾಗೂ 2024–25ನೇ ಸಾಲಿನ ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಉತ್ತಮ ಪ್ರಗತಿ ಸಾಧಿಸಿರುವ ರೇಷ್ಮೆ ಬೆಳೆಗಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಗ್ರಾಮ ಸಹಾಯಕರು ನಿವೃತ್ತಿ ಇಲ್ಲವೆ ಸಾವಿನ ಬಳಿಕ 5 ಲಕ್ಷ ಇಡಿಗಂಟು ಮಂಜೂರು

ಮೈಸೂರು, ಫೆ.7(ಎಸ್‌ಪಿಎನ್)– ಕಂದಾಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಸಹಾಯಕರು ಸೇವೆಯಿಂದ ನಿವೃತ್ತಿ ಹೊಂದಿದ ಬಳಿಕ ಇಲ್ಲವೇ ಸೇವೆಯಲ್ಲಿರುವಾಗಲೇ ಮೃತರಾದಲ್ಲಿ ಗರಿಷ್ಠ ರೂ.5 ಲಕ್ಷದವರೆಗೆ ಇಡಿಗಂಟನ್ನು ಮಂಜೂರು ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ.

ಇಡಿಗಂಟನ್ನು ನೀಡಬೇಕಾಗಿರುವ ಅರ್ಹ ಪ್ರಕರಣಗಳಲ್ಲಿ ಅಂದರೆ ಗ್ರಾಮ ಸಹಾಯಕರು ಮರಣಹೊಂದಿದರೆ ಅಂತಹ ಗ್ರಾಮ ಸಹಾಯಕರ ಅರ್ಹ ಅವಲಂಬಿತರಿಗೆ ಇಂಡಿಗಂಟು ಮೊತ್ತವನ್ನು ಪಾವತಿಸತಕ್ಕದ್ದು. ಅಂತೆಯೇ ಇಂಡಿಗಂಟು ನೀಡಬೇಕಾಗಿರುವ ಪ್ರಕರಣದಲ್ಲಿ ಗ್ರಾಮ ಸಹಾಯಕರು ಅಥವಾ ಅವಲಂಬಿತರು ಇಡಿಗಂಟನ್ನು ಪಡೆಯಲು ಅರ್ಜಿ ನಮೂನೆ, ಸೇವಾ ದೃಢೀಕರಣ ಪತ್ರ, ಮರಣ ಪತ್ರ ಹಾಗೂ ಇತರೆ ಸಂಬಂಧಿತ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು.

ಇಡಿಗಂಟು ನೀಡಬೇಕಾಗಿರುವ ಅರ್ಹ ಪ್ರಸ್ತಾವನೆಗಳನ್ನು ಸಂಬಂಧಿತ ತಹಶೀಲ್ದಾರ್ ಪಡೆದು ಪರಿಶೀಲಿಸಿ, ದೃಢೀಕರಿಸಿ ಆಯಾ ಜಿಲ್ಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಜಿಲ್ಲಾಧಿಕಾರಿಗಳ ಹಂತದಲ್ಲಿ ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ಪರಿಶೀಲನೆಯ ನಂತರ ಅರ್ಹ ಪ್ರಸ್ತಾವನೆಗಳಿಗೆ ಇಡಿಗಂಟು ನೀಡುವ ಸಂಬಂಧ ಮಂಜೂರಾತಿ ಆದೇಶವನ್ನು ಹೊರಡಿಸತಕ್ಕದ್ದು. ಹಾಗಾಗಿ ಈ ಆದೇಶವನ್ನು 25.9.2025ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯದನ್ವಯ ಆದೇಶ ಹೊರಡಿಸಲಾಗಿದೆ ಎಂದು ಅಪರ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ತಿಳಿಸಿದ್ದಾರೆ.

ರೈತರಿಗೆ ರೇಷ್ಮೆ ಕೃಷಿ ಲಾಭದಾಯಕ

ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಸಲಹೆ

ಮೈಸೂರು, ಫೆ7(ಎಂಟಿವೈ)– ಗ್ರಾಮೀಣ ಭಾಗದ ರೈತರ ಆರ್ಥಿಕ ಸ್ಥಿತಿಗತಿ ಸುಧಾರಿಸಲು ರೇಷ್ಮೆ ಕೃಷಿ ಮಾಡಲು ಮುಂದಾಗಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ 'ರೇಷ್ಮೆ ಕೃಷಿ ತಾಂತ್ರಿಕತೆ' ಕುರಿತ ರಾಷ್ಟ್ರೀಯ ಪ್ರಾಯೋಗಿಕ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಭಾರತದ ರೇಷ್ಮೆಗೆ ಜಾಗತಿಕ ಮಟ್ಟದಲ್ಲಿ ಬೇಡಿಕೆಯಿದ್ದು, ದೇಶದ ರೇಷ್ಮೆ ಉತ್ಪನ್ನಗಳ ಖರೀದಿಸುವವರ ಸಂಖ್ಯೆ ಹೆಚ್ಚಾಗಿದೆ. ರೇಷ್ಮೆ ಕೃಷಿ ಮಾಡುವ ರೈತರ ಆರ್ಥಿಕ ಸ್ಥಿತಿ ಸುಧಾರಿಸುತ್ತಿದೆ. ಅದರಲ್ಲೂ ಮೈಸೂರು ಭಾಗದ ರೇಷ್ಮೆಗೆ ಹೆಚ್ಚಿನ ಮಹತ್ವವಿದ್ದು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ರೇಷ್ಮೆ ಬೆಳೆ ಬೆಳೆದು ಆರ್ಥಿಕವಾಗಿ ಸದೃಢರಾಗುವತ್ತ ಗಮನ ಹರಿಸಬೇಕು ಎಂದರು.

ಭಾರತ ರೇಷ್ಮೆ ಉತ್ಪಾದನೆಯಲ್ಲಿ ವಿಶ್ವದಲ್ಲಿಯೇ ಎರಡನೆಯ ಸ್ಥಾನದಲ್ಲಿದೆ. ದೇಶದಲ್ಲಿ 2024–25ರ ಆರ್ಥಿಕ ವರ್ಷದಲ್ಲಿ 41,121 ಮೆಟ್ರಿಕ್‌ನಷ್ಟು ಉತ್ಪಾದನೆಯಾಗಿದ್ದು, ಅದರಲ್ಲಿ ಹಿಪ್ಪುನೇರಳೆ ರೇಷ್ಮೆಯು ಶೇ.75 ರಷ್ಟು ಮತ್ತು ಹಿಪ್ಪುನೇರಳೇತರ ರೇಷ್ಮೆ ಶೇ.25 ರಷ್ಟಿದೆ. ರೇಷ್ಮೆ ಕೃಷಿಯು ರೇಷ್ಮೆ ಹುಳು ಸಾಕಾಣಿಕೆ, ಹಿಪ್ಪುನೇರಳೆ ಬೇಸಾಯ ಹಾಗೂ ಕಚ್ಚಾ ರೇಷ್ಮೆ ಉತ್ಪಾದನೆಗಾಗಿ ನೂಲು ಬಿಚ್ಚಾಣಿಕೆ ಒಳಗೊಂಡಿದ್ದು, ರಾಜ್ಯದಲ್ಲಿ 250 ವರ್ಷಗಳ ಹಿಂದಿನಿಂದಲೂ ಪ್ರಚಲಿತವಾಗಿದೆ. ಈ ಉದ್ಯಮವು ಕೃಷಿ ಮೂಲದ, ಕಾರ್ಮಿಕ ಪ್ರಧಾನ ಮತ್ತು ಆರ್ಥಿಕ ಸಬಲೀಕರಣಕ್ಕೆ ಸಹಾಯಕವಾದ ಪ್ರಮುಖ ಗುಡಿ ಕೈಗಾರಿಕೆಯಾಗಿದೆ ಎಂದು ತಿಳಿಸಿದರು.



ಮೈಸೂರು ವಿಶ್ವವಿದ್ಯಾನಿಲಯದ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಶನಿವಾರ 'ರೇಷ್ಮೆ ಕೃಷಿ ತಾಂತ್ರಿಕತೆ' ಕುರಿತ ರಾಷ್ಟ್ರೀಯ ಪ್ರಾಯೋಗಿಕ ತರಬೇತಿ ಕಾರ್ಯಾಗಾರ ನಡೆಯಿತು.

ಗ್ರಾಮೀಣ ಪ್ರದೇಶದ ಜನರ ಬಡತನವನ್ನು ನಿರ್ಮೂಲನೆಗೊಳಿಸಿ, ಸಾಮಾಜಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿಗೆ ಸಹಕಾರಿಯಾಗಿದೆ. ದೇಶದ ಗ್ರಾಮೀಣ ಪ್ರದೇಶಗಳಲ್ಲಿ ರೇಷ್ಮೆ ಕೃಷಿ ಮತ್ತು ರೇಷ್ಮೆ ಕೈಗಾರಿಕೆಗಳಿಂದ 92 ಲಕ್ಷ ಜನರಿಗೆ ಉದ್ಯೋಗಾವಕಾಶ ದೊರೆಯುತ್ತಿದೆ. ಇದರಿಂದ ಈ ಹಿಂದೆ ಉಪಕಸುಬಾಗಿದ್ದ ರೇಷ್ಮೆ ಕೃಷಿ, ಇತ್ತೀಚೆಗೆ ಮುಖ್ಯ ಕಸುಬಾಗಿ ಪರಿಣಮಿಸುತ್ತಿದೆ. ರೇಷ್ಮೆ ವ್ಯವಸಾಯವನ್ನು ದೊಡ್ಡ ಪ್ರಮಾಣದಲ್ಲಿಯೂ ಕೈಗೊಳ್ಳಲು ರೈತರು ಮುಂದೆ ಬರುತ್ತಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್.ಆರ್. ನಿರಂಜನ, ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ ಅಧ್ಯಕ್ಷ ಪ್ರೊ.ಬಿ.ಸಣ್ಣಪ್ಪ, ಸಂಘಟನಾ ಕಾರ್ಯದರ್ಶಿ ಪ್ರೊ.ಎಂ.ಎನ್. ಅನಿಲ್‌ಕುವಾರ್ ಸೇರಿದಂತೆ ಉಪಸ್ಥಿತರಿದ್ದರು.

ಎಸ್‌ಸಿಎಸ್‌ಪಿ–ಟಿಎಸ್‌ಪಿ ನಿಧಿ ಗ್ಯಾರಂಟಿ ಯೋಜನೆಗಳಿಗೆ ಬಳಸುವುದಿಲ್ಲವೆಂದು ಬಜೆಟ್‌ನಲ್ಲಿ ಲಿಖಿತ ಭರವಸೆ ನೀಡಿ

ಸಿಎಂ, ಸಮಾಜ ಕಲ್ಯಾಣ ಸಚಿವರಿಗೆ ಪತ್ರ ಮುಖೇನ ಪರಿಷತ್ ವಿಪಕ್ಷ ನಾಯಕ ಛಲವಾದಿ ಟಿ.ನಾರಾಯಣಸ್ವಾಮಿ ಒತ್ತಾಯ

ಮೈಸೂರು,ಫೆ.7(ಪಿಎಂ)– ಮುಂಬರುವ 2026–27ನೇ ಸಾಲಿನ ಆಯವ್ಯಯದಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ನಿಧಿಯಲ್ಲಿ ಒಂದು ರೂಪಾಯಿ ಸಹ ಗ್ಯಾರಂಟಿ ಯೋಜನೆಗಳಿಗೆ ಬಳಸುವುದಿಲ್ಲವೆಂದು ಸರ್ಕಾರ ಲಿಖಿತ ಭರವಸೆ ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರಲ್ಲಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ಟಿ.ನಾರಾಯಣಸ್ವಾಮಿ ಒತ್ತಾಯಿಸಿದ್ದಾರೆ.

ಈ ಸಂಬಂಧ ಸಿಎಂ ಹಾಗೂ ಸಮಾಜ ಕಲ್ಯಾಣ ಸಚಿವರಿಗೆ ಪ್ರತ್ಯೇಕ ಪತ್ರ ಬರೆದಿರುವ ಛಲವಾದಿ ಟಿ.ನಾರಾಯಣಸ್ವಾಮಿ, ಈ ಸಾಲಿನ ಬಜೆಟ್‌ನಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ನಿಧಿಯು ಕೇವಲ ಆಯಾ ಸಮುದಾಯಗಳ ನೇರ ಅಭಿವೃದ್ಧಿ ಕಾರ್ಯಗಳಿಗೆ ಮಾತ್ರ ಬಳಕೆಯಾಗುವಂತೆ ಕಟ್ಟುನಿಟ್ಟಿನ ನಿಯಮ ಜಾರಿಗೊಳಿಸಬೇಕು ಎಂದೂ ಆಗ್ರಹಿಸಿದ್ದಾರೆ.

ಅನುಸೂಚಿತ ಜಾತಿಗಳ ಉಪ ಯೋಜನೆ(ಎಸ್‌ಸಿಎಸ್‌ಪಿ) ಮತ್ತು ಬುಡಕಟ್ಟು ಉಪ ಯೋಜನೆ (ಟಿಎಸ್‌ಪಿ) ಅಡಿಯಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು



ಛಲವಾದಿ ಟಿ.ನಾರಾಯಣಸ್ವಾಮಿ

ಪರಿಶಿಷ್ಟ ಪಂಗಡಗಳ (ಎಸ್‌ಟಿ) ಅಭಿವೃದ್ಧಿಗಾಗಿ ಮೀಸಲಿಟ್ಟ ವಿಶೇಷ ನಿಧಿಗಳನ್ನು ಶಾಸನಬದ್ಧ ಉದ್ದೇಶಗಳಿಗಲ್ಲದೇ ಅನ್ಯ ಯೋಜನೆಗಳಿಗೆ (ಗ್ಯಾರಂಟಿಗಳಿಗೆ) ವರ್ಗಾಯಿಸುವುದನ್ನು ತಡೆ ಹಿಡಿಯಬೇಕು.

ಆಯವ್ಯಯದಲ್ಲಿ ಗ್ಯಾರಂಟಿ ಯೋಜನೆಗಳಿಗಾಗಿ ಪ್ರತ್ಯೇಕವಾಗಿ 52 ಸಾವಿರ ಕೋಟಿಗೂ ಅಧಿಕ ಹಣವನ್ನು ಮೀಸಲಿಟ್ಟ ಮೇಲೆ, ಮತ್ತೆ ಪರಿಶಿಷ್ಟ ವರ್ಗಗಳ ಹಿತರಕ್ಷಣೆಗಾಗಿ ಇರುವ ಎಸ್‌ಸಿಎಸ್‌ಪಿ/ಟಿಎಸ್‌ಪಿ ನಿಧಿಯಿಂದ ಸುಮಾರು 39,000 ಕೋಟಿ ಹಣವನ್ನು ಬಳಸುವ ಅಗತ್ಯವೇನಿತ್ತು. ಹಾಗಿದ್ದಲ್ಲಿ ಸಾಮಾನ್ಯ ನಿಧಿಯಲ್ಲಿ ಮೀಸಲಿಟ್ಟ ಹಣ ಎಲ್ಲಿಗೆ ವಿನಿಯೋಗವಾಯಿತು? ಮೀಸಲು ನಿಧಿಗೆ ಕೈಹಾಕಿರುವುದು ಯಾವ ನ್ಯಾಯ. ಇದು ಸಾಮಾಜಿಕ ಅನ್ಯಾಯವಲ್ಲವೇ. ಒಂದು ವೇಳೆ ಪರಿಶಿಷ್ಟ ಜಾತಿ/ಪಂಗಡದ ಜನರು ಗ್ಯಾರಂಟಿ ಯೋಜನೆಗಳಲ್ಲಿ ಫಲಾನುಭವಿಗಳಾಗಿದ್ದಾರೆಂಬ ಕಾರಣಕ್ಕೆ ಈ ನಿಧಿ ಬಳಸುವುದಾದರೆ, ಬಜೆಟ್‌ನಲ್ಲಿ ಘೋಷಿಸಿದ ಆ ಮೂಲ 52,000 ಕೋಟಿ ಹಣ ಎಲ್ಲಿಗೆ ಹೋಯಿತು. ಇದು ಸಮುದಾಯದ ಕಣ್ಣಿಗೆ ಮಣ್ಣೆರಚುವ ತಂತ್ರವಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಗ್ಯಾರಂಟಿ ಯೋಜನೆಗಳಲ್ಲಿ ಫಲಾನುಭವಿಗಳಾಗಿರುವ ಎಸ್‌ಸಿ–ಎಸ್‌ಟಿ ವರ್ಗದವರಿಗೆ ನೀಡುವ ಸೌಲಭ್ಯವನ್ನು ಸಾಮಾನ್ಯ ನಿಧಿಯಿಂದಲೇ ಭರಿಸಬೇಕು. ಅಭಿವೃದ್ಧಿಗೆ ಮೀಸಲಿಟ್ಟ ನಿಧಿಯನ್ನು ಅದಕ್ಕಾಗಿ ಕಡಿತಗೊಳಿಸಬಾರದು. ಕಳೆದ ಮೂರು ವರ್ಷಗಳಲ್ಲಿ ಅನ್ಯ ಉದ್ದೇಶಗಳಿಗೆ ಬಳಸಲಾದ 38,870.52 ಕೋಟಿ ಹಣವನ್ನು ಕೂಡಲೇ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಗೆ ಮರುಪಾವತಿಸಿ, ಬಾಕಿ ಉಳಿದಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಬೇಕು. ಈ ಬೇಡಿಕೆಗಳಿಗೆ ಸಕಾರಾತ್ಮಕ ಸ್ಪಂದನೆ ನೀಡದಿದ್ದಲ್ಲಿ ಹೋರಾಟಕ್ಕಿಳಿಯುವುದು ಅನಿವಾರ್ಯ ಎಂದು ನಾರಾಯಣಸ್ವಾಮಿ ಎಚ್ಚರಿಸಿದ್ದಾರೆ.

ಮೈತ್ರಿ ಚಾರಿಟಬಲ್ ಟ್ರಸ್ಟ್ ಶಾಲಾ ವಾರ್ಷಿಕೋತ್ಸವ

ಮೈಸೂರು, ಫೆ. 7– ಮೈತ್ರಿ ಚಾರಿಟಬಲ್ ಟ್ರಸ್ಟ್ ನಡೆಸುತ್ತಿರುವ ವಿಶೇಷ ಶಾಲೆಯ 44ನೇ ವಾರ್ಷಿಕೋತ್ಸವವು ಶುಕ್ರವಾರ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಗಾನಭಾರತಿಯ ರಮಾಗೋವಿಂದ ವೇದಿಕೆಯಲ್ಲಿ ಜರುಗಿತು. ಮಕ್ಕಳು ಜಾನಪದ, ಯಕ್ಷಗಾನ ಸೇರಿದಂತೆ ವಿವಿಧ ನೃತ್ಯಗಳನ್ನು ಪ್ರದರ್ಶಿಸಿ, ಸಭಿಕರನ್ನು ನಿಬ್ಬೆರಗಾಗಿಸಿದರು.

ಮೊದಲು ಪುಟಾಣಿಗಳು ಸಾಮಾಜಿಕ ನೃತ್ಯ ಪ್ರದರ್ಶಿಸಿದರು. ನಂತರ ಇತರೆ ವಿದ್ಯಾರ್ಥಿಗಳು ಭರತನಾಟ್ಯ, ವೀರಗಾಸೆ ಸೇರಿದಂತೆ ವಿವಿಧ ಜಾನಪದ ನೃತ್ಯ, ಯಕ್ಷಗಾನ ಪ್ರದರ್ಶಿಸಿದರು. ಅವರ ನೃತ್ಯವನ್ನು ನೋಡಿದ ಸಭಿಕರು ಕರತಾಡನ ಮಾಡುತ್ತಾ, ಪ್ರೋತ್ಸಾಹಿಸಿದರು.

ಮುಖ್ಯ ಅತಿಥಿಯಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಎಲ್ಲಾ ಸರಿ ಇರುವವರಿಗಿಂತ ವಿಶೇಷ ಮಕ್ಕಳಲ್ಲಿ ಅಗಾಧವಾದ ಪ್ರತಿಭೆ ಇರುತ್ತದೆ. ಇವರು ಅನುಕಂಪಕ್ಕಿಂತ ಅವಕಾಶಗಳನ್ನು ಬಯಸುತ್ತಾರೆ. ಹೀಗಾಗಿ ಸಮಾಜ, ಸಂಘಸಂಸ್ಥೆಗಳು ಹಾಗೂ ಸರ್ಕಾರ ಇಂಥವರಿಗೆ ಪ್ರೋತ್ಸಾಹ ನೀಡಬೇಕು ಎಂದರು.



ವಿವಿಧ ನೃತ್ಯ ಪ್ರದರ್ಶಿಸಿದ ವಿಶೇಷ ಶಾಲೆಯ ಮಕ್ಕಳೊಂದಿಗೆ ಗಣ್ಯರು.

ಅಧ್ಯಕ್ಷತೆ ವಹಿಸಿದ್ದ ಟ್ರಸ್ಟ್ ಅಧ್ಯಕ್ಷ ರವೀಂದ್ರ ಜೋಶಿ ಮಾತನಾಡಿ, ಪ್ರೊ.ಎನ್. ವೆಂಕೋಬರಾವ್ ಹಾಗೂ ಅವರ ಪತ್ನಿ ಮಾಯಾದೇವಿ ಅವರು 44 ವರ್ಷಗಳ ಹಿಂದೆ ಈ ವಿಶೇಷ ಮಕ್ಕಳ ಶಾಲೆಯನ್ನು ಆರಂಭಿಸಿದರು. ಅಟಲ್ ಬಿಹಾರಿ ವಾಜಪೇಯಿ, ಲಾಲ್ ಕೃಷ್ಣ ಅಡ್ವಾಣಿ ಸೇರಿದಂತೆ ಹಲವಾರು ರಾಷ್ಟ್ರ ನಾಯಕರ ನಿಕಟ ಸಂಪರ್ಕ ಇದ್ದರೂ ಯಾರ ಬಳಿಯೂ ನೆರವು ಕೇಳಲಿಲ್ಲ. ಬದಲಿಗೆ ಪ್ರೊ.ವೆಂಕೋಬರಾವ್ ಅವರು ತಮಗೆ ಬರುತ್ತಿದ್ದ ಪಿಂಚಣಿ ಹಣದಲ್ಲಿಯೇ ಶಾಲೆಯನ್ನು ನಡೆಸಿಕೊಂಡು ಬಂದರು ಎಂದು ಸ್ಮರಿಸಿದರು.

ಟ್ರಸ್ಟಿನ ಮ್ಯಾನೇಜಿಂಗ್ ಟ್ರಸ್ಟಿ ಪೃಥ್ವಿ ಸುಧೀಂದರ್ ಮಾತನಾಡಿ, ಮಕ್ಕಳಿಗೆ ದೀಪ, ಪೇಪರ್ ಬ್ಯಾಗ್, ಎನ್ವಲಪ್ ಕವರ್‌ಗಳು, ಚಿತ್ರಕಲೆಯನ್ನು ಕಲಿಸಲಾಗುತ್ತದೆ. ವಿವಿಧೆಡೆ ಪ್ರದರ್ಶನ ಮಾಡುತ್ತೇವೆ. ಮದುವೆ ಮತ್ತಿತರ ಸಮಾರಂಭಗಳಿಗೆ ಫಲ ತಾಂಬೂಲ ನೀಡಲು ಯಾರಾದರೂ ಬೇಡಿಕೆ ಇಟ್ಟರೆ ಮಾಡಿಕೊಡುತ್ತೇವೆ. ಅದರಿಂದ ಬಂದ ಹಣದಿಂದ ಮಕ್ಕಳಿಗೆ ಬಹುಮಾನ ನೀಡುತ್ತಿದ್ದೇವೆ ಎಂದರು.

ಉದ್ಯಮಿ ಎಂ. ಜಗನ್ನಾಥ ಶೆಣೈ ಬಹುಮಾನ ವಿತರಿಸಿದರು. ಟ್ರಸ್ಟಿಗಳಾದ ಪ್ರವೀಣ್ ಪಾಲ್, ಅಂಜಲಿ ಮಾತನಾಡಿದರು. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ಎಸ್. ರಾಘವೇಂದ್ರ, ಡಾ.ಹರ್ಲೆ, ಡಾ.ಚನ್ನಕೇಶವ ಮೊದಲಾದವರು ಇದ್ದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹುಟ್ಟುಹಬ್ಬ ಅದ್ದೂರಿ ಆಚರಣೆ



ಮೈಸೂರಿನ ಕೃಷ್ಣರಾಜ ಕ್ಷೇತ್ರದ ವಿವಿಧೆಡೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ದೇವರ ದರ್ಶನ ಪಡೆದರು. ನಂತರ ಅಭಿಮಾನಿಗಳಿಂದ ಅಭಿನಂದನೆ ಸ್ವೀಕರಿಸಿದರು.



ಸೋಮಶೇಖರ್ ಹುಟ್ಟುಹಬ್ಬ ಆಚರಣೆಗೆ ಕಲಾ ತಂಡಗಳ ಮೆರಗು

ಮೈಸೂರು, ಫೆ.7(ಬಿಎಲ್‌ಯು)– ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ ಹುಟ್ಟುಹಬ್ಬವನ್ನು ಮೈಸೂರಿನಲ್ಲಿ ಇಂದು ಹಲವು ಸೇವಾ ಕಾರ್ಯಗಳೊಂದಿಗೆ ಅದ್ದೂರಿಯಾಗಿ ಆಚರಿಸಲಾಯಿತು.



ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅವರಿಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಕೆಪಿಸಿಸಿ ವಕ್ತಾರ, ಹೆಚ್.ಎ.ವೆಂಕಟೇಶ್, ರೈಲ್ವೆ ಭೈರಪ್ಪ ಇತರರು ಉಪಸ್ಥಿತರಿದ್ದರು.

ಸೋಮಶೇಖರ್ ಅವರ ಮನೆ ಮುಂದೆ ನಿನ್ನೆ ರಾತ್ರಿ 12 ಗಂಟೆಗೆ ಜಮಾವಣೆಗೊಂಡ ಅವರ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಕೇಕ್ ಕತ್ತರಿಸಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಸೋಮಶೇಖರ್ ಅವರು ಇಂದು ಬೆಳಿಗ್ಗೆ ಅಭಿಮಾನಿಗಳು ಹಾಗೂ ಕಾರ್ಯಕರ್ತರ ಜೊತೆ ಚಾಮುಂಡಿಬೆಟ್ಟಕ್ಕೆ ತೆರಳಿ ನಾಡ ದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ತರುವಾಯ ಕುರುಬಾರಹಳ್ಳಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಕುರುಬಾರಹಳ್ಳಿ ಹಿತರಕ್ಷಣಾ ಸಮಿತಿಯವರು ಆಯೋಜಿಸಿದ್ದ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಆಶ್ರಯ ಸಮಿತಿ ಸದಸ್ಯರಾದ ಕುರುಬಾರಹಳ್ಳಿ ಸೋಮು, ರವಿ, ಜೆ.ಪ್ರಕಾಶ್, ಧನಂಜಯ, ಮಂಜುನಾಥ್ ಹಾಗೂ ಇತರರು ಹಾಜರಿದ್ದರು. ನಂತರ ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಹುಟ್ಟುಹಬ್ಬದ ಪ್ರಯುಕ್ತ ಪ್ರಸಾದ ವಿತರಿಸಲಾಯಿತು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಕೇಬಲ್ ಮಹದೇವು, ವಿಕಾಸ್, ಕಂಸಾಳೆ ರವಿ ಹಾಗೂ ಇತರರು ಉಪಸ್ಥಿತರಿದ್ದರು.


ಇದಾದ ಮೇಲೆ ಕನಕಗಿರಿಯಲ್ಲಿ ಆಯೋಜಿಸಿದ್ದ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಸೋಮಶೇಖರ್ ಭಾಗಿಯಾಗಿದ್ದರು. ಕನಕಗಿರಿ ಸರ್ಕಾರಿ ಶಾಲೆ ಮುಂಭಾಗದಿಂದ ಅಭಿಮಾನಿಗಳು ಅವರನ್ನು ಮೆರವಣಿಗೆಯಲ್ಲಿ ಕರೆದೊಯ್ದರು. ಈ ವೇಳೆ ಮಕ್ಕಳಿಗೆ ಪುಸ್ತಕ ಹಾಗೂ ಲೇಖನಗಳನ್ನು ವಿತರಿಸಲಾಯಿತು.

ಕುವೆಂಪುನಗರ ಜೋಡಿ ರಸ್ತೆಯಲ್ಲಿ ಅಭಿಮಾನಿಗಳು ಏರ್ಪಡಿಸಿದ್ದ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಮಾಜಿ ಕಾರ್ಪೋರೇಟರ್ ಮಲ್ಲೇಶ್ ಹಾಗೂ ಇತರರು ಸೋಮಶೇಖರ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.

ಸೋಮಶೇಖರ್ ಅವರು ಪ್ರತಿನಿಧಿಸುತ್ತಿರುವ ಕೃಷ್ಣರಾಜ ಕ್ಷೇತ್ರದಲ್ಲಿ ಅವರ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿಯಿಂದ ಅವರ ಹುಟ್ಟುಹಬ್ಬ ಆಯೋಜಿಸಿದ್ದರು.



ಶನಿವಾರ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ..ಬಿ.ಜೆ. ವಿಜಯಕುಮಾರ್, ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್, ಡಿಸಿಸಿ ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್, ಡೇರಿ ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.



ಎಂ.ಕೆ.ಸೋಮಶೇಖರ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಮಾಜಿ ಮೇಯರ್ ಭೈರಪ್ಪ, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಮೈಸೂರು ನಗರ ಕಾಂಗ್ರೆಸ್ ಕುಶಲಕರ್ಮಿಗಳ ಅಧ್ಯಕ್ಷ ಟಿಂಬರ್ ನಾಗರಾಜ್, ವಿನಯ್, ಮಲ್ಲೇಶ್, ಮುರುಳಿ, ಕುಮಾರ್ ಇನ್ನಿತರರು ಹಾಜರಿದ್ದರು.

ಮೈಸೂರು ಮಿತ್ರ

ಕಾಂಗ್ರೆಸ್ ಸರ್ಕಾರ ಎಡಪಂಥೀಯರ ಕಪಿಮುಷ್ಟಿಗೆ ಸಿಲುಕಿ ನಲುಗುತ್ತಿದೆ

'ನಾನೂ ಕಾಫೀರ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಬಿಜೆಪಿ ನಾಯಕ ಬಿ.ಎಲ್.ಸಂತೋಷ್ ಆರೋಪ



ಸಮಾರಂಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪುಸ್ತಕ ಮನೆ ಅಂಕೇಗೌಡ ಅವರನ್ನು ಸನ್ಮಾನಿಸಲಾಯಿತು.

ಮಂಡ್ಯ ಫೆ.7– ರಾಜ್ಯ ಕಾಂಗ್ರೆಸ್ ಸರ್ಕಾರ ಸ್ವತಂತ್ರವಾಗಿ ಆಡಳಿತ ನಡೆಸುತ್ತಿಲ್ಲ ಎಡಪಂಥೀಯರ ಕಪಿಮುಷ್ಟಿಯಲ್ಲಿ ಸಿಲುಕಿ ನಲುಗುತ್ತಿದೆ. ಅನೇಕ ರಾಜಕಾರಣಿಗಳು ತಮ್ಮ ಬುದ್ಧಿಯನ್ನು ಅವರ ಕೈಗೆ ಕೊಟ್ಟಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಆರೋಪಿಸಿದರು.

ಶನಿವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಸ್ವರಾಷ್ಟ್ರ ಪ್ರಕಾಶನ ಸಂಸ್ಥೆ ಉದ್ಘಾಟನೆ ಮತ್ತು ಸಂವಿಧಾನ ತಜ್ಞ ಲೇಖಕ ಡಾ.ಸುಧಾಕರ ಹೊಸಳ್ಳಿ ರಚಿತ 'ನಾನೂ ಕಾಫಿರ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ 'ನಾನೂ ಕಾಫಿರ' ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಶರಿಯತ್, ಇಸ್ಲಾಂಗಾಗಿ ಸಂವಿಧಾನವನ್ನೇ ನುಂಗಿ ಹಾಕುವ ಸಿದ್ಧಾಂತದ ವಿರುದ್ಧ, ತತ್ವದ ವಿರುದ್ಧ, ನಿಯಮದ ವಿರುದ್ಧ ಬಾಯಿ ಬಿಚ್ಚದ ಎಡಪಂಥೀಯರು ಆ ಮೂಲಕ ಸಮಾಜ–ಸಂವಿಧಾನಕ್ಕೂ ಮತ್ತು ಬಹಳ ಮುಖ್ಯವಾಗಿ ಅಂಬೇಡ್ಕರ್ ಅವರಿಗೂ ಅಪಮಾನ ಮಾಡುತ್ತಿದ್ದಾರೆ ಎಂದು ಹೇಳಿದರು.

ಎಡಪಂಥೀಯರು ಮಹಾತ್ಮ ಗಾಂಧೀಜಿ ಬಗ್ಗೆ ಮಾತ್ರ ತಿರುಚಿದೆ, ಸುಭಾಷ್ ಚಂದ್ರ ಬೋಸ್, ಬುದ್ಧ, ಬಸವಣ್ಣ, ಅಂಬೇಡ್ಕರ್ ಬಗ್ಗೆಯೂ ತಮ್ಮ ತರ್ಕಕ್ಕೆ ಅನುಗುಣವಾಗಿ ತಿರುಚಿ ಹೈಜಾಕ್ ಮಾಡಿದ್ದಾರೆ. ಇದು ರಾಷ್ಟ್ರಕವಿ ಕುವೆಂಪು ಅವರ ವರೆಗೂ ಮುಂದುವರಿಯಿತು. ಕುವೆಂಪು ಮತ್ತು ಸ್ವಾಮಿ ವಿವೇಕಾನಂದರಿಗೂ ಹಿಂದೂ ಸಂಸ್ಕೃತಿಗೂ ಸಂಬಂಧವಿಲ್ಲ ಎಂದು ಬಿಂಬಿಸಲು ಹೊರಟರು. ಹಿಂದುತ್ವ ಮತ್ತು ಆಧ್ಯಾತ್ಮಿಕತೆ ವಿರೋಧಿ ಎಂದು ಬಿಂಬಿಸಿ 'ಸಮಾಜವಾದಿ' ಎಂದು ಕರೆದು ಎಂದು ಹೇಳಿದರು.

ಮುಸ್ಲಿಮರ ಬಗ್ಗೆ ಬಹಳ ವ್ಯಾಮೋಹ ಹೊಂದಿರುವ ಕಾಂಗ್ರೆಸ್ ಮತ್ತು ಎಡಪಂಥೀಯರು ದೇಶದ್ರೋಹಿ ಟಿಪ್ಪು ಸುಲ್ತಾನ್‌ನನ್ನೇ ಸ್ವಾತಂತ್ರ್ಯ ಹೋರಾಟಗಾರ ಎಂದು ಬಿಂಬಿಸಿ, ಟಿಪ್ಪು ಸುಲ್ತಾನ್ ಜಯಂತಿ ಮಾಡುತ್ತಾರೆ. ಹಿಂದೂ ವಿರೋಧಿಯಾಗಿದ್ದ ಟಿಪ್ಪು ಸುಲ್ತಾನ್ ತನ್ನ ಆಳ್ವಿಕೆಯ ಕಾಲದಲ್ಲಿ 1 ಲಕ್ಷಕ್ಕೂ ಹೆಚ್ಚು ಹಿಂದೂಗಳು ಹಾಗೂ 70 ಸಾವಿರ ಕ್ರಿಶ್ಚಿಯನ್‌ರನ್ನು ಭೀಕರವಾಗಿ ನರಮೇಧ ಮಾಡಿದ್ದಾನೆ. ಹಲವು ಹಿಂದೂ ದೇವಾಲಯಗಳನ್ನು ಕೆಡವಿದ್ದಾನೆ. ಇಂತಹ ಮತಾಂಧನನ್ನು ಶೃಂಗೇರಿ ದೇವಸ್ಥಾನಕ್ಕೆ ದಾನ ಕೊಟ್ಟಿದ್ದಾನೆ ಎಂದು ಬಿಂಬಿಸಿ ಸ್ವಾತಂತ್ರ್ಯ ಹೋರಾಟಗಾರ ಎಂದು ಹೇಳುತ್ತಿರುವುದು ನಾಚಿಕೆಗೇಡು ಎಂದು ಹರಿಹಾಯ್ದರು.

ಅಂಬೇಡ್ಕರ್ ಅವರು ದೊಡ್ಡ ಹಿಂದೂ ಸುಧಾರಕರು ಮತ್ತು ಸಮಾಜ ಸುಧಾರಕರಾಗಿದ್ದರು. ಇಸ್ಲಾಮಿಕ್ ವಿರುದ್ಧ ಹಿಂದೂಗಳ ಆತ್ಮಸಾಕ್ಷಿಯನ್ನು ಎಚ್ಚರಿಸಿದ್ದ ಮಹಾನ್ ನಾಯಕ. ಅವರು ಕಾಂಗ್ರೆಸ್‌ನವರು ಮಾಡುತ್ತಿದ್ದ ಜಾತೀಯತೆ ಮತ್ತು ಅಸ್ಪೃಶ್ಯತೆಯನ್ನು ವಿರೋಧಿಸಿ ಬೌದ್ಧ ಧರ್ಮಕ್ಕೆ ಮತಾಂತರವಾದರೇ ಹೊರತು, ಹಿಂದುತ್ವ ವಿರೋಧಿಯಲ್ಲ. ಅನ್ಯಧರ್ಮೀಯರು ತಮ್ಮ ಧರ್ಮಕ್ಕೆ ಮತಾಂತರವಾಗಿ ಎಂದು ಕೇಳಿದಾಗ, 'ನಾನು ಭಾರತದಿಂದ ದೂರ ಹೋಗಲ್ಲ ಮತ್ತು ಭಾರತದ ಸಂಸ್ಕೃತಿಯಿಂದ ದೂರ ಆಗಲ್ಲ' ಎಂದು ಹೇಳಿ ಬೌದ್ಧ ಧರ್ಮ ಸೇರಿದರು. – ಬಿ.ಎಲ್.ಸಂತೋಷ್.

ಟಿಪ್ಪು ಸುಲ್ತಾನ್‌ನ ಕ್ರೌರ್ಯವನ್ನು ತಡೆಯಲಾಗದೇ ಮೈಸೂರು, ಚಾಮರಾಜನಗರ ಮತ್ತು ಕೊಡಗಿನ ಒಕ್ಕಲಿಗರು ತಮಿಳುನಾಡಿಗೆ ಪಲಾಯನ ಮಾಡಿ ನೆಲೆಸಿದ್ದಾರೆ. ಇಸ್ಲಾಮಿಕ್‌ನವರಿಗೆ ಸುಂದರವಾಗಿರುವುದು ಇಷ್ಟವಿಲ್ಲ. ಆದ್ದರಿಂದ ಅವರಿಗೆ ಹಿಂದೂ ದೇವರ ಕಂಡರೆ ಆಗಲ್ಲ. ಹಾಗಾಗಿ ಗಣೇಶ ವಿಸರ್ಜನಾ ಮಹೋತ್ಸವದ ವೇಳೆ ಗಲಾಟೆ ಮಾಡುತ್ತಾರೆ ಎಂದು ಗಂಭೀರ ಆರೋಪ ಮಾಡಿದರು.

ಸಂವಿಧಾನ ತಿದ್ದುಪಡಿ ಮಾಡಲು ಹೊರಟಾಗ ಕಾಂಗ್ರೆಸ್ ಮತ್ತು ಎಡಪಂಥೀಯರು ವಿರೋಧಿಸಿ, ದೊಡ್ಡಹೋರಾಟವನ್ನೇ ಮಾಡಿದರು. ಆದರೆ, ಯಾವ ಯಾವ ಪ್ರಧಾನ ಮಂತ್ರಿಗಳ ಕಾಲದಲ್ಲಿ ಎಷ್ಟೆಷ್ಟು ಬಾರಿ ತಿದ್ದುಪಡಿಯಾಗಿದೆ ಎಂದು ತಿಳಿದ ಮೇಲೆ ವಿರೋಧಿಗಳು ಸುಮ್ಮನಾದರು. ಪ್ರಸ್ತುತ ತಿದ್ದುಪಡಿ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಕಾಂಗ್ರೆಸ್‌ನವರು ಅಂಬೇಡ್ಕರ್ ಅವರಿಗೆ 'ಭಾರತ ರತ್ನ' ಕೊಡಲು ನಿರಾಕರಿಸಿದರು. ಆದರೆ, ತಮ್ಮ ಕುಟುಂಬಗಳಿಗೆ ಕೊಟ್ಟುಕೊಂಡಿರುವ ಬಗ್ಗೆ ತಿಳಿದ ನಂತರ ಎಡಪಂಥಿಯರು ಸುಮ್ಮನಾಗಿದ್ದಾರೆ ಎಂದು ಹೇಳಿದರು.

ಅಂಬೇಡ್ಕರ್ ಅವರು ಜಮ್ಮು–ಕಾಶ್ಮೀರ ಒಗ್ಗೂಡಿಸಿದ ಭಾರತ ಅಖಂಡವಾಗಬೇಕೆಂದು ಬಯಸಿದ್ದರು. ಆದರೆ, ನೆಹರು ಸರ್ಕಾರ ಮತ್ತು ಎಡಪಂಥೀಯರು ಒಪ್ಪದಿಲ್ಲ. ಹಿಂದೂ ಕಾಯ್ದೆ ಜಾರಿಗೆ ತರಲು ಹಾಗೂ ಎಲ್ಲರಿಗೂ ಒಂದೇ ಕಾನೂನು ತರಬೇಕೆಂದು ಅಂಬೇಡ್ಕರ್ ಬಯಸಿದ್ದರು. ಆದರೆ, ನೆಹರು ಅವರು ಮುಸ್ಲಿಮರ ಮೇಲಿನ ವ್ಯಾಮೋಹದಿಂದ ಅವಕಾಶ ಕೊಡಲಿಲ್ಲ ಎಂದು ದೂರಿದರು.

1930ರಿಂದಲೂ ಅಂಬೇಡ್ಕರ್ ಅವರನ್ನು ಹಿಂದೂ ವಿರೋಧಿ ಎಂದೇ ಬಿಂಬಿಸಿದ ಎಡಪಂಥೀಯರು ಮತ್ತು ಕಾಂಗ್ರೆಸ್‌ನವರು ವಂದೇ ಭಾರತ್, ಜೈ ಭಾರತ್ ಜತೆಗೆ ಅಲ್ಲಾ ಹು ಅಕ್ಬರ್ ಎಂದು ಕೂಗೋಣ ಎಂದಾಗ ಇದನ್ನು ಅಂಬೇಡ್ಕರ್ ವಿರೋಧಿಸಿದರು. ಜನಸಂಖ್ಯೆಯ ಅಸಮತೋಲನವನ್ನು ಅಂದೇ ಅಂಬೇಡ್ಕರ್ ಗುರುತಿಸಿದ್ದರು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪುಸ್ತಕ ಮನೆ ಅಂಕೇಗೌಡ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷೆ ಡಾ.ಮೀರಾ ಶಿವಲಿಂಗಯ್ಯ, ಸ್ವರಾಷ್ಟ್ರ ಪ್ರಕಾಶನ ಸಂಸ್ಥೆಯ ಚಂದ್ರಶೇಖರ್ ದಡದಪುರ, ನಾನೂ ಕಾಫಿರ ಕೃತಿ ಕರ್ತೃ ಡಾ.ಸುಧಾಕರ ಹೊಸಳ್ಳಿ ಉಪಸ್ಥಿತರಿದ್ದರು.

ಫೆ.18ರಂದು ಮೈಸುಗರ್ ಕಂಪನಿಯ ಸರ್ವ ಸದಸ್ಯರ ಸಭೆ



ಮಂಡ್ಯ: ದಿ ಮೈಸೂರು ಷುಗರ್ ಕಂಪನಿಯ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಫೆ.18ರಂದು ಮೈಶುಗರ್ ಕಾರ್ಖಾನೆಯ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2014–15ನೇ ಸಾಲಿನಲ್ಲಿ ಅಂದಿನ ಅಧ್ಯಕ್ಷ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಆಯೋಜಿಸಿದ್ದರು. ಅಂದಿನಿಂದ ಹತ್ತು ವರ್ಷಗಳು ಯಾವುದೇ ಸಭೆ ಮಾಡಿರಲಿಲ್ಲ. ಇದೀಗ 2015–16ನೇ ಸಾಲಿನ ಸಭೆಯನ್ನು ಅಂದು ಬೆಳಿಗ್ಗೆ 10 ಗಂಟೆಗೆ, 2016–17ನೇ ಸಾಲಿನ ಸಭೆಯನ್ನು ಮಧ್ಯಾಹ್ನ 12 ಗಂಟೆಗೆ ಆಯೋಜಿಸಲಾಗಿದೆ ಎಂದರು.

ಮೈಶುಗರ್ ಕಂಪನಿಯ 82 ಹಾಗೂ 83ನೇ ಸಾಲಿನ ವಾರ್ಷಿಕ ವರದಿಯನ್ನು ವಿತರಣೆ ಮಾಡಲಾಗುತ್ತಿದೆ. ಆಡಿಟ್ ವರದಿಯನ್ನು ಸದಸ್ಯರು ಕಂಪನಿಯಿಂದ ಪಡೆಯಬಹುದಾಗಿರುತ್ತದೆ. ಸದಸ್ಯರು ಯಾವುದೇ ಪ್ರಶ್ನೆ ಕೇಳುವುದಿದ್ದರೆ ಫೆ.12ನೇ ತಾರೀಖಿನೊಳಗೆ ಲಿಖಿತ ರೂಪದಲ್ಲಿ ನೀಡುವಂತೆ ಮನವಿ ಮಾಡಿದರು.

ಮೈಶುಗರ್ ಕಂಪನಿಗೆ ಸಂಬಂಧಿಸಿದಂತೆ 2017ರಿಂದ 2025ರವರೆಗಿನ ವಾರ್ಷಿಕ ವರದಿಯೂ ಸಿದ್ಧವಾಗಿದೆ. ಅದನ್ನೂ ಸಂಪೂರ್ಣವಾಗಿ ಐಟಿ ಫೈಲ್ ಮಾಡಿಸಿ ಅಂತಿಮ ಮಾಡಲಾಗುವುದು. ಈ ಮೂಲಕ ಕಂಪನಿಯ ಶೇರುದಾರರಿಗೆ ಮಾಹಿತಿ ಒದಗಿಸಲಾಗುವುದು. ಕಳೆದ ಎರಡು ವರ್ಷಗಳಿಂದ ಕಾರ್ಖಾನೆಯನ್ನು ಸಬಲೀಕರಣಗೊಳಿಸಲು 300 ಕೋಟಿಗೂ ಹೆಚ್ಚು ಆರ್ಥಿಕ ಶಕ್ತಿ ತುಂಬಿರುವ ಸಲುವಾಗಿ ಸಭೆಯಲ್ಲಿ ಮಾಹಿತಿ ನೀಡಲಾಗುವುದು. ಸಭೆಗೆ ಕಾರ್ಖಾನೆಯ ಸಂಸ್ಥಾಪಕ ಕೋಲ್ಮನ್ ಅವರ ಕುಟುಂಬದಿಂದ ಯಾರನ್ನಾದರೂ ಓರ್ವ ಸದಸ್ಯರನ್ನು ಕರೆತರುವ ಪ್ರಯತ್ನ ಮಾಡಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕೌಡ್ಲೆ ಚನ್ನಪ್ಪ, ಸ್ವಾಮೀಗೌಡ, ಸುಂಡಹಳ್ಳಿ ಮಂಜುನಾಥ ಇತರರಿದ್ದರು.

ಧಾರ್ಮಿಕ ಕೇಂದ್ರಗಳಲ್ಲಿ ರಾಜಕೀಯ ತರಬೇಡಿ

ನರಹಳ್ಳಿ ಚಿಕ್ಕಮ್ಮದೇವಿ ದೇವಾಲಯದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು



ಚಿಕ್ಕಮ್ಮದೇವಿ ದೇವಾಲಯದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಕುಟುಂಬ ಸಮೇತರಾಗಿ ಆಗಮಿಸಿ ಪೂಜೆ ಸಲ್ಲಿಸಿದರು.

ಪಾಂಡವಪುರ, ಫೆ.7– ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ರಾಜಕೀಯ ಬೆರೆಸದೆ ಪಕ್ಷಾತೀತವಾಗಿ ಅಭಿವೃದ್ಧಿ ಸಾಧಿಸಬೇಕೆಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಕರೆ ನೀಡಿದರು.


ತಾಲೂಕಿನ ನರಹಳ್ಳಿ ಗ್ರಾಮದಲ್ಲಿ ಜೀರ್ಣೋದ್ಧಾರಗೊಳಿಸಲಾಗಿರುವ ಚಿಕ್ಕಮ್ಮ ದೇವಿ ದೇವಾಲಯದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಕುಟುಂಬ ಸಮೇತರಾಗಿ ಭಾಗವಹಿಸಿ ಪೂಜೆ ಸಲ್ಲಿಸಿದ ಬಳಿಕ, ಸಮಿತಿ ವತಿಯಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ದೇವಾಲಯಗಳು, ರಂಗಮಂದಿರಗಳು ಜನರು ಒಟ್ಟಿಗೆ ಸೇರಿ ತಮ್ಮ ಕಷ್ಟ ಸುಖಗಳನ್ನು ನಿವೇದಿಸುವ ಸ್ಥಳಗಳಾಗಿವೆ. ಅದರಲ್ಲೂ ಮಾನಸಿಕವಾಗಿ ಶಾಂತಿ ನೆಮ್ಮದಿ ದೊರಕಿಸುವಂತಹ ದೇವಾಲಯಗಳು ನಮ್ಮ ಪ್ರಾಚೀನ ಪರಂಪರೆಯ ಕೊಂಡಿಗಳಾಗಿವೆ. ನಮ್ಮ ಹಿರಿಯರು ದೇವಾಲಯಗಳಿಂದ ಒಳಿತಾಗುತ್ತದೆ ಎಂಬ ಕಾರಣಕ್ಕೆ ಅಲ್ಲಲ್ಲಿ ದೇವಸ್ಥಾನಗಳನ್ನು ನಿರ್ಮಿಸುತ್ತಿದ್ದರು. ಅದನ್ನು ಈಗಲೂ ಪಾಲಿಸಿಕೊಂಡು ಬರಲಾಗಿದೆ. ಆದ್ದರಿಂದ ಗ್ರಾಮೀಣ ಜನರು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಲು ದೇವರ ಮೊರೆಹೋಗುವುದು ಅನಾದಿಕಾಲದಿಂದ ನಡೆದು ಬಂದಿದೆ. ಹಾಗಾಗಿ ದೇವಾಲಯಗಳು ಇಂದಿಗೂ ಮಹತ್ವ ಪಡೆದಿದೆ ಎಂದರು.

ಇತ್ತೀಚೆಗೆ ಗ್ರಾಮೀಣ ಪ್ರದೇಶದ ಯುವಕರು ಉದ್ಯೋಗವನ್ನರಸಿ ಬೇರೆ ಬೇರೆ ನಗರಗಳತ್ತ ಮುಖ ಮಾಡಿದ್ದಾರೆ. ಆದರೆ, ಗ್ರಾಮೀಣ ಮಕ್ಕಳು ಪ್ರತಿಭಾವಂತರಿದ್ದು, ಹೆಚ್ಚು ಓದಿ ವಿದ್ಯಾವಂತರಾದಾಗ ಮಾತ್ರ ಅವರು ದೊಡ್ಡ ದೊಡ್ಡ ಹುದ್ದೆಗಳನ್ನು ಗಳಿಸಬಹುದು. ಮಾತ್ರವಲ್ಲ ಸ್ಪರ್ಧಾತ್ಮಕ ಸನ್ನಿವೇಶದಲ್ಲಿ ಉದ್ಯೋಗಾವಕಾಶಗಳನ್ನು ಪಡೆಯಲು ಸಾಧ್ಯವಿದೆ. ಆದ್ದರಿಂದ ಹುಟ್ಟಿದ ಊರು ಹಾಗೂ ಹೆತ್ತವರನ್ನು ಗೌರವದಿಂದ ಕಾಣಬೇಕು. ದೊಡ್ಡವರ ಆಶೀರ್ವಾದ ಪಡೆದು ಸಾಧನೆ ಮಾಡಬೇಕೆಂದು ಸಲಹೆ ನೀಡಿದರು.

ದೇವಾಲಯದ ಜೀರ್ಣೋದ್ಧಾರ ವಾರ್ಷಿಕೋತ್ಸವ ಕಾರ್ಯಕ್ರಮದ ಅಂಗವಾಗಿ ಹೋಮ, ಹವನ, ಪ್ರಾಣ ಪ್ರತಿಷ್ಠೆ, ನೇತ್ರೋನ್ಮಿಲನ, ಮಹಾಪೂರ್ಣಾಹುತಿ ಸೇರಿದಂತೆ ಅನೇಕ ಧಾರ್ಮಿಕ ಕಾರ್ಯಕ್ರಮಗಳು ಜರುಗಿತು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಪತ್ನಿ ನಾಗಮ್ಮ, ಪುತ್ರಿ ಅನಿತಾ, ಅಳಿಯ ವಿನಯ್, ಲಿಖಿತ್ ವಿನಯ್, ಸೇರಿದಂತೆ ಕುಟುಂಬ ಸಮೇತ ಚಿಕ್ಕಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಆಗಮಿಸಿದ್ದ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು

ಬೋನಿಗೆ ಬಿದ್ದ ಚಿರತೆ: ರೈತರ ನಿಟ್ಟುಸಿರು



ಕಿಕ್ಕೇರಿ: ಸಮೀಪದ ಹಿರಿಕಳಲೆ ಗ್ರಾಮದ ತೋಟದಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಚಿರತೆ ಬಿದ್ದಿದ್ದು ರೈತರು ತುಸು ನಿಟ್ಟುಸಿರು ಬಿಡುವಂತಾಗಿದೆ.

ಈ ಪ್ರದೇಶದ ಸುತ್ತಮುತ್ತಲ ವ್ಯಾಪ್ತಿಯಲ್ಲಿ ಚಿರತೆ ಉಪಟಳಕ್ಕೆ ಸಾಕುಪ್ರಾಣಿ, ನಾಯಿ, ಜಾನುವಾರುಗಳು ಬಲಿಯಾಗಿದ್ದವು. ರೈತರು ಒಂಟಿಯಾಗಿ ಜಮೀನುಗಳಿಗೆ ಓಡಾಡಲು ದಿಗಿಲು ಪಡುವಂತಾಗಿತ್ತು. ಚಿರತೆ ಸೆರೆಗೆ ಅರಣ್ಯ ಇಲಾಖೆಗೆ ಮನವಿ ಮಾಡಲಾಗಿತ್ತು. ಅರಣ್ಯ ಇಲಾಖೆಯವರು ಗ್ರಾಮದ ಕೃಷ್ಣಯ್ಯ ಅವರ ತೋಟದಲ್ಲಿ ಚಿರತೆ ಸೆರೆ ಹಿಡಿಯಲು ಬೋನನ್ನು ವಾರದ ಹಿಂದೆ ಇಡಲಾಗಿತ್ತು.

ಶನಿವಾರ ಮುಂಜಾನೆ ಚಿರತೆ ಬೋನಿನಲ್ಲಿದ್ದ ನಾಯಿ ತಿನ್ನಲು ಹೋಗಿ ಬಂಧಿಯಾಗಿದೆ. ಬೋನಿನಲ್ಲಿದ್ದ ಚಿರತೆ ವೀಕ್ಷಿಸಲು ಗ್ರಾಮಸ್ಥರು ತಂಡೋಪತಂಡವಾಗಿ ಆಗಮಿಸಿದ್ದರು. ಜನರನ್ನು ನಿಯಂತ್ರಣ ಮಾಡಿ ಬೋನನ್ನು ತಾಲ್ಲೂಕು ವಲಯ ಅರಣ್ಯ ಇಲಾಖೆಗೆ ತೆಗೆದುಕೊಂಡು ಹೋಗಲಾಯಿತು. ಮೇಲಾಧಿಕಾರಿಗಳ ಮಾಹಿತಿ ಮೇರೆಗೆ ಚಿರತೆಯನ್ನು ಸುರಕ್ಷಿತ ಬಂಡೀಪುರ ಅರಣ್ಯ ಪ್ರದೇಶಕ್ಕೆ ಬಿಡಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಉಪವಲಯ ಅರಣ್ಯಾಧಿಕಾರಿ ಚೇತನ್, ನಂದಕುಮಾರ್, ಗಸ್ತು ವನಪಾಲಕ ಕೆ.ಎಲ್. ರವಿ, ಸಿಬ್ಬಂದಿಗಳಾದ ಸಂಜೀವ್, ಶ್ರೀನಿವಾಸ್ ಇದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಶ್ರೀರಂಗಪಟ್ಟಣ: ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಫೆ.9 ರಂದು ಬೆಳಿಗ್ಗೆ 9.30 ರಿಂದ ಸಂಜೆ 6ಗಂಟೆಯವರೆಗೆ ಬೆಳಗೊಳ, ಕೆ.ಆರ್.ಸಾಗರ, ಹೊಸ ಆನಂದೂರು, ಮೊಗರಹಳ್ಳಿ, ಕಾರೇಕುರ, ಕುಪ್ಪೆದಡ, ಬಸ್ತಿಪುರ, ಕೆ.ಇ.ಬಿ ಕೈಗಾರಿಕಾ ಪ್ರದೇಶ, ಹೊಂಗಹಳ್ಳಿ ವಾಟರ್ ಸಪ್ಲೈ, ಅನಗನಹಳ್ಳಿ, ಹೊಸ ಉಂಡವಾಡಿ, ಮಜ್ಜಿಗೆಪುರ, ಎಂ.ಎಂ.ಜಿ ಲೇಔಟ್, ಹುಲಿಕೆರೆ ಹೊಸಹಳ್ಳಿ, ಪಾಲಹಳ್ಳಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಒಂದನೇ ಪುಟದಿಂದ

ಅಧಿಕಾರ ಹಂಚಿಕೆ ಒಪ್ಪಂದ ಆಗಿದೆ

ಎಂದು ತಿಳಿಸಿದ್ದಾರೆ. ಡಿಕೆಶಿ ಸಾಹೇಬರು ಹೇಳಿದಂತೆ ಯತೀಂದ್ರ ಸಿದ್ದರಾಮಯ್ಯ ನಮ್ಮ ಹೈಕಮಾಂಡ್. ಪದೇ ಪದೇ ಮಾಧ್ಯಮಗಳ ಮುಂದೆ ಬಂದು ಪಕ್ಷಕ್ಕೆ ಡ್ಯಾಮೇಜ್ ಆಗುವ ಕೆಲಸ ಮಾಡುತ್ತಿದ್ದಾರೆ, ಸಿದ್ದರಾಮಯ್ಯ ಅವರ ಹೈಕಮಾಂಡ್ ಯತೀಂದ್ರ ಅವರಿರಬಹುದು. ನಮ್ಮ ಹೈಕಮಾಂಡ್ ಬೇರೆ ಇದೆ. ಖರ್ಗೆ ಸಾಹೇಬರು, ರಾಹುಲ್ ಗಾಂಧಿಯವರು. ಹೈಕಮಾಂಡ್ ಕೂಡಲೇ ಒಪ್ಪಂದದ ಬಗ್ಗೆ ಸ್ಪಷ್ಟಪಡಿಸಲಿ. ನಾನು ಯಾವುದೇ ಮಾತು ಕೊಟ್ಟಿಲ್ಲ ಎಂದು ಸಿದ್ದರಾಮಯ್ಯ ನವರು ಕ್ಲಿಯರ್ ಮಾಡಲಿ. ಆಗ ಈ ಸಮಸ್ಯೆಯೇ ಮುಗಿದು ಹೋಗುತ್ತಲ್ಲ. ಆಗ ನಾವು ಎಲ್ಲರೂ ಯಾವುದೇ ಪ್ರಶ್ನೆ ಎತ್ತುವುದಿಲ್ಲ ಎಂದರು. ಸಿಎಂ ಬದಲಾವಣೆ ವಿಚಾರವಾಗಿ ನನ್ನ ಹೇಳಿಕೆಯನ್ನು ಗಣನೆಗೆ ತೆಗೆದುಕೊಳ್ಳಿ. ಯಾಕಂದ್ರೆ ನಂದು ಒಂದು ವೋಟ್ ಇದೆ. ಆದರೆ, ಯತೀಂದ್ರ ಸಿದ್ದರಾಮಯ್ಯನವರದ್ದು ವೋಟ್ ಇಲ್ಲ. ಅವರ ಹೇಳಿಕೆ ಏಕೆ ಗಣನೆಗೆ ತೆಗೆದುಕೊಳ್ಳುತ್ತೀರಿ ಎನ್ನುವ ಮೂಲಕ ಯತೀಂದ್ರ ಸಿದ್ದರಾಮಯ್ಯಗೆ ಟಾಂಗ್ ನೀಡಿದರು.

ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಸಿಎಂ

ಪಕ್ಷದ ರಾಜಕೀಯ ಬೆಳವಣಿಗೆಗಳು ಗೊಂದಲಕಾರಿ ಎಂದು ಹೈಕಮಾಂಡ್‌ಗೆ ಅನ್ನಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ವರಿಷ್ಠರು ಯಾವುದೇ ಪ್ರತಿಕ್ರಿಯೆ ನೀಡದೆ ಮೌನವಾಗಿದ್ದಾರೆ. ಇದರಿಂದ ಅಧಿಕಾರ ಹಸ್ತಾಂತರ ವಿಚಾರ ಅಪ್ರಸ್ತುತ ಎಂದು ಅಭಿಪ್ರಾಯಪಟ್ಟರು. ಯತೀಂದ್ರ ಅವರಿಗೆ ಅವರದೆ ಆದ ಸೋರ್ಸ್ ಇರಬಹುದು, ಅದರ ಆಧಾರದ ಮೇಲೆ ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಮುಂದುವರೆಯುತ್ತಾರೆ ಎಂದೇಳಿದ್ದಾರೆ ಎಂದು ಡಾ.ಪರಮೇಶ್ವರ್ ತಿಳಿಸಿದರು.

140 ಕೋಟಿ ಮೌಲ್ಯದ 7 ಎಕರೆ ಭೂಮಿ ವಶಕ್ಕೆ

ವಿಜಯನಗರ ಮೂರನೇ ಹಂತದ ವಸತಿ ಬಡಾವಣೆ ಅಭಿವೃದ್ಧಿಪಡಿಸುವ ಸಂದರ್ಭ ಭೂಸ್ವಾಧೀನಪಡಿಸಿಕೊಂಡಿದ್ದ, ಸದರಿ 7 ಎಕರೆ ಭೂಮಿಯನ್ನು ಕ್ರೀಡಾಂಗಣಕ್ಕಾಗಿ ಮೀಸಲಿರಿಸಲಾಗಿತ್ತು. ಭೂ ಮಾಲೀಕರಿಗೆ ನಿಯಮಾನುಸಾರ ಪರಿಹಾರವನ್ನು ಒದಗಿಸಿತ್ತಾದರೂ, ಕೆಲವರು ನ್ಯಾಯಾಲಯದ ಮೊರೆ ಹೋಗಿ ಆ ಸ್ಥಳದಲ್ಲಿ ಶೆಡ್‌ಗಳನ್ನು ನಿರ್ಮಿಸಿ, ಸ್ವಾಧೀನಾನುಭವದಲ್ಲಿದ್ದರು. ಈ ಸಂದರ್ಭದಲ್ಲಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ಕಮಿಷ್ನರ್ ಕೆ.ಆರ್.ರಕ್ಷಿತ್, ಈ ಹಿಂದೆ ಕ್ರೀಡಾಂಗಣಕ್ಕಾಗಿ ಮೀಸಲಿರಿಸಿದ್ದ ಜಾಗದಲ್ಲಿ ಕೆಲವರು ಶೆಡ್‌ಗಳನ್ನು ನಿರ್ಮಿಸಿಕೊಂಡು ಅನಧಿಕೃತವಾಗಿ ದನ–ಕರುಗಳೊಂದಿಗೆ ನೆಲೆಸಿದ್ದರು. ಆರ್‌ಟಿಸಿಯಲ್ಲಿ ಆ ಏಳು ಎಕರೆ ಭೂಮಿ ಪ್ರಾಧಿಕಾರದ ಮಾಲೀಕತ್ವದಲ್ಲಿರುವುದರಿಂದ ಇಂದು ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಅಧಿಕಾರಿಗಳೊಂದಿಗೆ ತೆರಳಿ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್ ನೇತೃತ್ವದಲ್ಲಿ 50 ಪೊಲೀಸ್ ಸಿಬ್ಬಂದಿಯ ಭದ್ರತೆ ಪಡೆದು ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಿ ತೆರವು ಗೊಳಿಸಲಾಯಿತು ಎಂದರು. ಈಗಾಗಲೇ ತೆರವುಗೊಳಿಸಿದ ಈ ಭೂಮಿ ಸುತ್ತಲೂ ತಂತಿ ಬೇಲಿ ಅಳವಡಿ ಸುವ ಕಾಮಗಾರಿಯನ್ನು ಆರಂಭಿಸಲಾಗಿದ್ದು, ಸ್ಥಳದಲ್ಲಿ ಫಲಕವನ್ನು ಹಾಕಿ ಯಾರೂ ಅತಿಕ್ರಮ ಪ್ರವೇಶ ಮಾಡದಂತೆ ಎಚ್ಚರಿಕೆ ವಹಿಸಲಾಗುತ್ತಿದೆ ಹಾಗೂ ಕ್ರೀಡಾಂಗಣಕ್ಕೆ ಅಲ್ಲಿ ಅಷ್ಟಾಗಿ ಬೇಡಿಕೆ ಇಲ್ಲದ ಕಾರಣ ಅದರ ಉದ್ದೇಶವನ್ನು ಬದಲಿಸುವ ಮೂಲಕ ತಕ್ಷಣದಿಂದಲೇ ಕಾರ್ಯೋನ್ಮುಖರಾಗುತ್ತಿವೆ ಎಂದು ರಕ್ಷಿತ್ ಇದೇ ಸಂದರ್ಭ ತಿಳಿಸಿದರು.

ರಾಜಕಾರಣಿ ಕೈವಾಡ ಶಂಕೆ: ಪ್ರಾಧಿ ಕಾರಕ್ಕೆ ಸೇರಿದ ಈ ಜಾಗದಲ್ಲಿ ಅನ ಧಿಕೃತವಾಗಿ ಕೆಲವರು ಸ್ವಾಧೀನಾನು ಭವದಲ್ಲಿರುವುದರ ಹಿಂದೆ ಒಬ್ಬ ರಾಜಕಾರಣಿಯ ಕುಮ್ಮಕ್ಕಿದೆ ಎಂದು ಹೇಳಲಾಗುತ್ತಿದ್ದು, ತೆರವುಗೊಳಿಸಲು ಪ್ರಯತ್ನಿಸಿದ್ದ ಎಂಡಿಎ ಅಧಿಕಾರಿಗಳಿಗೂ ಆತ ಧಮ್ಕಿ ಹಾಕಿದ್ದರು ಎನ್ನಲಾಗಿದೆ. ಇಂದಿನ ತೆರವು ಕಾರ್ಯಾಚರಣೆಯಲ್ಲಿ ಎಂಡಿಎ ಕಾರ್ಯದರ್ಶಿ ಕೆ.ಜಾನ್ಸನ್, ಕಾರ್ಯಪಾಲಕ ಇಂಜಿನಿಯರ್‌ಗಳಾದ ನಾಗೇಶ್, ಮಹೇಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸುನಿತ, ಭೂಸ್ವಾಧೀನ ಶಾಖೆ ಸಿಬ್ಬಂದಿ ಸಚಿನ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಬೆಂಕಿ ಹೊತ್ತಿಸಿಕೊಂಡು ಆತ್ಮಹತ್ಯೆ ಯತ್ನ

ಇದನ್ನು ಕಂಡ ಕೆಲವರು ರಕ್ಷಣೆಗೆ ಮುಂದಾಗಿದ್ದಾರೆ. ಈ ವೇಳೆ ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಹೊತ್ತಿ ಉರಿಯುತ್ತಿದ್ದ ಕಾರಿನಿಂದ ಹೊರಗೆಳೆದು ತಂದಿದ್ದಾರೆ. ಆದರೆ ಸಜೀರ್, ಕಾರಿನಲ್ಲೇ ಸಜೀವ ದಹನವಾಗಿದ್ದಾರೆ. ಮಕ್ಕಳು ಅಪಾಯದಿಂದ ಪಾರಾಗಿದ್ದರೆ, ಪತ್ನಿಯ ಸ್ಥಿತಿ ಗಂಭೀರವಾಗಿದೆ. ತಮ್ಮ ಕುಟುಂಬ ಆತ್ಮಹತ್ಯೆಗೆ ನಿರ್ಧರಿಸಲು ಕಾರಣವೇನೆಂಬುದನ್ನು ಕಾರಿನಲ್ಲೇ ಕುಳಿತು ಉದ್ಯಮಿ ಸಜೀರ್, ವೀಡಿಯೊ ರೆಕಾರ್ಡ್ ಮಾಡಿದ್ದಾರೆ. ನಮ್ಮ ಆತ್ಮಹತ್ಯೆಗೆ ನಮ್ಮಿಂದ ಸಾಲ ಪಡೆದ ಬಾಪುವೇ ಕಾರಣ ಎಂದು ದೂರಿದ್ದಾರೆನ್ನಲಾಗಿದೆ. ಈ ಸಂಬಂಧ ಮಾನಂದವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೀಕ್ರೆಟ್ ಆಪರೇಷನ್ ನಡೀತಿದೆ!

ಡ್ರಗ್ಸ್ ದಂಧೆ ಮಟ್ಟ ಹಾಕಲು ಸೀಕ್ರೆಟ್ ಆಪರೇಷನ್ ನಡೆಸಲಾಗುತ್ತಿದೆ. ಆದರೆ ವಿದೇಶಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬರುವ ಹಿನ್ನೆಲೆಯಲ್ಲಿ ಈ ವಿಚಾರಗಳನ್ನು ಬಹಿರಂಗ ಮಾಡಿದರೆ ರಾಜತಾಂತ್ರಿಕವಾದ ಹಲವು ಸಮಸ್ಯೆಗಳು ತಲೆದೋರಬಹುದು. ಈ ಹಿನ್ನೆಲೆಯಲ್ಲಿ ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದ್ದರೂ ಅದನ್ನು ಜನರಿಗೆ ತಿಳಿಸಲು ಸಾಧ್ಯವಾಗುತ್ತಿಲ್ಲ. ಜನರು ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

15 ದಿನಕ್ಕೊಮ್ಮೆ ವರದಿ: ಮೈಸೂರು ಸೇರಿದಂತೆ ರಾಜ್ಯದ ಪ್ರತಿಯೊಂದು ಕೆಮಿಕಲ್ಸ್ ಫ್ಯಾಕ್ಟರಿಗಳು ಪ್ರತಿ 15 ದಿನಕ್ಕೊಮ್ಮೆ ಅಲ್ಲಿ ತಯಾರಿಸುವ ರಾಸಾಯನಿಕದ ಬಗ್ಗೆ ಪೊಲೀಸ್ ಠಾಣೆಗೆ ವರದಿ ಮಾಡಬೇಕು. ರಾಸಾಯನಿಕ ಕಚ್ಚಾ ವಸ್ತುಗಳನ್ನು ಎಷ್ಟು ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಲಾಗಿದೆ. ಎಲ್ಲಿಗೆ ಮಾರಾಟ ಮಾಡಲಾಗುತ್ತಿದೆ ಎಂದು ಆಯಾ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಕೆಮಿಕಲ್ಸ್ ಕಾರ್ಖಾನೆಯಿಂದ ಈ ಮಾಹಿತಿಗಳನ್ನು ಸಂಗ್ರಹಿಸುವುದು ಆಯಾ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ಗಳ ಜವಾಬ್ದಾರಿಯಾಗಿದೆ ಎಂದರು.

ಡ್ರಗ್ಸ್ ತಯಾರಿಕೆಯ ಶಂಕೆ ಮೇರೆಗೆ ರಾಜಸ್ಥಾನ ಹಾಗೂ ಗುಜರಾತ್ ನಲ್ಲಿ 27 ಕೆಮಿಕಲ್ ಲ್ಯಾಬ್‌ಗಳನ್ನು ಗುರುತಿಸಲಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಎಲ್ಲಾ ಕೆಮಿಕಲ್ಸ್ ಫ್ಯಾಕ್ಟರಿಗಳನ್ನು ಪರಿಶೀಲನೆ ಮಾಡುವಂತೆ ಪೊಲೀಸರಿಗೆ ಸೂಚಿಸಿದ್ದೇನೆ ಎಂದರು.

ನಗರ ವೇಗವಾಗಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಗ್ರೇಟರ್ ಮೈಸೂರು ರಚನೆ ಮಾಡಿದೆ. ಜನಸಂಖ್ಯೆ ಹಾಗೂ ವಾಹನಗಳ ಸಂಖ್ಯೆ ಕೂಡ ಹೆಚ್ಚಾಗುತ್ತಿದೆ. ನಾನು ಚಿಕ್ಕ ವಯಸ್ಸಿನಲ್ಲಿ ಇಲ್ಲಿಗೆ ಬಂದಾಗ ಮೈಸೂರು ಹೇಗಿತ್ತೊ ಈಗಲೂ ಹಾಗೆ ಇದೆ. ನಗರದ ಬೆಳವಣಿಗೆಯಲ್ಲಿ ಸ್ವಲ್ಪ ಬದಲಾವಣೆಯಾದರೂ ಇತಿಹಾಸವನ್ನು ಮಾತ್ರ ಮೈಸೂರು ಬಿಟ್ಟುಕೊಟ್ಟಿಲ್ಲ. ಇತಿಹಾಸದ ಜೊತೆಗೆ ಮೈಸೂರು ಅಭಿವೃದ್ಧಿಯಾಗುತ್ತಿದೆ ಎಂದು ಪ್ರಶಂಸಿಸಿದರು.

ಪೊಲೀಸರು ಜನಸ್ನೇಹಿಯಾಗಿರಬೇಕು: ಲಂಡನ್‌ನಂತೆ ಮೈಸೂರು ಕೂಡ ಪ್ರವಾಸಿಗರನ್ನು ಆಕರ್ಷಿಸಬೇಕು. ಏಕಾದರೂ ಮೈಸೂರಿಗೆ ಬಂದೆವು ಎಂಬ ಮನೋಭಾವ ಪ್ರವಾಸಿಗರಲ್ಲಿ ಮೂಡಬಾರದು. ಪೊಲೀಸರು ಜನ ಸ್ನೇಹಿಯಾಗಿ ನಡೆದುಕೊಳ್ಳಬೇಕು. ಪೊಲೀಸ್ ಠಾಣೆಗೆ ಬರುವ ಎಲ್ಲರನ್ನು ಅಪರಾಧಿಗಳಂತೆ ನೋಡಬಾರದು ಎಂದು ಸಲಹೆ ನೀಡಿದರು.

ನಮ್ಮ ಕಷ್ಟ ಪರಿಹಾರ ಮಾಡುವಂತೆ ದೇವರನ್ನು ಬೇಡಲು ಜನರು ದೇವಸ್ಥಾನಕ್ಕೆ ಹೋಗುತ್ತಾರೆ. ಹಾಗೆಯೇ ತಮ್ಮ ಸಮಸ್ಯೆ ಪರಿಹರಿಸುವಂತೆ ದೇವಸ್ಥಾನವೆಂದು ಭಾವಿಸುವ ಪೊಲೀಸ್ ಠಾಣೆಗೆ ಬರುತ್ತಾರೆ. ಅವರನ್ನು ಅಪರಾಧದ ದೃಷ್ಟಿಯಲ್ಲಿ ನೋಡದೆ ಜನಸ್ನೇಹಿಯಾಗಿ ಕಾಣಬೇಕು ಎಂದು ಡಾ.ಪರಮೇಶ್ವರ್ ಕಿವಿಮಾತು ಹೇಳಿದರು.

2 ಸಾವಿರ ಸಿಸಿಟಿವಿ ಕ್ಯಾಮರಾ ಅಳವಡಿಸಿ

ಮಾಡುತ್ತೇನೆ ಎಂದು ಡಾ.ಪರಮೇಶ್ವರ್ ಭರವಸೆ ನೀಡಿದರು. ಉದಯಗಿರಿ ಪೊಲೀಸ್ ಠಾಣೆಯನ್ನು ಪ್ರತ್ಯೇಕಿಸಲಾಗಿದೆ. ಈಗ ಒಂದು ಪೊಲೀಸ್ ಠಾಣೆಗೆ ಕಟ್ಟಡದ ಅವಶ್ಯವಿದ್ದು, ಅದನ್ನು ಕೂಡ ಶೀಘ್ರ ಮಂಜೂರು ಮಾಡುತ್ತೇನೆ ಎಂದು ಆಶ್ವಾಸನೆ ನೀಡಿದರು. ಮೈಸೂರು ನಗರದ ಪೊಲೀಸ್ ಠಾಣೆಗಳನ್ನು ಮರು ವಿಂಗಡಣೆ ಮಾಡುವುದು ಅತ್ಯವಶ್ಯವಿದೆ. ಒಂದು ಪೊಲೀಸ್ ಠಾಣೆಯಲ್ಲಿ ಎಷ್ಟು ಜನಸಂಖ್ಯೆ ಇರಬೇಕು, ಎಷ್ಟು ವಾರ್ಡ್‌ಗಳಿರಬೇಕು, ಅದರ ವ್ಯಾಪ್ತಿ ಎಷ್ಟಿರಬೇಕು ಎಂಬ ಬಗ್ಗೆ ಇನ್ನು 15 ದಿನದಲ್ಲಿ ಸಮಗ್ರ ವರದಿ ನೀಡಬೇಕು ಎಂದು ಸೀಮಾ ಲಾಟ್ಕರ್ ಅವರಿಗೆ ಸೂಚನೆ ನೀಡಿದರು. ಮೈಸೂರಿನ ಗೋಕುಲಂ ಬಡಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿಗರಿದ್ದಾರೆ ಎಂಬ ಮಾಹಿತಿ ಇದೆ. ಈ ಸಂಬಂಧ ಅಲ್ಲಿನ ಚಲನವಲನಗಳ ಬಗ್ಗೆ ಪೊಲೀಸರು ಹೆಚ್ಚಿನ ನಿಗಾ ವಹಿಸಬೇಕು ಎಂದು ಹೇಳಿದರು.

ಮೈಸೂರಿಗೆ ಅಪರಾಧದ ಕುಖ್ಯಾತಿ!

ಮೈಸೂರು: ನಿವೃತ್ತಿದಾರರ ಸ್ವರ್ಗವೆಂದೇ ಪ್ರಖ್ಯಾತಿ ಪಡೆದಿರುವ ಮೈಸೂರು ಇಂದು ನಾನಾ ರೀತಿಯ ಅಪರಾಧ ಕೃತ್ಯಗಳಿಂದ ಪ್ರಸಿದ್ಧಿ ಪಡೆಯುತ್ತಿದೆ ಎಂದು ಶಾಸಕ ತನ್ವೀರ್ ಸೇಠ್ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯನ್ನು ಪ್ರತ್ಯೇಕಿಸಲಾಗಿದೆ. ಆದರೆ ಅವಶ್ಯ ಸಿಬ್ಬಂದಿ ಸೇರಿದಂತೆ ಮೂಲಭೂತ ಸೌಕರ್ಯವಿಲ್ಲ. ಮೈಸೂರಿನಲ್ಲಿ ಹಾಲಿ 16 ಪೊಲೀಸ್ ಠಾಣೆ, ಐದು ಸಂಚಾರಿ ಪೊಲೀಸ್ ಠಾಣೆಗಳಿವೆ. ಆದರೂ ಮತ್ತಷ್ಟು ಪೊಲೀಸ್ ಠಾಣೆ ಅವಶ್ಯವಿದ್ದು, ಇದನ್ನು ಮಂಜೂರು ಮಾಡುವಂತೆ ಗೃಹ ಸಚಿವ ಡಾ.ಪರಮೇಶ್ವರ್ ಅವರಲ್ಲಿ ತನ್ವೀರ್ ಸೇಠ್ ಮನವಿ ಮಾಡಿದರು.

ಇದೇ ವೇಳೆ ಮಾತನಾಡಿದ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು, ಗ್ರಾಮೀಣ ಪ್ರದೇಶದಲ್ಲಿ ಕೂಡ ಡ್ರಗ್ಸ್ ಮಾರಾಟವಾಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು ಎಂದು ಕೋರಿದರು. ನಂತರ ಮಾತನಾಡಿದ ಶಾಸಕ ಸಿ.ಎನ್.ಮಂಜೇಗೌಡ ಅವರು, ಪೊಲೀಸ್ ಇಲಾಖೆಯಲ್ಲಿ ಮತ್ತಷ್ಟು ಸುಧಾರಣೆ ತರಬೇಕು, ಪೊಲೀಸ್ ಸಿಬ್ಬಂದಿಗಳ ವಸತಿ ಗೃಹಗಳನ್ನು ನವೀಕರಣ ಮಾಡುವಂತೆ ಮನವಿ ಮಾಡಿದರು.

ಮೇಲೆ ಹದ್ದಿನ ಕಣ್ಣಿಡಿ

ಹೆಬ್ಬಾಳು ಕಾರ್ಖಾನೆಯಲ್ಲಿ ಡ್ರಗ್ಸ್ ದೊರೆತಿದೆ ಎಂದು ಎನ್ ಸಿಬಿ ಅಧಿಕಾರಿಗಳು ಪತ್ರಿಕಾ ಪ್ರಕಟಣೆ ನೀಡಿದರೆ, ಕೋರ್ಟ್‌ಗೆ ನೀಡಿರುವ ಮಾಹಿತಿಯಲ್ಲಿ ಡ್ರಗ್ಸ್ ಸಿಕ್ಕಿಲ್ಲ ಎಂದು ತಿಳಿಸಿದ್ದಾರೆ. ಯಾವ ಕಾರಣದಿಂದ ಇಂತಹ ದ್ವಂದ್ವ ಹೇಳಿಕೆ ನೀಡಿದ್ದಾರೆ, ಇದರ ಹಿಂದಿರುವ ಉದ್ದೇಶವೇನು ಎಂಬುದು ತಿಳಿಯದ ಸಂಗತಿಯಾಗಿದೆ ಎಂದರು. ಅಲ್ಲಿ ಡ್ರಗ್ಸ್ ಸಿಕ್ಕಿಲ್ಲವೆಂದು ನಮ್ಮ ಪೊಲೀಸರು ನನಗೆ ಸರಿಯಾದ ಮಾಹಿತಿ ನೀಡಿದ್ದಾರೆ. ನಮ್ಮ ಪೊಲೀಸರು ನೀಡಿರುವ ಮಾಹಿತಿಯನ್ನು ನಾನು ನಂಬುತ್ತೇನೆ ಎಂದು ಹೇಳಿದರು. ಆದರೂ ಮೈಸೂರು ಸೇರಿದಂತೆ ರಾಜ್ಯದ ಎಲ್ಲಾ ಕೆಮಿಕಲ್ಸ್ ಫ್ಯಾಕ್ಟರಿ ಮೇಲೆ ಹೆಚ್ಚಿನ ನಿಗಾ ವಹಿಸುವಂತೆ ಸೂಚನೆ ನೀಡಿದ್ದೇನೆ ಎಂದು ಗೃಹ ಸಚಿವ ಡಾ.ಜಿಪರಮೇಶ್ವರ್ ತಿಳಿಸಿದರು.

8277948080ಕ್ಕೆ ವಿವರ ನೀಡಿ

ವಿಚಾರಗಳನ್ನು ನೀಡಬಹುದು. ಈ ಸಂಬಂಧ ವಿವರ ನೀಡಿದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮಾದಕ ವಸ್ತುಗಳ ತಯಾರಿಕೆ, ಮಾರಾಟ, ಸೇವನೆ ಸೇರಿದಂತೆ ಯಾವುದೇ ಮಾಹಿತಿ ಇದ್ದರೂ ಈ ವಾಟ್ಸಾಪ್ ಸಂಖ್ಯೆಗೆ ಮಾಹಿತಿ ನೀಡಬಹುದು ಎಂದು ಹೇಳಿದರು. ಹೀಗೆ ಮಾಹಿತಿ ನೀಡುವವರ ಹೆಸರನ್ನು ಗೌಪ್ಯವಾಗಿಡಲಾಗುವುದು. ಇದರಿಂದ ನಿರ್ಭೀತಿಯಿಂದ ವರದಿ ಮಾಡಿ ಎಂದು ಸಾರ್ವಜನಿಕರಿಗೆ ಅಭಯ ನೀಡಿದರು. ಮಾದಕ ವಸ್ತುಗಳ ವಿರುದ್ಧ ಪರಿಣಾಮಕಾರಿ ಅರಿವು ಮೂಡಿಸಲಾಗುತ್ತಿದೆ. ಪೊಲೀಸ್ ಇಲಾಖೆಯ ಈ ಕಾರ್ಯಕ್ಕೆ ಸಾರ್ವಜನಿಕರು ಕೂಡ ಕೈಜೋಡಿಸಬೇಕು ಎಂದು ಕೋರಿದರು. ಮಕ್ಕಳಲ್ಲಿ ಏನಾದರೂ ಬದಲಾವಣೆಯಾದರೆ ಆ ಬಗ್ಗೆ ನಿರ್ಲಕ್ಷ್ಯ ತೋರದೆ ಅವರನ್ನು ಸೂಕ್ಷ್ಮವಾಗಿ ಗಮನಿಸಬೇಕು ಎಂದು ಸೀಮಾ ಲಾಟ್ಕರ್ ಪೋಷಕರಿಗೆ ಸಲಹೆ ನೀಡಿದರು.

20 ರೂ. ಲಂಚದ ಆರೋಪ; 30 ವರ್ಷ ಜೈಲು ಅನುಭವಿಸಿ ನಿರಪರಾಧಿ ತೀರ್ಪು ಬಂದ ಮರುದಿನವೇ ಸಾವು!

ಗಾಂಧೀನಗರ: ಗುಜರಾತ್‌ನಲ್ಲಿ ವ್ಯಕ್ತಿಯೊಬ್ಬ 20 ರೂ. ಲಂಚ ಪಡೆದಿದ್ದಕ್ಕಾಗಿ 30 ವರ್ಷ ಜೈಲು ಶಿಕ್ಷೆ ಅನುಭವಿಸಿದ್ದ, ಪ್ರಕರಣದಲ್ಲಿ ಆತ ನಿರಪರಾಧಿ ಎಂದು ಸಾಬೀತಾದ ಮರುದಿನವೇ ವ್ಯಕ್ತಿ ಮೃತಪಟ್ಟಿರುವ ಘಟನೆ ನಡೆದಿದೆ.

ಜೀವನದಲ್ಲಿ ನನಗೆ ಅಂಟಿದ್ದ ಕಳಂಕವನ್ನು ತೆಗೆದುಹಾಕಲಾಗಿದೆ. ಈಗ ದೇವರು ನನ್ನನ್ನು ಕರೆದುಕೊಂಡು ಹೋದರೂ ನನಗೆ ಯಾವುದೇ ದುಃಖ ಇರಲ್ಲ ಎಂದು ವ್ಯಕ್ತಿ, ಫೆಬ್ರವರಿ 4 ರಂದು ಗುಜರಾತ್ ಹೈಕೋರ್ಟ್ ತೀರ್ಪಿನ ಬಳಿಕ ಮಾತನಾಡಿದ್ದ.

ಪೊಲೀಸ್ ಕಾನ್‌ಸ್ಟೆಬಲ್ ಬಾಬುಭಾಯಿ ಪ್ರಜಾಪತಿ ಅವರನ್ನು ಅಹಮದಾಬಾದ್‌ನಲ್ಲಿ ನಿಯೋಜಿಸಲಾಗಿತ್ತು. ಆಗ 20 ರೂ. ಲಂಚ ಪಡೆದ ಆರೋಪ ಅವರ ಮೇಲಿತ್ತು. ಭ್ರಷ್ಟಾಚಾರ ತಡೆ ಕಾಯ್ದೆಯಡಿ ಅವರ ವಿರುದ್ಧ ಆರೋಪಗಳನ್ನು ಹೊರಿಸಲಾಗಿತ್ತು.

1997 ರಲ್ಲಿ ಸೆಷನ್ಸ್ ನ್ಯಾಯಾಲಯದಲ್ಲಿ ಅವರ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿತ್ತು. 2002 ರಲ್ಲಿ ಆರೋಪಗಳನ್ನು ರೂಪಿಸಲಾಯಿತು. ಸಾಕ್ಷಿಗಳ ವಿಚಾರಣೆ 2003 ರಲ್ಲಿ ಪ್ರಾರಂಭವಾಯಿತು. 2004 ರಲ್ಲಿ ಸೆಷನ್ಸ್ ನ್ಯಾಯಾಲಯವು ಪ್ರಜಾಪತಿಗೆ ನಾಲ್ಕು ವರ್ಷಗಳ ಜೈಲು ಶಿಕ್ಷೆ ಮತ್ತು 3,000 ರೂ. ದಂಡವನ್ನು ವಿಧಿಸಿತು.

ಪ್ರಜಾಪತಿ ಗುಜರಾತ್ ಹೈಕೋರ್ಟ್‌ನಲ್ಲಿ ಸೆಷನ್ಸ್ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿದರು. ನಂತರ, ಅವರ ಮೇಲ್ಮನವಿ 22 ವರ್ಷಗಳ ಕಾಲ ಬಾಕಿ ಇತ್ತು. ಈ ವರ್ಷ ಫೆಬ್ರವರಿ 4 ರಂದು ಅವರು ನಿರಪರಾಧಿ ಎಂದು ತೀರ್ಪು ಬಂದಿದೆ.

ಸಾಕ್ಷಿಗಳ ಹೇಳಿಕೆಗಳಲ್ಲಿ ಗಂಭೀರ ವಿರೋಧಾಭಾಸಗಳಿವೆ. ಆರೋಪಗಳನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ನ್ಯಾಯಾಲಯ ಹೇಳಿದೆ. ಪ್ರಜಾಪತಿ ಪರ ವಾದ ಮಂಡಿಸಿದ ವಕೀಲ ನಿತಿನ್ ಗಾಂಧಿ, ಇಡೀ ಪ್ರಕರಣವು ಅನುಮಾನದಿಂದ ಕೂಡಿದೆ ಎಂದು ವಾದಿಸಿದ್ದರು.

ತೀರ್ಪಿನ ನಂತರ, ಪ್ರಜಾಪತಿ ತನ್ನ ವಕೀಲರ ಕಚೇರಿಯಲ್ಲಿ ಹೃದಯಸ್ಪರ್ಶಿ, ಪ್ರವಾದಿಯ ಸಾಲುಗಳನ್ನು ಹೇಳಿದರು. ನಂತರ ಅವರು ಮನೆಗೆ ಮರಳಿದರು. ಮರುದಿನವೇ ಅವರು ನಿಧನರಾಗಿದ್ದಾರೆ.

ಕೊಲೆಗೆ ಪ್ರಾಯಶ್ಚಿತ: ಬಿಹಾರದಲ್ಲಿ ಬೆಂಗಳೂರು ಕುಟುಂಬದ ನಾಲ್ವರು ಆತ್ಮಹತ್ಯೆ

ಮೃತಪಟ್ಟವರು:

ಜಿ.ಆರ್. ಸುಮಂಗಲಾ (78) – ತಾಯಿ, ನಾಗಪ್ರಸಾದ್ (50) – ಮಗ (ಕೊಲೆ ಪ್ರಕರಣದ ಆರೋಪಿ), ಜಿ.ಆರ್. ಶಿಲ್ಪಾ (48)– ಸಹೋದರಿ (ಮೃತ ಅಮೋಘಕೀರ್ತಿಯ ತಾಯಿ), ಜಿ.ಆರ್. ಶ್ರುತಾ (43)– ಇನ್ನೊಬ್ಬ ಸಹೋದರಿ

ಬಿಹಾರ: ಕಳೆದ ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಬಾಲಕನ ಕೊಲೆ ಪ್ರಕರಣದ ಮುಂದುವರಿದ ಭಾಗವಾಗಿ, ಬಿಹಾರದ ರಾಜಗೀರ್‌ನಲ್ಲಿ ಇಂದು ಒಂದೇ ಕುಟುಂಬದ ನಾಲ್ವರು ಸದಸ್ಯರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

2025ರ ಆಗಸ್ಟ್‌ನಲ್ಲಿ, ಬೆಂಗಳೂರಿನ ಸೋಲದೇವನಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ವಾಸವಿದ್ದ ನಾಗಪ್ರಸಾದ್ ಅವರ ತಂಗಿ ಶಿಲ್ಪಾ ಅವರ ಮಗ ಅಮೋಘಕೀರ್ತಿ, 'ಫ್ರೀಫೈರ್' ಆನ್‌ಲೈನ್ ಗೇಮ್‌ಗೆ ತೀವ್ರವಾಗಿ ಅಡಿಕ್ಟ್ ಆಗಿದ್ದನು. ಗೇಮ್ ಆಡಲು ಹಣಕ್ಕಾಗಿ ಆತ ಮನೆಯವರನ್ನು ಪದೇ ಪದೇ ಪೀಡಿಸುತ್ತಿದ್ದ. ಈ ಗೇಮ್ ವ್ಯಸನ ಮತ್ತು ಮಗುವಿನ ವರ್ತನೆಯಿಂದ ಬೇಸತ್ತಿದ್ದ ಸೋದರಮಾವ ನಾಗಪ್ರಸಾದ್, ಕೋಪದಲ್ಲಿ ಅಮೋಘಕೀರ್ತಿಯನ್ನು ಕೊಲೆ ಮಾಡಿದ್ದರು. ಈ ಕೇಸಿನಲ್ಲಿ ನಾಗಪ್ರಸಾದ್ ಜೈಲುವಾಸವನ್ನೂ ಅನುಭವಿಸಿದ್ದರು.

ಮಗುವನ್ನ ಕೊಂದಿದ್ದರೂ, ಒಡಹುಟ್ಟಿದ ಅಣ್ಣನೆಂಬ ಕಾರಣಕ್ಕೆ ಶಿಲ್ಪಾ ನಾಗಪ್ರಸಾದ್ ಅವರಿಗೆ ಬೇಲ್ ಮೇಲೆ ಜೈಲಿನಿಂದ ಬಿಡಿಸಿಕೊಂಡು ಬಂದಿದ್ದರು. ಜೈಲಿನಿಂದ ಹೊರಬಂದ ಮೇಲೂ ನಾಗಪ್ರಸಾದ್ ಅವರಿಗೆ ತನ್ನ ಅಕ್ಕನ ಮಗನನ್ನು ಕೊಂದ ಪಾಪಪ್ರಜ್ಞೆ ಕಾಡುತ್ತಿತ್ತು. ಈ ಮಾನಸಿಕ ಒತ್ತಡ ಮತ್ತು ಅಪರಾಧ ಪ್ರಜ್ಞೆಯಿಂದ ಮುಕ್ತಿ ಪಡೆಯಲು ನಾಗಪ್ರಸಾದ್ ದೇಶದ ವಿವಿಧ ಪುಣ್ಯಕ್ಷೇತ್ರಗಳಿಗೆ ಪ್ರವಾಸ ಕೈಗೊಂಡಿದ್ದರು.


ಫೆಬ್ರವರಿ ಮೊದಲ ವಾರದಲ್ಲಿ ಬಿಹಾರದ ಪ್ರಸಿದ್ಧ ಪ್ರವಾಸಿ ತಾಣ ರಾಜಗೀರ್‌ಗೆ ಈ ಕುಟುಂಬ ಭೇಟಿ ನೀಡಿತ್ತು. ಅಲ್ಲಿನ ಧರ್ಮಶಾಲೆ ಯೊಂದರಲ್ಲಿ ತಂಗಿದ್ದ ಇವರು, ಶನಿವಾರ (ಫೆಬ್ರವರಿ 7, 2026) ಕೊಠಡಿಯಿಂದ ಹೊರಬಂದಿರಲಿಲ್ಲ. ಕೊಠಡಿಯಿಂದ ದುರ್ವಾಸನೆ ಬರುತ್ತಿದ್ದನ್ನು ಗಮನಿಸಿದ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಪೊಲೀಸರು ಬಾಗಿಲು ಒಡೆದು ನೋಡಿದಾಗ ಕುಟುಂಬದ ನಾಲ್ವರು ಸದಸ್ಯರು ಶವವಾಗಿ ಪತ್ತೆಯಾಗಿದ್ದಾರೆ.

ಗಂಗೋತ್ರಿಯಲ್ಲಿ ಮೂಲಸೌಕರ್ಯಗಳ ಕೊರತೆ; ವಿದ್ಯಾರ್ಥಿ ಸಮೂಹ ಅಳಲು



ಉದ್ಘಾಟನೆ ಭಾಗ್ಯ ಕಾಣದೆ ಪಾಳು ಬಿದ್ದಿರುವ ಗಂಗೋತ್ರಿ ಶೌಚಾಲಯ.



ಕಸದ ಕೊಂಪೆಯಾಗಿ ಬದಲಾಗಿರುವ ರೌಂಡ್ ಕ್ಯಾಂಟೀನ್ ನೋಟ.

ಮೈಸೂರು, ಫೆ.7(ವಿವಿಹೆಚ್)– ಶತಮಾನಗಳ ಇತಿಹಾಸವಿರುವ ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಆವರಣ ನಾನಾ ಸಮಸ್ಯೆಯಿಂದ ಕೂಡಿದೆ. ಕುಡಿಯುವ ನೀರು, ಶೌಚಾಲಯ, ರಸ್ತೆ, ವಿದ್ಯುತ್ ದೀಪ ಸೇರಿದಂತೆ ಮೂಲ ಸೌಕರ್ಯದಿಂದ ವಿದ್ಯಾರ್ಥಿ ಸಮೂಹ ವಂಚಿತವಾಗಿದೆ.

ಸಾರ್ವಜನಿಕರು, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗಂಗೋತ್ರಿಯ ಹಲವು ಭಾಗಗಳಲ್ಲಿ ಸಾಮೂಹಿಕ ಶೌಚಾಲಯ ನಿರ್ಮಿಸಲಾಗಿದ್ದು, ಎರಡು ವರ್ಷದ ಹಿಂದೆ ಕಟ್ಟಡ ಮಾತ್ರ ನಿರ್ಮಾಣವಾಗಿದೆ. ಈವರೆಗೆ ಈ ಶೌಚಾಲಯವನ್ನು ಉದ್ಘಾಟನೆ ಮಾಡಿಲ್ಲ. ಈ ಬಗ್ಗೆ ವಿವಿ ವಿದ್ಯಾರ್ಥಿಗಳು ಅಸಮಾಧಾನ ಹೊರಹಾಕಿದ್ದು, ಕೂಡಲೇ ಬಳಕೆಗೆ ಮುಕ್ತಗೊಳಿಸುವಂತೆ ಮೈಸೂರು ವಿವಿಯನ್ನು ಆಗ್ರಹಿಸಿದ್ದಾರೆ.

ಉದ್ಘಾಟನೆ ಕಾಣದ ಶೌಚಗೃಹ: ಮಾನಸಗಂಗೋತ್ರಿಯ ತೆರೆದ ಮೈದಾನದ ಬದಿಯಲ್ಲಿ ನಿರ್ಮಾಣವಾಗಿರುವ ಶೌಚಗೃಹ, ನಿರ್ಮಾಣವಾದಾಗಿನಿಂದ ಬಾಗಿಲು ಹಾಕಿದ್ದು, ಉದ್ಘಾಟಿಸುವ ಮನಸ್ಸು ಈವರೆಗೂ ಯಾರಿಗೂ ಬಂದಿಲ್ಲ. ಶೌಚಾಲಯದ ಮುಂದೆಲ್ಲಾ ಗಿಡಗಂಟಿಗಳು ಬೆಳೆದುಕೊಂಡಿದ್ದು, ತಿರುಗಾಡಲೂ ಕಷ್ಟಕರವಾದ ಸ್ಥಿತಿ ನಿರ್ಮಾಣವಾಗಿದೆ. ಅತೀ ಶೀಘ್ರದಲ್ಲಿ ಶೌಚಾಲಯವನ್ನು ವಿದ್ಯಾರ್ಥಿಗಳ ಬಳಕೆಗೆ ಮುಕ್ತಗೊಳಿಸುವ ಬಗ್ಗೆ ವಿವಿ ತ್ವರಿತ ಕ್ರಮಕ್ಕೆ ಮುಂದಾಗಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ರೌಂಡ್ ಕ್ಯಾಂಟೀನ್ ತೆರೆಯಿರಿ: ಗಂಗೋತ್ರಿ ಹೃದಯ ಭಾಗದಲ್ಲಿರುವ ಕ್ಯಾಂಟೀನ್ ಕೊರೊನಾ ಲಾಕ್‌ಡೌನ್ ಸಮಯದಲ್ಲಿ ಮುಚ್ಚಲಾಯಿತು. ಅಲ್ಲಿಂದ ಕ್ಯಾಂಟೀನ್ ತೆರೆಯದೇ ಅದರ ಬಹುತೇಕ ಭಾಗ ಕಸಮಯವಾಗಿದ್ದು, ಅದರ ಸ್ವಚ್ಛತೆಗೂ ಯಾರೂ ಗಮನಹರಿಸದೇ ಇರುವುದು ದುರಾದೃಷ್ಟಕರ. ಅದರ ಸುತ್ತ ಗಿಡಗಂಟಿಗಳು ಬೆಳೆದಿದ್ದು, ಗಂಗೋತ್ರಿಯ ಸೌಂದರ್ಯವನ್ನೇ ಹಾಳುಮಾಡುವಂತಿದೆ. ಸಂಬಂಧಪಟ್ಟ ಅಧಿಕಾರಿವರ್ಗ ಈ ಬಗ್ಗೆ ಗಮನಹರಿಸಿ ಕ್ಯಾಂಟೀನ್ ಸ್ವಚ್ಛಗೊಳಿಸುವಂತೆ ವಿದ್ಯಾರ್ಥಿಗಳು ಮನವಿ ಮಾಡಿದ್ದಾರೆ.


'ಮೈಸೂರು ಮಿತ್ರ'ನಿಗೆ ಮಾತನಾಡಿದ ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ನಟರಾಜು, ಪ್ಲಾಸ್ಟಿಕ್ ಮುಕ್ತ ವಲಯ ಇದಾಗಿದ್ದು, ಕ್ಯಾಂಟೀನ್ ದುರವಸ್ಥೆ ಅದರ ಸೌಂದರ್ಯಕ್ಕೆ ಧಕ್ಕೆ ತಂದಿದೆ. ಮತ್ತೊಂದೆಡೆ ರೌಂಡ್ ಕ್ಯಾಂಟೀನ್ ಸೇರಿದಂತೆ ಗಂಗೋತ್ರಿಯಲ್ಲಿ ಎರಡು ಮೂರು ಕಡೆಗಳಲ್ಲಿ ಸಾಮೂಹಿಕ ಶೌಚಾಲಯ ನಿರ್ಮಿಸಲಾಗಿದ್ದು, ಈವರೆಗೆ ಬಳಕೆಗೆ ಲಭ್ಯವಿಲ್ಲ. ಬಿಲ್‌ಗಳಿಗಾಗಿ ದುಂದು ವೆಚ್ಚ ಮಾಡಿ ಕಟ್ಟಗಳನ್ನು ನಿರ್ಮಿಸಿ ಅದರಿಂದ ಆದಾಯವನ್ನೇ ಪಡೆಯದೇ ಹೋದಲ್ಲಿ ವಿವಿಗೆ ನಷ್ಟವಾಗುತ್ತದೆ.

ಗುಣಮಟ್ಟದ ಶಿಕ್ಷಣ ಕೊಡುವ ಜೊತೆಗೆ ಉತ್ತಮ ವಾತಾವರಣವಿರುವ ಕ್ಯಾಂಪಸ್ ಕಲ್ಪಿಸುವುದು ವಿವಿಯ ಕೆಲಸ. ಉದ್ಘಾಟನೆ ಭಾಗ್ಯ ಕಾಣದ ಕಟ್ಟಡಗಳಿಗೆ ಟೆಂಡರ್ ಕರೆದು ಬಾಡಿಗೆಗೆ ನೀಡಬೇಕು. ನಿರ್ಮಾಣವಾಗಿರುವ ಎಲ್ಲಾ ಕಟ್ಟಡಗಳು ಬಳಕೆಗೆ ಮುಕ್ತವಾಗಬೇಕು. ಈ ಬಗ್ಗೆ ನಾಳೆ ನಡೆಯುವ ಸಿಂಡಿಕೇಟ್ ಸಭೆಯಲ್ಲಿ ಗಮನಸೆಳೆಯುವುದಾಗಿ ಅವರು ಹೇಳಿದರು.

ಮೈಸೂರು ವಿವಿ ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಕೃಷ್ಣಮೂರ್ತಿ ಗಣಿಗನೂರು ಮಾತನಾಡಿ, ವಿವಿಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲಕರವಾದ ವಾತಾವರಣ ಇಲ್ಲದಂತಾಗಿದೆ. ಅಗತ್ಯ ಮೂಲಸೌಕರ್ಯಗಳು ಕಾಣದಂತಾಗಿದ್ದು, ಪ್ರಮುಖವಾಗಿ ಕುಡಿಯುವ ನೀರಿನ ಲಭ್ಯತೆ ಹಾಗೂ ಶೌಚಾಲಯ ಬಹು ದೊಡ್ಡ ಸಮಸ್ಯೆಯಾಗಿದೆ. ವಿದ್ಯಾರ್ಥಿಗಳ ಬಳಕೆಗಾಗಿಯೇ ನಿರ್ಮಿಸಲಾಗಿರುವ ಈ ಶೌಚಾಲಯ, ಮುಂದಿನ ದಿನಗಳಲ್ಲಾದರೂ ವಿದ್ಯಾರ್ಥಿಗಳ ಬಳಕೆಗೆ ಲಭ್ಯವಾಗಬೇಕಿದೆ ಎಂದು ಬೇಸರ ಹೊರಹಾಕಿದ್ದಾರೆ.

> ವಿಶ್ವಮಟ್ಟದಲ್ಲಿ ಹೆಸರು ಮಾಡಿರುವ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನಿಷ್ಠ ಮೂಲ ಸೌಕರ್ಯಗಳಿರುವುದು ನಾಚಿಕೆಗೇಡಿನ ಸಂಗತಿ. ದೂರದ ಊರುಗಳಿಂದ ಪ್ರವೇಶಾತಿ ಪಡೆಯಲು ವಿದ್ಯಾರ್ಥಿಗಳು ವಿವಿಗೆ ಆಗಮಿಸುತ್ತಾರೆ. ಅವರಿಗಾಗಿ ಒಂದು ಸೂಕ್ತ ಶೌಚಾಲಯದ ವ್ಯವಸ್ಥೆಯಿಲ್ಲ. ವಿದ್ಯಾರ್ಥಿಗಳ ಜೊತೆ ಅವರ ಪೋಷಕರೂ ಬರುತ್ತಿದ್ದು, ಅವರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ವಿವಿ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಕಾಶ್ಮೀರ ಭಾರತದ ಅವಿಭಾಜ್ಯ ಅಂಗ: ಪಾಕ್‌ಗೆ 'ಶಾಕ್' ನೀಡಿದ ಅಮೆರಿಕಾ!



ನವದೆಹಲಿ: ಭಾರತ–ಅಮೆರಿಕ ನಡುವಣ ದ್ವಿಪಕ್ಷೀಯ ಮಧ್ಯಂತರ ವ್ಯಾಪಾರ ಒಪ್ಪಂದದ ಕುರಿತು ವಿಶ್ವದ ದೊಡ್ಡಣ್ಣ ಅಮೆರಿಕ ಬಿಡುಗಡೆ ಮಾಡಿರುವ ನಕ್ಷೆ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.

ವ್ಯಾಪಾರ ಒಪ್ಪಂದ ಸಂಬಂಧ 'ಯುನೈಟೆಡ್ ಸ್ಟೇಟ್ಸ್ ಆಫ್ ಟ್ರೇಡ್ ರೆಪ್ರೆಸೆಂಟೇಟಿವ್' ಬಿಡುಗಡೆ ಮಾಡಿರುವ ಭಾರತದ ಭೂಪಟದಲ್ಲಿ ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂದು ಬಿಂಬಿಸಿದೆ. ಈ ನಕ್ಷೆಯಲ್ಲಿ ಪಾಕ್ ಆಕ್ರಮಿತ ಕಾಶ್ಮೀರವನ್ನು ಭಾರತದ ಭಾಗವಾಗಿ ತೋರಿಸಲಾಗಿದೆ. ಆ ಮೂಲಕ ಪಾಕಿಸ್ತಾನಕ್ಕೆ ಸದ್ದಿಲ್ಲದೆ ತಿರುಗೇಟು ನೀಡಿದ್ದು, ಇದು ಭಾರತದ ರಾಜಕೀಯ ನಕ್ಷೆಗೆ ಅಮೆರಿಕದ ಸಮ್ಮತಿಯನ್ನು ಸೂಚಿಸುತ್ತದೆ ಎಂದು ಹೇಳಲಾಗುತ್ತಿದೆ.

ಇತ್ತೀಚೆಗೆ ಭಾರತ–ಯುಎಸ್ ಮಧ್ಯಂತರ ವ್ಯಾಪಾರ ಒಪ್ಪಂದವನ್ನು ಘೋಷಿಸಲಾಯಿತು. ಇದರೊಂದಿಗೆ, ಅಮೆರಿಕ ಭಾರತದ ಅಧಿಕೃತ ನಕ್ಷೆಯನ್ನು ಬಿಡುಗಡೆ ಮಾಡಿದ್ದು, ಅದು ಪ್ರಮುಖ ಸಂದೇಶ ನೀಡಿದೆ. ಈ ನಕ್ಷೆಯು ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ಸೇರಿದಂತೆ ಎಲ್ಲಾ ಜಮ್ಮು ಮತ್ತು ಕಾಶ್ಮೀರ ವನ್ನು ಭಾರತದ ಭಾಗವಾಗಿ ತೋರಿಸಿದೆ.

ಇತ್ತೀಚಿನ ವರ್ಷಗಳಲ್ಲಿ ವಿಶೇಷವಾಗಿಯೂ ಪಾಕ್ ಮೇಲೆ ಭಾರತದ 'ಆಪರೇಷನ್ ಸಿಂಧೂರ' ಮಿಲಿಟರಿ ಕಾರ್ಯಾಚರಣೆಯ ಬಳಿಕ ಅಮೆರಿಕದೊಂದಿಗೆ ಪಾಕಿಸ್ತಾನ ಉತ್ತಮ ಬಾಂಧವ್ಯ ಕಾಪಾಡಿಕೊಂಡಿತ್ತು.

ನಮ್ಮ ಮೆಟ್ರೋ ದರ ಏರಿಕೆ ಇಲ್ಲ



ಬೆಂಗಳೂರು,ಫೆ.7–ಪ್ರಯಾಣ ದರ ಏರಿಕೆ ಆತಂಕದಲ್ಲಿದ್ದ ನಮ್ಮ ಮೆಟ್ರೋ ಪ್ರಯಾಣಿಕರು ನಿರಾಳವಾಗುವಂತಹ ಸುದ್ದಿಯನ್ನು ಸಂಸದ ತೇಜಸ್ವಿ ಸೂರ್ಯ ನೀಡಿದ್ದಾರೆ. ಈ ಬಗ್ಗೆ ಎಕ್ಸ್ ಪೋಸ್ಟ್‌ನಲ್ಲಿ ಮಾಹಿತಿ ನೀಡಿರುವ ಸಂಸದ ತೇಜಸ್ವಿ ಸೂರ್ಯ, ಕೇಂದ್ರ ಗೃಹ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಕಟ್ಟರ್ ಅವರೊಂದಿಗೆ ವಿವರವಾದ ದೂರವಾಣಿ ಸಂಭಾಷಣೆ ನಡೆಸಿದ್ದೇನೆ ಎಂದರು.

ಸೋಮವಾರದಿಂದ ಏರಿಸಲು ಪ್ರಸ್ತಾಪಿಸಲಾದ ರಾಜ್ಯ ಸರ್ಕಾರದ ಅನ್ಯಾಯದ ಬೆಂಗಳೂರು ಮೆಟ್ರೋ ದರ ಏರಿಕೆಯ ವಿರುದ್ಧ ತಕ್ಷಣದ ಮಧ್ಯಪ್ರವೇಶವನ್ನು ಕೋರಿದ್ದೇನೆ. ಬೆಂಗಳೂರಿನಲ್ಲಿ ಈಗಾಗಲೇ ಭಾರತದಲ್ಲಿ ಅತ್ಯಂತ ದುಬಾರಿ ಮೆಟ್ರೋ ದರಗಳಿವೆ ಎಂದು ಗಮನಸೆಳೆದಿದ್ದೇನೆ. ಮತ್ತೊಂದು ಹೆಚ್ಚಳವು ಲಕ್ಷಾಂತರ ನಾಗರಿಕರಿಗೆ ಸಾರ್ವಜನಿಕ ಸಾರಿಗೆಯನ್ನು ತಲುಪಲು ಕಷ್ಟವಾಗುತ್ತದೆ, ಅದರ ಉದ್ದೇಶವನ್ನು ವಿಫಲ ಗೊಳಿಸುತ್ತದೆ. ಪ್ರಸ್ತಾವಿತ ಹೆಚ್ಚಳವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವಂತೆ ಕೇಂದ್ರ ಸಚಿವರು ಸೂಚನೆ ನೀಡಿದ್ದಾರೆ.

ಈ ಪ್ರಯಾಣ ದರ ಏರಿಕೆ ಸೋಮವಾರದಿಂದ ಜಾರಿಗೆ ಬರುವುದಿಲ್ಲ. FFC ಯಲ್ಲಿನ ವೈಪರೀತ್ಯಗಳ ವೈಯಕ್ತಿಕ ಪರಿಶೀಲನೆಯನ್ನು ಸಹ ಅವರು ಭರವಸೆ ನೀಡಿದ್ದಾರೆ ಮತ್ತು ರಾಜ್ಯ ಅದನ್ನು ಕೋರಿದರೆ ಹೊಸ ಸಮಿತಿ ಪರಿಗಣಿಸಬಹುದು ಎಂದು ಹೇಳಿದ್ದಾರೆ. ಅವರ ತ್ವರಿತ ಮತ್ತು ಸೂಕ್ಷ್ಮ ಪ್ರತಿಕ್ರಿಯೆಗೆ ಕೃತಜ್ಞರಾಗಿರುತ್ತೇನೆ ಎಂದು ತೇಜಸ್ವಿ ಸೂರ್ಯ ಹೇಳಿದ್ದಾರೆ. ಕೇಂದ್ರ ಸರ್ಕಾರ ಪ್ರಯಾಣಿಕರ ಕಲ್ಯಾಣಕ್ಕೆ ಆದ್ಯತೆ ನೀಡುತ್ತಿದೆ ಮತ್ತು ಕಾಂಗ್ರೆಸ್ ಸರ್ಕಾರದಿಂದ ಅವಿವೇಕದ ಏರಿಕೆಯನ್ನು ನಿಲ್ಲಿಸುತ್ತಿದೆ ಎಂಬುದಕ್ಕೆ ಇದು ಮತ್ತೊಂದು ಉದಾಹರಣೆಯಾಗಿದೆ. ಇದು ತಾತ್ಕಾಲಿಕ ಕ್ರಮವಾಗಿದ್ದು, ಪ್ರಯಾಣಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹೊಸ ಸಮಿತಿಯನ್ನು ಪರಿಗಣಿಸಲು ರಾಜ್ಯ ಸರ್ಕಾರವೇ ಪ್ರಸ್ತಾವನೆ ಸಲ್ಲಿಸಬೇಕು ಎಂದು ಸಂಸದರು ಹೇಳಿದ್ದಾರೆ.

ಬಿಎಂಆರ್‌ಸಿಎಲ್ ಮೇಲೆ ಒತ್ತಡ ಹಾಕಿ ಮೆಟ್ರೋ ದರ ಏರಿಕೆ ಮಾಡಿಸಿದ್ದೇ ರಾಜ್ಯ ಸರ್ಕಾರ

- ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪ
- ಸರ್ಕಾರ ದಿವಾಳಿಯಾಗಿದ್ದು, ತನ್ನ ಮೇಲಿನ ಹೊರೆ ಜನರ ಮೇಲೆ ಹೊರಿಸುತ್ತಿದೆ



ಬೆಂಗಳೂರು,ಫೆ.7(ಕೆಎಂಶಿ)–ಬೆಂಗಳೂರು ಮೆಟ್ರೋ ರೈಲು ನಿಗಮದ ಮೇಲೆ ಒತ್ತಡ ಹಾಕಿ, ಪ್ರಯಾಣ ದರ ಏರಿಕೆ ಮಾಡಿಸಿದ್ದೇ ರಾಜ್ಯಸರ್ಕಾರ, ಇದು ಹಗಲು ದರೋಡೆ, ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರ ಮೆಟ್ರೋ ಪ್ರಯಾಣ ದರ ಹೆಚ್ಚಳವನ್ನು ರಾಜ್ಯ ಸರ್ಕಾರ ಕೇಂದ್ರದ ಮೇಲೆ ಹೊರಿಸುವ ಯತ್ನ ಮಾಡುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ಮೆಟ್ರೋ ದರ ಏರಿಕೆ ಮೂಲಕ ರಾಜ್ಯ ಸರ್ಕಾರ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುತ್ತಿದೆ. ಕಳೆದ 10 ತಿಂಗಳಲ್ಲಿ ಎರಡು ಬಾರಿ ದರ ಏರಿಸಿರುವುದು ಖಂಡನೀಯ ಎಂದರು.

ಬಿಎಂಆರ್‌ಸಿಎಲ್ ಮೇಲೆ 13 ಕೋಟಿ ರೂ.ಗೂ ಹೆಚ್ಚು ಸಾಲವಿದ್ದು, ಮರು ಪಾವತಿ ಹಾಗೂ ಕಾರ್ಯಾಚರಣೆಗೆ ವೆಚ್ಚ ಕೊಡಬೇಕಿದೆ. ಟಿಕೆಟ್ ಮತ್ತು ಟಿಕೆಟ್‌ಯೇತರ ಮೂಲಗಳಿಂದ ಬರುವ ಆದಾಯ ಸಾಕಾಗುತ್ತಿಲ್ಲ. ರಾಜ್ಯ ಸರ್ಕಾರ ಮೆಟ್ರೋ ಸಂಸ್ಥೆಗೆ ಹಣ ನೀಡಲು ಆಗುತ್ತಿಲ್ಲ. ಅದಕ್ಕಾಗಿಯೇ ಜನರಿಂದ ವಸೂಲಿಗೆ ಇಳಿದಿದೆ. ಪ್ರತಿ ವರ್ಷ ಸ್ವಯಂ ಆಗಿ ಮೆಟ್ರೋ ಪ್ರಯಾಣ ದರ ಏರಿಕೆ ಸೂತ್ರ ರೂಪಿಸುವಂತೆ ದರ ನಿಗದಿ ಸಮಿತಿಯನ್ನು ರಾಜ್ಯ ಸರ್ಕಾರ ಕೋರಿದೆ. ದೆಹಲಿ, ಮುಂಬೈ, ಹೈದರಾಬಾದ್ ಹಾಗೂ ಚೆನ್ನೈ ನಗರ ಗಳಿಗಿಂತ ಬೆಂಗಳೂರು ನಮ್ಮ ಮೆಟ್ರೋ ಪ್ರಯಾಣದರ ದುಬಾರಿಯಾಗಿದೆ. ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದ್ದು, ತನ್ನ ಮೇಲಿನ ಹೊರೆಯನ್ನು ಜನರ ಮೇಲೆ ಹೊರಿಸುತ್ತಿದೆ. ದರ ನಿಗದಿ ಸಮಿತಿಯ ವರದಿಯನ್ನು ಸಾರ್ವಜನಿಕರ ಮಾಹಿತಿಗೆ ನೀಡಿರಲಿಲ್ಲ. ವರದಿಯಲ್ಲಿ ನಗರಾಭಿವೃದ್ಧಿ, ಹಣಕಾಸು ಇಲಾಖೆ ಅಧಿಕಾರಿಗಳೇ ರಾಜ್ಯ ಸರ್ಕಾರ ಆರ್ಥಿಕ ಹೊರೆ ಭರಿಸುವ ಸ್ಥಿತಿಯಲ್ಲಿ ಇಲ್ಲ. ಮೆಟ್ರೋ ಪ್ರಯಾಣದ ದರ ಹೆಚ್ಚಳ ಮಾಡಬೇಕು ಎಂಬುದಾಗಿ ಪ್ರಸ್ತಾಪಿಸಿದ್ದಾರೆ. ಪ್ರಯಾಣ ದರ ಪರಿಷ್ಕರಣೆಗೆ ಸಂಬಂಧಿಸಿದಂತೆ 1126 ಮಂದಿ ಅಭಿಪ್ರಾಯ ವ್ಯಕ್ತಪಡಿಸಿದ್ದು, ಶೇ.51ರಷ್ಟು ಮಂದಿ ಮೆಟ್ರೋ ಪ್ರಯಾಣದರ ಏರಿಕೆ ವಿರೋಧಿಸಿದ್ದಾರೆ ಎಂದರು.

ಪಾರ್ಕಿಂಗ್, ಬಾಡಿಗೆ, ಜಾಹೀರಾತು ಮೂಲಕ ಸಂಗ್ರಹಿಸುವ ಆದಾಯ ಕಡಿಮೆ ಇದ್ದು, ಪ್ರಯಾಣಿಕರಿಂದ ಸಂಗ್ರಹಿಸುವ ಆದಾಯ ಹೆಚ್ಚಳವಾಗಿದೆ. ಆರ್ಥಿಕ ನೆರವನ್ನು (ಶ್ಯಾಡೋ ಕಾಸ್ಟ್ ಸಪೋರ್ಟ್) ಕಳೆದ ಎರಡು ವರ್ಷದಿಂದ ರಾಜ್ಯಸರ್ಕಾರ ನಿಲ್ಲಿಸಿದೆ. ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲದ ಕಾರಣ ಎಸ್‌ಸಿಎಸ್ ಮುಂದುವರೆಸಲಾಗದೆ, ವಾರ್ಷಿಕ ಶೇ.5ರಷ್ಟು ಪ್ರಯಾಣದರ ಹೆಚ್ಚಳಕ್ಕೆ ಕೋರಲಾಗಿದೆ.

ಕಳೆದ ವರ್ಷ ಶೇ.105ರಷ್ಟು ಮೆಟ್ರೋ ಪ್ರಯಾಣ ದರ ಪರಿಷ್ಕರಣೆ ಮಾಡಲಾಗಿತ್ತು. ಅಧಿಕಾರಿಗಳ ಮಾಹಿತಿ ಗಮನಿಸಿದರೆ, ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ. ತನ್ನ ಲೋಪ ಮುಚ್ಚಿಕೊಳ್ಳಲು ಜನರ ದಾರಿತಪ್ಪಿಸುತ್ತಿದೆ ಎಂದರು.

ಎಫ್‌ಎಫ್‌ಸಿ ಸಭೆಗಳಲ್ಲಿ ಭಾಗವಹಿಸಿದ್ದ ರಾಜ್ಯ ಸರ್ಕಾರದ ಪ್ರತಿನಿಧಿ ಗಳು ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು, ಇನ್ನು ಮುಂದೆ ಮೆಟ್ರೋಗೆ ಸಬ್ಸಿಡಿ ನೀಡಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಆರ್ಥಿಕ ಹೊರೆಯನ್ನು ಜನರ ಮೇಲೆ ಹಾಕಲು ಪ್ರತಿವರ್ಷ ಮೆಟ್ರೋ ಪ್ರಯಾಣದರ ಏರಿಕೆ ಮಾಡುವಂತೆ ಪಟ್ಟು ಹಿಡಿದಿರುವುದು ವರದಿಯಲ್ಲಿ ಸಾಕ್ಷ್ಯಸಮೇತ ದಾಖಲಾಗಿದೆ ಎಂದು ಹೇಳಿದ್ದಾರೆ.

ಮುಸ್ಲಿಂ ಸಮುದಾಯದ ದೇಶ ಪ್ರೇಮ ಅನುಮಾನಿಸುವ ಬಿಜೆಪಿ, ಆರ್‌ಎಸ್‌ಎಸ್ ಬಹಿರಂಗ ಚರ್ಚೆಗೆ ಬನ್ನಿ...!

- ಜಾಗೃತ ಕರ್ನಾಟಕ ಸಂಘಟನೆ ಮುಖಂಡ ಸುಹೇಲ್ ಅಹಮದ್ ಸವಾಲು
- ಫೆ.17ರಂದು ಬೆಂಗಳೂರು ಇಲ್ಲವೇ ಮೈಸೂರಲ್ಲಿ ಚರ್ಚೆಗೆ ಬರುವಂತೆ ಆಹ್ವಾನ
- ಮುಸ್ಲಿಂ ಸಮುದಾಯದ ದೇಶ ಪ್ರೇಮ ಅನುಮಾನಿಸುವಂತೆ ಸಂದೇಶ ನೀಡಿರುವುದಕ್ಕೆ ಖಂಡನೆ



ಸುದ್ದಿ ಗೋಷ್ಠಿಯಲ್ಲಿ ಸುಹೇಲ್ ಅಹಮದ್ ಮಾತನಾಡಿದರು

ಮೈಸೂರು,ಫೆ.7(ಎಂಟಿವೈ)– ಪದೇ ಪದೆ ಮುಸ್ಲಿಂ ಸಮುದಾಯದ ದೇಶ ಪ್ರೇಮವನ್ನು ಅನುಮಾನಿಸುತ್ತಿರುವ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಸಂಘಟನೆ ಪಾತ್ರದ ಬಗ್ಗೆ ಸಾಬೀತು ಪಡಿಸಲು ಫೆ.17ರಂದು ಮೈಸೂರು ಅಥವಾ ಬೆಂಗಳೂರಲ್ಲಿ ಬಹಿರಂಗ ಚರ್ಚೆಗೆ ಬರುವಂತೆ ಜಾಗೃತ ಕರ್ನಾಟಕ ಸಂಘಟನೆಯ ಮುಖಂಡ ಹಾಗೂ ನಿವೃತ್ತ ಡಿವೈಎಸ್ಪಿ ಸುಹೇಲ್ ಅಹಮದ್ ಸವಾಲು ಹಾಕಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಂತಿ, ಸೌಹಾರ್ದತೆಗೆ ಹೆಸರಾದ ಕರ್ನಾಟಕದಲ್ಲಿ ಶಾಂತಿ ಕದಡುವ, ಕೋಮುಸೌಹಾರ್ದತೆಗೆ ಧಕ್ಕೆ ತರುವ ನಿಟ್ಟಿನಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ಹೇಳಿಕೆ ನೀಡುತ್ತಲೇ ಸಂಘರ್ಷಕ್ಕೆ ಪ್ರಚೋದಿಸುತ್ತಾ ಬಂದಿದ್ದಾರೆ. ಅಲ್ಲದೇ ಪದೇ ಪದೇ ಪಾಕಿಸ್ತಾನದ ಜಪ ಮಾಡುತ್ತಾ ಮುಸ್ಲಿಂ ಸಮುದಾಯದ ದೇಶ ಪ್ರೇಮವನ್ನು ಅನುಮಾನಿಸುತ್ತಾ ಸಮಾಜಕ್ಕೆ ತಪ್ಪು ಸಂದೇಶ ರವಾನಿಸುತ್ತಿದ್ದಾರೆ. ಅಲ್ಲದೆ, ಅಲ್ಪಸಂಖ್ಯಾತ ಸಮುದಾಯದ ಶಾಸಕ ನಜೀರ್ ಅಹಮದ್ ಅವರ ವಿರುದ್ಧ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅಸಂಬದ್ಧ ಹೇಳಿಕೆ ನೀಡಿ ಅಪಮಾನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಜಾಗೃತ ಕರ್ನಾಟಕ ಸಂಘಟನೆ ವತಿಯಿಂದ ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಇರುವ ದೇಶ ಪ್ರೇಮ ಸಾಬೀತು ಮಾಡಲು ಬಹಿರಂಗ ಚರ್ಚೆಗೆ ಆಹ್ವಾನಿಸುತ್ತಿರುವುದಾಗಿ ತಿಳಿಸಿದರು.

ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತರು, ಸಿಖ್, ಪಾರ್ಸಿ ಸೇರಿದಂತೆ ಎಲ್ಲಾ ಸಮುದಾಯಗಳ ಜನ ನಿಸ್ವಾರ್ಥವಾಗಿ ಹೋರಾಟ ಮಾಡಿ, ಜೀವ ಬಲಿ ಕೊಟ್ಟಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಮುಸ್ಲಿಂ ಸಮುದಾಯವೂ ಪಾಲ್ಗೊಂಡು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದೆ. ದೆಹಲಿಯಲ್ಲಿರುವ ಇಂಡಿಯಾ ಗೇಟ್ ಗೋಡೆಗಳ ಮೇಲೆ ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದ 60 ಸಾವಿರಕ್ಕೂ ಹೆಚ್ಚು ಹೋರಾಟಗಾರರ ಹೆಸರನ್ನು ಕೆತ್ತಲಾಗಿದೆ. ಅದರಲ್ಲಿ 30 ಸಾವಿರದಷ್ಟು ಮುಸ್ಲಿಂ ಸಮುದಾಯವರ ಹೆಸರು ಸೇರಿದೆ. ಇದನ್ನು ಸಿ.ಟಿ.ರವಿ ಸೇರಿದಂತೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ಅರಿತುಕೊಳ್ಳಬೇಕು ಎಂದರು.

ನಿಜವಾದ ದೇಶ ಪ್ರೇಮ ಯಾರಲ್ಲಿದೆ ಎಂದು ಚರ್ಚಿಸಲು ಜಾಗೃತ ಕರ್ನಾಟಕ ವೇದಿಕೆ ಚರ್ಚೆಗೆ ಸಿದ್ಧವಾಗಿದೆ. ಈ ಚರ್ಚೆಯಲ್ಲಿ ಬಿಜೆಪಿ ನಾಯಕರು, ಆರ್‌ಎಸ್‌ಎಸ್ ನಾಯಕರು ಬಂದು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡ ಕನಿಷ್ಠ 10 ಮಂದಿ ಬಿಜೆಪಿ, ಆರ್‌ಎಸ್‌ಎಸ್ ನಾಯಕರ ಹೆಸರೇಳಬೇಕು. ಅದೇ ವೇಳೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ ಮೃತಪಟ್ಟ ಮುಸ್ಲಿಂ ನಾಯಕರ ಹೆಸರು, ಸ್ವಾತಂತ್ರ್ಯ ಹೋರಾಟದಲ್ಲಿ ಮುಸ್ಲಿಂ ಸಮುದಾಯದ ಪಾತ್ರ ಕುರಿತಂತೆ ಮಾಹಿತಿ ನೀಡುತ್ತೇವೆ ಎಂದರು.

ಮುಸ್ಲಿಂ ಸಮುದಾಯವನ್ನು ಟೀಕಿಸುತ್ತಿರುವ ಬಿಜೆಪಿ ನಾಯಕರ ಮಕ್ಕಳು ಪಾಕಿಸ್ತಾನದೊಂದಿಗೆ ವಹಿವಾಟು ನಡೆಸುತ್ತಿದ್ದಾರೆ. ಕೆಲವರು ದೇಶದ ಪೌರತ್ವವನ್ನು ತ್ಯಜಿಸಿದ್ದಾರೆ. ಈ ಹಿಂದೆ ಮಹಮದ್ ಜಿನ್ನಾ ಅವರನ್ನು ಲಾಲ್ ಕೃಷ್ಣ ಅಡ್ವಾಣಿ ಹೊಗಳಿದ್ದರು. ಪ್ರಧಾನಿ ಮೋದಿ ಕರೆಯದೇ ಇದ್ದರೂ ಪಾಕಿಸ್ತಾನದ ಅಂದಿನ ಪ್ರಧಾನಿ ನವಾಜ್ ಷರೀಫ್ ಅವರ ಮಗಳ ಮದುವೆಗೆ ಹೋಗಿ ಬಿರಿಯಾನಿ ತಿಂದು ಬಂದಿದ್ದರು. ದೇಶದ ಭದ್ರತಾ ಸಲಹೆಗಾರರಾದ ಅಜಿತ್ ಧೋವಲ್ ಅವರ ಪುತ್ರ, ಬಿಜೆಪಿ ಮುಖಂಡರಾದ ಜಯಶಂಕರ್, ಪಿಯೂಷ್ ಗೋಯಲ್ ಅವರ ಪುತ್ರರು ಭಾರತದ ಪೌರತ್ವ ತ್ಯಜಿಸಿದ್ದಾರೆ. ಬಿಜೆಪಿ ನಾಯಕರ ಮಕ್ಕಳಿಗೆ ಭಾರತ ಬೇಡವಾಗಿದೆ ಎನ್ನಿಸುತ್ತದೆ. ಆದರೂ, ಮುಸ್ಲಿಂ ಸಮುದಾಯದ ಮೇಲೆ ದೇಶ ಪ್ರೇಮದ ವಿಚಾರದಲ್ಲಿ ಅನುಮಾನ ವ್ಯಕ್ತಪಡಿಸುತ್ತಲೇ ಇರುವುದು ಖಂಡನೀಯ ಎಂದು ಕಿಡಿಕಾರಿದರು. ಗೋಷ್ಠಿಯಲ್ಲಿ ಜಾಗೃತ ಕರ್ನಾಟಕ ವೇದಿಕೆಯ ಡಾ.ಮಧು, ಜಿ.ಕೆ.ಮೋಹನ್, ಅಸಾದುಲ್ಲಾ, ವಾಜಿದ್ ಇದ್ದರು.

ನಾಳೆಯಿಂದ 39ನೇ ಅಂತರ ವಿವಿ ನೈರುತ್ಯ ವಲಯ ಯುವ ಉತ್ಸವ

ಮೈಸೂರು,ಫೆ.7(ಎಂಟಿವೈ)– ಮೈಸೂರಿನ ಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ(ಎಹೆಚ್‌ಇಆರ್) ಸಭಾಂಗಣದಲ್ಲಿ ಫೆ.9ರಿಂದ 13ರವರೆಗೆ '39ನೇ ಅಂತರ ವಿಶ್ವವಿದ್ಯಾನಿಲಯದ ನೈರುತ್ಯ ವಲಯ ಯುವ ಉತ್ಸವ' ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್–ಎಹೆಚ್‌ಇಆರ್ ಕುಲಪತಿ ಡಾ.ಹೆಚ್.ಬಸವನಗೌಡಪ್ಪ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಫೆ.9ರಂದು ಬೆಳಗ್ಗೆ 11ಕ್ಕೆ ನೈರುತ್ಯ ವಲಯ ಯುವ ಉತ್ಸವ' ಆರಂಭವಾಗಲಿದ್ದು, ಭಾರತೀಯ ಚಿತ್ರರಂಗ, ರಂಗಭೂಮಿ ಹಿರಿಯ ನಟ ಕೆ.ಸುಚೇಂದ್ರ ಪ್ರಸಾದ್ ಮುಖ್ಯ ಅತಿಥಿಯಾಗಿರಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸಿಇಓ ಡಾ.ಸಿ.ಜಿ. ಬೆಟಸೂರಮಠ ವಹಿಸಲಿದ್ದಾರೆ. ಸಮ ಕುಲಾಧಿಪತಿ ಡಾ.ಬಿ. ಸುರೇಶ್, ಕುಲಪತಿ ಡಾ.ಹೆಚ್.ಬಸವನಗೌಡಪ್ಪ, ಉತ್ತರ ಪ್ರದೇಶದ ಸುಭಾರ್ತಿ ವಿಶ್ವವಿದ್ಯಾಲಯದ ಲಲಿತಕಲೆ ವಿಭಾಗದ ಮುಖ್ಯಸ್ಥರಾದ ಪ್ರೊ. ಭಾವನಾ ಗ್ರೋವರ್, ಬನಾರಸ್ ಹಿಂದೂ ವಿಶ್ವವಿದ್ಯಾಲಯ, ಉತ್ತರ ಪ್ರದೇಶದ ಸಹ ಪ್ರಾಧ್ಯಾಪಕರಾದ ಡಾ. ಬಾಲ ಲಕ್ಷೇಂದ್ರ, ಜೆಎಸ್‌ಎಸ್ ಎಹೆಚ್‌ಇಆರ್‌ನ ಕುಲಸಚಿವ ಡಾ.ಬಿ.ಮಂಜುನಾಥ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಈ ಯುವೋತ್ಸವದಲ್ಲಿ ಕರ್ನಾಟಕದ 18, ಮಹಾರಾಷ್ಟ್ರದ 13 ಹಾಗೂ ಗೋವಾದ 2 ವಿವಿ ಸೇರಿದಂತೆ ಒಟ್ಟು 33 ವಿಶ್ವವಿದ್ಯಾನಿಲಯಗಳ 1500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು ತಮ್ಮ ಪ್ರತಿಭೆ ಪ್ರದರ್ಶಿಸಲಿದ್ದಾರೆ. ವಿಜೇತರಾದವರು ಮುಂದಿನ ಹಂತದ ಸ್ಪರ್ಧೆಗಳಿಗೆ ಆಯ್ಕೆಯಾಗಲಿದ್ದಾರೆಂದರು. ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಡಾ.ಬಿ.ಮಂಜುನಾಥ್, ಡೀನ್ ಡಾ.ವಿಶಾಲ್‌ಕುಮಾರ್ ಗುಪ್ತ ಇದ್ದರು.

ಫೆ.12ರಿಂದ 14ರವರೆಗೆ ವಸ್ತು ಪ್ರದರ್ಶನ

ಮೈಸೂರು,ಫೆ.7–ಭಾರತ ಸರ್ಕಾರದ ಎಂಎಸ್‌ಎಂಇ–ಡಿಎಫ್‌ಓ ಕಚೇರಿ ವತಿಯಿಂದ ಪ್ರಧಾನ ಮಂತ್ರಿಗಳ ವಿಶ್ವಕರ್ಮ ಯೋಜನೆಯಡಿ ಫೆ.12ರಿಂದ 14ರವರೆಗೆ ಮೈಸೂರು ನಂಜರಾಜ ಬಹದ್ದೂರ್ ಛತ್ರದಲ್ಲಿ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗುತ್ತದೆ.

ಸದರಿ ವಸ್ತು ಪ್ರದರ್ಶನದಲ್ಲಿ ಪ್ರಧಾನ ಮಂತ್ರಿಗಳ ವಿಶ್ವಕರ್ಮ ಯೋಜನೆಯಡಿ ನೋಂದಾಯಿತವಾಗಿರುವ ಕುಶಲ ಕರ್ಮಿಗಳು ಮಾತ್ರ ಭಾಗವಹಿಸಿ, ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಬಹುದಾಗಿದೆ. ಆಸಕ್ತಿಯುಳ್ಳ ಕುಶಲಕರ್ಮಿಗಳು ನಿಗದಿತ ನಮೂನೆಯಲ್ಲಿ ಉತ್ಪನ್ನಗಳ ಭಾವಚಿತ್ರದೊಂದಿಗೆ ಅರ್ಜಿಯನ್ನು ಜಿಲ್ಲಾ ಕೈಗಾರಿಕಾ ಕೇಂದ್ರ ಕಚೇರಿಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜಿಲ್ಲಾ ಕೈಗಾರಿಕಾ ಕೇಂದ್ರ ಕಚೇರಿಯ ದೂ.ಸಂ: 08212449810 ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಪತ್ರಿಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶ - ವಿದೇಶ

ಸಮುದ್ರದಲ್ಲಿ ಅಕ್ರಮವಾಗಿ ತೈಲ ಮಾರಾಟ ಮಾಡುತ್ತಿದ್ದ ಹಡಗುಗಳು ವಶಕ್ಕೆ



ನವದೆಹಲಿ: ಭಾರತೀಯ ಕರಾವಳಿ ರಕ್ಷಣಾ ಪಡೆ ಮತ್ತು ಸಮುದ್ರ ಮತ್ತು ವೈಮಾನಿಕ ಕಣ್ಗಾವಲು ಒಳಗೊಂಡ ಜಂಟಿ ಕಾರ್ಯಾಚರಣೆಯು ಪ್ರಮುಖ ಅಂತರರಾಷ್ಟ್ರೀಯ ತೈಲ ಕಳ್ಳಸಾಗಣೆ ದಂಧೆಯನ್ನು ಭೇದಿಸಿದೆ. ಕಾರ್ಯಾಚರಣೆಯಲ್ಲಿ ಕರಾವಳಿ ರಕ್ಷಣಾ ಪಡೆ ಮುಂಬೈ ಬಳಿಯ ನೀರಿನಲ್ಲಿ ಅಕ್ರಮವಾಗಿ ತೈಲ ಕಳ್ಳಸಾಗಣೆ ಮಾಡುತ್ತಿದ್ದ ಮೂರು ಹಡಗುಗಳನ್ನು ವಶಪಡಿಸಿಕೊಂಡಿದೆ.

ಯುದ್ಧಪೀಡಿತ ದೇಶಗಳಿಂದ ಈ ಗ್ಯಾಂಗ್ ದೊಡ್ಡ ಪ್ರಮಾಣದಲ್ಲಿ ಅಗ್ಗದ ತೈಲ ಖರೀದಿಸಿ ಅಂತರರಾಷ್ಟ್ರೀಯ ನೀರಿನ ಮೂಲಕ ಸಾಗರದ ಮಧ್ಯದಲ್ಲಿರುವ ಇತರ ಮೋಟಾರ್ ಟ್ಯಾಂಕರ್‌ಗಳಿಗೆ ವರ್ಗಾಯಿಸುವ ಮೂಲಕ ಗಣನೀಯ ಲಾಭವನ್ನು ಗಳಿಸುತ್ತಿದ್ದರು. ಈ ಸಂಪೂರ್ಣ ಜಾಲವನ್ನು ವಿವಿಧ ದೇಶಗಳಲ್ಲಿರುವ ಹ್ಯಾಂಡ್ಲರ್‌ಗಳು ನಡೆಸುತ್ತಿದ್ದರು. ಅವರು ತೈಲ ಮಾರಾಟ ಮತ್ತು ವರ್ಗಾವಣೆ ನಿರ್ವಹಿಸುತ್ತಿದ್ದರು. ಕರಾವಳಿ ರಕ್ಷಣಾ ಪಡೆಯ ತಂತ್ರಜ್ಞಾನ–ಸಕ್ರಿಯಗೊಳಿಸಿದ ವ್ಯವಸ್ಥೆಗಳು ಭಾರತೀಯ ವಿಶೇಷ ಆರ್ಥಿಕ ವಲಯದಲ್ಲಿ ಮೋಟಾರ್ ಟ್ಯಾಂಕರ್‌ನ ಅನುಮಾನಾಸ್ಪದ ಚಟುವಟಿಕೆಯನ್ನು ಪತ್ತೆಹಚ್ಚಿದವು. ಡಿಜಿಟಲ್ ತನಿಖೆಯಲ್ಲಿ ಇತರ ಎರಡು ಹಡಗುಗಳು ಹಡಗಿನ ಸಮೀಪಕ್ಕೆ ಬರುತ್ತಿದ್ದು, ತೈಲ ಸಂಬಂಧಿತ ಸರಕುಗಳ ಅಕ್ರಮ ವರ್ಗಾವಣೆಯಲ್ಲಿ ಭಾಗಿಯಾಗಿರಬಹುದು ಎಂದು ತಿಳಿದುಬಂದಿದೆ.

ಭಾರತೀಯ ಸರಕುಗಳ ಮೇಲಿನ ಹೆಚ್ಚುವರಿ ಶೇ.25 ಸುಂಕ ರದ್ದು



ವಾಷಿಂಗ್ಟನ್: ಭಾರತವು ರಷ್ಯಾದ ತೈಲವನ್ನು ನೇರವಾಗಿ ಅಥವಾ ಪರೋಕ್ಷವಾಗಿ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಲು ಬದ್ಧವಾಗಿದೆ ಎಂದು ಅಮೆರಿಕ ಶನಿವಾರ ಹೇಳಿದೆ. ಈ ಕುರಿತು ಜಂಟಿ ಹೇಳಿಕೆ ಹೊರಡಿಸಿದ ಬೆನ್ನಲ್ಲೇ ಇಂದು ಫೆ.7ರಿಂದ ಭಾರತೀಯ ಸರಕುಗಳ ಮೇಲೆ ಅಮೆರಿಕ ವಿಧಿಸಿರುವ ಹೆಚ್ಚುವರಿ ಶೇ.25ರಷ್ಟು ಸುಂಕವನ್ನು ತೆಗೆದು ಹಾಕಲಾಗುತ್ತದೆ. ಶ್ವೇತಭವನ ಹೊರಡಿಸಿದ ಕಾರ್ಯನಿರ್ವಾಹಕ ಆದೇಶದ ಪ್ರಕಾರ, ಮುಂದಿನ 10 ವರ್ಷಗಳಲ್ಲಿ ರಕ್ಷಣಾ ಸಹಕಾರವನ್ನು ವಿಸ್ತರಿಸಲು ಅಮೆರಿಕದೊಂದಿಗೆ ಒಂದು ಚೌಕಟ್ಟಿಗೆ ಭಾರತ ಬದ್ಧವಾಗಿದೆ. ಫೆ.7ರಂದು ಪೂರ್ವ ಪ್ರಮಾಣಿತ ಸಮಯ 12.01ಕ್ಕೆ ನಂತರ ಬಳಕೆಗಾಗಿ ಪ್ರವೇಶಿಸಿದ ಅಥವಾ ಬಳಕೆಗಾಗಿ ಗೋದಾಮಿನಿಂದ ಹಿಂತೆಗೆದುಕೊಳ್ಳಲಾದ ಸರಕುಗಳಿಗೆ ಸಂಬಂಧಿಸಿದಂತೆ ಇದು ಅನ್ವಯವಾಗಿ ಜಾರಿಗೆ ಬರುತ್ತದೆ. ಅಮೆರಿಕಕ್ಕೆ ಆಮದು ಮಾಡಿಕೊಳ್ಳುವ ಭಾರತದ ಉತ್ಪನ್ನಗಳು ಇನ್ನು ಮುಂದೆ ಕಾರ್ಯನಿರ್ವಾಹಕ ಆದೇಶ 14329ರ ಪ್ರಕಾರ ವಿಧಿಸಲಾದ 25 ಶೇ. ಹೆಚ್ಚುವರಿ ಜಾಹೀರಾತು ಮೌಲ್ಯದ ಸುಂಕ ದರಕ್ಕೆ ಒಳಪಟ್ಟಿರುವುದಿಲ್ಲ ಎಂದು ಅದು ಹೇಳಿದೆ. ಕಳೆದ ವರ್ಷ ಆಗಸ್ಟ್‌ನಲ್ಲಿ ಅಮೆರಿಕವು ರಷ್ಯಾದ ಕಚ್ಚಾ ತೈಲ ಖರೀದಿಯ ಮೇಲೆ ಭಾರತದಿಂದ ಸರಕುಗಳ ಮೇಲೆ 25 ಪ್ರತಿಶತ ಪರಸ್ಪರ ಸುಂಕ ಮತ್ತು ಹೆಚ್ಚುವರಿ ಶೇ.25ರಷ್ಟು ಸುಂಕ ವಿಧಿಸಿತ್ತು.

ಭಾರತದಲ್ಲಿ ವಾಸಿಸುವವರೆಲ್ಲರೂ ಹಿಂದೂಗಳೇ: ಮೋಹನ್ ಭಾಗವತ್ ಸಮರ್ಥನೆ

ಮುಂಬೈ: 'ಹಿಂದೂ' ಎಂಬ ಪದವು ನಾಮಪದವಲ್ಲ, ಅದು ವಿಶೇಷಣ. ಭಾರತದಲ್ಲಿ ವಾಸಿಸುವವರೆಲ್ಲರೂ ಹಿಂದೂಗಳೇ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಹೇಳಿದ್ದಾರೆ.

ಆರ್‌ಎಸ್‌ಎಸ್‌ನ ಶತಮಾನೋತ್ಸವ ಅಂಗವಾಗಿ ಶನಿವಾರ ಇಲ್ಲಿ ಆಯೋಜಿಸಿದ್ದ 'ಸಂಘದ 100 ವರ್ಷಗಳ ಪಯಣ ಮತ್ತು ಹೊಸ ದಿಗಂತಗಳು' ಕಾರ್ಯಕ್ರಮದಲ್ಲಿ ಅವರು ಮಾತನಾಡಿದ್ದಾರೆ.

'ಧರ್ಮನಿರಪೇಕ್ಷತೆ' ಎಂಬುದು ತಪ್ಪು ಪದ. 'ಪಂಥನಿರಪೇಕ್ಷತೆ' ಎಂಬುದು ಸರಿಯಾದ ಪದ ಎಂದು ಅವರು ಗಮನ ಸೆಳೆದಿದ್ದಾರೆ.

'ಆರ್‌ಎಸ್‌ಎಸ್ ಬೇರೆ ಯಾವುದೇ ಸಂಘಟನೆಯೊಂದಿಗೆ ಸ್ಪರ್ಧಿಯೊಡ್ಡಲು ಹೊರಹೊಮ್ಮಿಲ್ಲ. ಯಾವುದೇ ಸಂಘಟನೆಗೆ ಪ್ರತಿಕ್ರಿಯೆಯಾಗಿ ಅಥವಾ ವಿರೋಧವಾಗಿಯೂ ಹೊರಹೊಮ್ಮಿಲ್ಲ. ಸಂಘ (ಆರ್‌ಎಸ್‌ಎಸ್) ಜನಪ್ರಿಯತೆ, ಅಧಿಕಾರವನ್ನು ಬಯಸುವುದಿಲ್ಲ. ದೇಶದಲ್ಲಿ ನಡೆಯುತ್ತಿರುವ ಎಲ್ಲಾ ಒಳ್ಳೆಯ ಕೆಲಸಗಳನ್ನು ಸರಿಯಾಗಿಯೇ ಮಾಡಬೇಕು ಎಂಬುದು ಸಂಘದ ಉದ್ದೇಶ ಎಂದಿದ್ದಾರೆ.

ಇಡೀ ಸಮಾಜವನ್ನು ಸಂಘಟಿಸುವುದನ್ನು ಹೊರತುಪಡಿಸಿ, ಬೇರೆ ಯಾವುದೇ ಕೆಲಸವಿಲ್ಲ ಎಂದು ಸಂಘವು ಆರಂಭದಿಂದಲೇ ನಿರ್ಧರಿಸಿದೆ ಎಂದು ಅವರು ತಿಳಿಸಿದ್ದಾರೆ.

ಇಸ್ಲಾಮಾಬಾದ್ ಮಸೀದಿಯಲ್ಲಿ ಆತ್ಮಹತ್ಯಾ ಬಾಂಬ್ ಸ್ಫೋಟ: ಹೊಣೆ ಹೊತ್ತ ಐಎಸ್



ಇಸ್ಲಾಮಾಬಾದ್: ಇಸ್ಲಾಮಾಬಾದ್‌ನ ಶಿಲ್ಪೆ ಮಸೀದಿಯಲ್ಲಿ ಸಂಭವಿಸಿದ ಆತ್ಮಹತ್ಯಾ ಬಾಂಬರ್ ದಾಳಿಯಲ್ಲಿ ಕನಿಷ್ಠ 31 ಮಂದಿ ಮೃತಪಟ್ಟಿದ್ದು, 169ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಈ ದಾಳಿ ಹೊಣೆಯನ್ನು ಇಸ್ಲಾಮಿಕ್ ಸ್ಟೇಟ್ ಗ್ರೂಪ್ ಹೊತ್ತುಕೊಂಡಿದೆ. ಪಾಕಿಸ್ತಾನದ ರಾಜಧಾನಿಯಾದ ಇಸ್ಲಾಮಾಬಾದ್‌ನಲ್ಲಿ 2008ರ ಮ್ಯಾರಿಯಟ್ ಹೋಟೆಲ್ ಮೇಲಿನ ಬಾಂಬ್ ದಾಳಿಯ ನಂತರ ನಡೆದ ಅತ್ಯಂತ ಭೀಕರ ಬಾಂಬ್ ದಾಳಿ ಇದಾಗಿದೆ. ಇಸ್ಲಾಮಾಬಾದ್‌ನ ಹೊರವಲಯದಲ್ಲಿರುವ ತಲರಾಯಿ ಪ್ರದೇಶದ ಇಮಾಂಬರ್ಗಾ ಕಸರ್–ಇ–ಖಾದಿಜತುಲ್ ಕುಬ್ರಾ ಮಸೀದಿಯಲ್ಲಿ ನಡೆದ ಬಾಂಬ್ ದಾಳಿಯಲ್ಲಿ 31 ಮಂದಿ ಮೃತಪಟ್ಟಿದ್ದು, ಹಲವಾರು ಮಂದಿ ಗಾಯಗೊಂಡಿದ್ದಾರೆ ಎಂದು ನಗರ ಅಧಿಕಾರಿಗಳು ತಿಳಿಸಿದ್ದಾರೆ. ಮೃತರ ಸಂಖ್ಯೆಯಲ್ಲಿ ಏರಿಕೆಯಾಗುವ ಸಾಧ್ಯತೆಯಿದೆ ಎಂದೂ ಅವರು ಹೇಳಿದ್ದಾರೆ.


ಶುಕ್ರವಾರದ ಪ್ರಾರ್ಥನೆಗಾಗಿ ದೇಶದಾದ್ಯಂತ ಮಸೀದಿಗಳು ಜನರಿಂದ ಕಿಕ್ಕಿರಿದು ತುಂಬಿದ್ದ ವೇಳೆ ಈ ಬಾಂಬ್ ಸ್ಫೋಟ ಸಂಭವಿಸಿದೆ. ದಾಳಿಕೋರನನ್ನು ಮಸೀದಿಯ ದ್ವಾರದ ಬಳಿಯೇ ತಡೆಯಲಾಗಿದ್ದು, ಆತ ತನ್ನನ್ನು ತಾನು ಸ್ಫೋಟಿಸಿಕೊಂಡಿದ್ದಾನೆ ಎಂದು ಭದ್ರತಾ ಮೂಲಗಳು ತಿಳಿಸಿವೆ ಎಂದು ಪಿಟಿಐ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಹೋಂವರ್ಕ್ ಮಾಡದ ಮಗುವಿಗೆ ನೂರವೈತ್ತು ಬಾರಿ ಥಳಿಸಿದ ಶಿಕ್ಷಕ



ಲಕ್ನೋ: ಹೋಂವರ್ಕ್ ಪೂರ್ಣಗೊಳಿಸದ್ದಕ್ಕೆ ಶಿಕ್ಷಕನೋರ್ವ ಎರಡನೇ ತರಗತಿ ಮಗುವಿಗೆ ಬಾಸುಂಡೆ ಬರುವವರೆಗೂ 150 ಬಾರಿ ಥಳಿಸಿರುವ ಘಟನೆ ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯ ಕರ್ನೈಲಗಂಜ್ ಪ್ರದೇಶದ ಖಾಸಗಿ ಶಾಲೆಯೊಂದರಲ್ಲಿ ಘಟನೆ ನಡೆದಿದೆ. ಎಂಆರ್‌ಜಿ ಶಾಲೆಯ ಇಂಗ್ಲಿಷ್ ಶಿಕ್ಷಕ ಪ್ರಖರ್ ಸಿಂಗ್ ಎಂಬಾತ ಮಗುವಿನ ಮೇಲೆ ಹಲ್ಲೆ ನಡೆಸಿದ್ದಾನೆ ಎಂದು ಆರೋಪಿಸಲಾಗಿದೆ. ಹೋಂ ವರ್ಕ್ ಪೂರ್ಣಗೊಳಿಸದ ಕಾರಣದಿಂದ ಶಿಕ್ಷಕರು ಕೋಪಗೊಂಡು ಮಗುವಿನ ಕಾಲುಗಳ ಮೇಲೆ ಪದೇ ಪದೆ ಹೊಡೆದಿದ್ದಾರೆ. ಇದರಿಂದ ಮಗುವಿನ ಕಾಲುಗಳಲ್ಲಿ ಗಾಯದ ಗುರುತುಗಳು, ಊತ ಮತ್ತು ತೀವ್ರ ನೋವು ಉಂಟಾಗಿದೆ. ಮಗು ಮನೆಗೆ ತಲುಪಿದಾಗ ಕುಂಟುತ್ತಾ ಬಂದಿದ್ದು, ದೇಹದ ಮೇಲಿನ ಗಾಯದ ಗುರುತುಗಳನ್ನು ನೋಡಿ ಕುಟುಂಬಸ್ಥರು ಆಘಾತಗೊಂಡರು. ಮಗುವಿನ ತಂದೆ ಶಾಲಾ ಆಡಳಿತ ಮಂಡಳಿಯನ್ನು ಸಂಪರ್ಕಿಸಿ ನಂತರ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 115 (2), 351 (3) ಮತ್ತು 352ರ ಅಡಿಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಕರ್ನೈಲಗಂಜ್ ಸರ್ಕಲ್ ಆಫೀಸರ್ ಅಭಿಷೇಕ್ ದುಬಾಬಾ ತಿಳಿಸಿದ್ದಾರೆ. ಘಟನೆ ಬಳಿಕ ಶಾಲಾ ಪ್ರಾಂಶುಪಾಲರು ತಕ್ಷಣವೇ ಇಂಗ್ಲಿಷ್ ಶಿಕ್ಷಕನನ್ನು ಸೇವೆಯಿಂದ ವಜಾ ಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ವಿರಾಟ ಹಿಂದೂ ಸಂಗಮದ ಭವ್ಯ ಮೆರವಣಿಗೆ



ವಿರಾಟ ಹಿಂದೂ ಸಂಗಮದ ಭವ್ಯ ಮೆರವಣಿಗೆಯ ವಿಹಂಗಮ ದೃಶ್ಯ

ಮಡಿಕೇರಿ, ಫೆ.7–ರಾಷ್ಟ್ರೀಯ ಸ್ವಯಂ ಸೇವಕ ಸಂಘ ನೂರು ವಸಂತಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ, ಹಿಂದೂ ಸಮಾಜದಲ್ಲಿ ಧರ್ಮ ಮತ್ತು ಸಂಸ್ಕೃತಿಯ ಜಾಗೃತಿ ಮೂಡಿಸುವ "ವಿರಾಟ ಹಿಂದೂ ಸಂಗಮ" ಜಿಲ್ಲಾ ಕೇಂದ್ರವಾದ ಮಡಿಕೇರಿಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡ ಹಿಂದೂ ಬಾಂಧವರ ಭವ್ಯ ಮೆರವಣಿಗೆಯು ಶನಿವಾರ ನಡೆಯಿತು.

ನಗರದ ನಾಲ್ಕು ವಿಭಾಗಗಳಿಂದ ಸ್ತಬ್ಧ ಚಿತ್ರ, ಭಾರತಾಂಬೆಯ ಪಟ ಚಿತ್ರ, ಚಂಡೆ ಮೇಳ, ಭಜನಾ ತಂಡಗಳೊಂದಿಗೆ ಮಧ್ಯಾಹ್ನ ಮೆರವಣಿಗೆಯ ಮೂಲಕ ಸಾಗಿ ಬಂದ ಹಿಂದೂ ಬಾಂಧವರು ಇಲ್ಲಿನ ಚೌಕಿಯಲ್ಲಿ ಸಮಾವೇಶಗೊಂಡು, ಶಿಸ್ತು ಬದ್ಧವಾಗಿ ಗಾಂಧಿ ಮೈದಾನದತ್ತ ಸಾಗುವುದರೊಂದಿಗೆ ನಗರದ ರಾಜಬೀದಿ ಸಂಪೂರ್ಣ ಕೇಸರಿಮಯವಾಗಿ ಮಾರ್ಪಟ್ಟಿತು.

ಬೃಹತ್ ಹಿಂದೂ ಸಂಗಮ–ನಗರದ ನಾಲ್ಕು ಕಡೆಗಳಿಂದ ಸಾಗಿ ಬಂದ ಹಿಂದೂ ಬಾಂಧವರ ಮೆರವಣಿಗೆ ಚೌಕಿಯಲ್ಲಿ ಸಂಜೆ ಸಂಗಮಗೊಂಡಿತು. ಬಳಿಕ ಎಲ್ಲಾ ವಿಭಾಗಗಳವರು ಒಂದಾಗಿ ನಗರದ ಖಾಸಗಿ ಬಸ್ ನಿಲ್ದಾಣ, ನಗರ ಠಾಣೆ, ನಗರಸಭೆಯನ್ನು ಹಾದು ಗಾಂಧಿ ಮೈದಾನಕ್ಕೆ ಶೋಭಾಯಾತ್ರೆಯ ಮೂಲಕ ತೆರಳಿದರು. ಮುಚ್ಚಲ್ಪಟ್ಟಿದ್ದ ಅಂಗಡಿ ಮಳಿಗೆ– ಹಿಂದೂ ಸಂಗಮದ ಹಿನ್ನೆಲೆಯಲ್ಲಿ ನಗರದ ಸಾಕಷ್ಟು ಹಿಂದೂ ಸಮಾಜ ಬಾಂಧವರು ತಮ್ಮ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿದ್ದರು.

ಬಿಗಿ ಭದ್ರತೆ: ನಗರದಾದ್ಯಂತ ಜಿಲ್ಲಾ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು ಮತ್ತು ಹಿಂದೂ ಸಂಗಮದ ಹಿನ್ನೆಲೆಯಲ್ಲಿ ಯಾವುದೇ ಅಹಿತ 'ಕರ ಘಟನೆಗಳಿಗೆ ಆಸ್ಪದವೀಯ ದಂತೆ ಎಲ್ಲಾ ಮದ್ಯದಂಗಡಿಗಳನ್ನು ಮುಚ್ಚಲಾಗಿತ್ತು.

ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜೀ ಸ್ಪೀಕರ್ ಕೆ.ಜಿ. ಬೋಪಯ್ಯ, ಮಾಜಿ ಶಾಸಕ ಅಪ್ಪಚ್ಚು ರಂಜನ್, ಬಿಜೆಪಿ ಮುಖಂಡ ಮನು ಮುತ್ತಪ್ಪ, ರಮೇಶ್ ಹೊಳ್ಳ, ಡಾ. ಬಿ.ಸಿ. ನವೀನ್, ಮಾತೆಯರು, ಮಕ್ಕಳು, ಹಿರಿಯರು ಕಿರಿಯರು ಕೇಸರಿ ಶಲ್ಯ ತೊಟ್ಟು ಹಿಂದು ಸಂಗಮದಲ್ಲಿ ಹೆಜ್ಜೆ ಹಾಕಿದರು. ಛತ್ರಪತಿ ಶಿವಾಜಿ, ಶ್ರೀ ರಾಮ, ಲಕ್ಷ್ಮಣ, ಆಂಜನೇಯ, ಸೀತಾಮಾತೆಯ ವೇಷ ತೊಟ್ಟಿದ್ದ ಪುಟಾಣಿಗಳು ಮೆರವಣಿಗೆ ಯಲ್ಲಿ ಗಮನ ಸೆಳೆದರು. ಮೆರವಣಿಗೆ ಉದ್ದಕ್ಕೂ ದೇಶ ಭಕ್ತಿ ಹಾಗೂ ಹಿಂದು ಧರ್ಮದ ಪರ ಘೋಷಣೆ ಮುಗಿಲು ಮುಟ್ಟಿತ್ತು.

ಕೊಡಗು: ನೀರಿನ ಬಾಟಲು ನಿಷೇಧಕ್ಕೆ ನಿರ್ಧಾರ

ಮಡಿಕೇರಿ,ಫೆ.7–ಏಕ ಬಳಕೆ ಪ್ಲಾಸ್ಟಿಕ್ ಮತ್ತು ಲೀಟರ್‌ವರೆಗಿನ ಕುಡಿಯುವ ನೀರಿನ ಬಾಟಲಿಗಳನ್ನು ಜಿಲ್ಲೆಯಾದ್ಯಂತ ಸಂಪೂರ್ಣವಾಗಿ ನಿಷೇಧ ಮಾಡಲು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ನಿರ್ಧಾರ ಕೈಗೊಂಡಿದೆ.

ಗೋಣಿಕೊಪ್ಪ ಚೇಂಬರ್ ಆಫ್ ಕಾಮರ್ಸ್ ಭವನದಲ್ಲಿ ಜಿಲ್ಲಾ ಚೇಂಬರ್‌ನ ಅಧ್ಯಕ್ಷ ಬಿ.ಆರ್.ನಾಗೇಂದ್ರ ಪ್ರಸಾದ್ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ತ್ರೈಮಾಸಿಕ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಏಕ ಬಳಕೆ ಪ್ಲಾಸ್ಟಿಕ್ ಮತ್ತು ಲೀಟರ್‌ವರೆಗಿನ ಕುಡಿಯುವ ನೀರಿನ ಬಾಟಲಿಗಳಿಂದ ಪರಿಸರದ ಮೇಲಾಗುತ್ತಿರುವ ಹಾನಿಯ ಕುರಿತು ಚರ್ಚಿಸಲಾಯಿತು. ಮಡಿಕೇರಿ ನಗರದಲ್ಲಿ ಮಾತ್ರ 1 ಲೀಟರ್‌ವರೆಗಿನ ಕುಡಿಯುವ ನೀರಿನ ಬಾಟಲಿ ಬಳಕೆ ನಿಷೇಧ ಮಾಡಲಾಗಿದೆ. ಇದನ್ನು ಜಿಲ್ಲಾ ವ್ಯಾಪಿ ವಿಸ್ತರಿಸಬೇಕು ಮತ್ತು ಏಕ ಬಳಕೆ ಪ್ಲಾಸ್ಟಿಕ್ ಕಡ್ಡಾಯವಾಗಿ ನಿಷೇಧಿಸಬೇಕೆಂದು ನಿರ್ಧರಿಸಲಾಯಿತು.

ಅಧ್ಯಕ್ಷ ಬಿ.ಆರ್.ನಾಗೇಂದ್ರ ಪ್ರಸಾದ್ ಮಾತನಾಡಿ ಸದಸ್ಯತ್ವ ಅಭಿಯಾನ ನಡೆಸುವಂತೆ ಸಲಹೆ ನೀಡಿದರು. ಪ್ರಧಾನ



ಗೋಣಿಕೊಪ್ಪ ಚೇಂಬರ್ ಆಫ್ ಕಾಮರ್ಸ್ ಭವನದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಅಧ್ಯಕ್ಷ ಬಿ.ಆರ್.ನಾಗೇಂದ್ರ ಪ್ರಸಾದ್ ಮಾತನಾಡಿದರು.

ಕಾರ್ಯದರ್ಶಿ ಮೋಂತಿ ಗಣೇಶ್ ಕಳೆದ ಸಭೆಯ ವರದಿ ವಾಚಿಸಿದರು, ಖಜಾಂಚಿ ಪಿ.ಎಸ್.ಸುರೇಶ್ ಲೆಕ್ಕಪತ್ರ ಮಂಡಿಸಿದರು. ಸ್ಥಾನೀಯ ಸಂಸ್ಥೆಯ ಅಧ್ಯಕ್ಷರು ಹಾಗೂ ಪ್ರತಿನಿಧಿಗಳು ಈವರೆಗಿನ ಕಾರ್ಯ ಚಟುವಟಿಕೆಗಳ ವಿವರ ನೀಡಿ ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು.

ಗೋಣಿಕೊಪ್ಪ ಸ್ಥಳೀಯ ಸಂಸ್ಥೆಯನ್ನು ಉತ್ತಮವಾಗಿ ಸಂಘಟಿಸಿದ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರು ಹಾಗೂ ಜಿಲ್ಲಾ ಚೇಂಬರ್‌ನ ಉಪಾಧ್ಯಕ್ಷ ಸುನಿಲ್ ಮಾದಪ್ಪ ಅವರನ್ನು ಗೌರವಿಸಲಾಯಿತು. ಇತ್ತೀಚೆಗೆ ನಿಧನ ಹೊಂದಿದ ಹಿರಿಯ ವರ್ತಕರಾದ ಬಾಬುಚಂದ್ರ ಉಳ್ಳಾಗಡ್ಡಿ, ಪಿ.ಕೆ.ವಿಜಯನ್ ಹಾಗೂ ವಿ.ಮನೋಹರ್ ಅವರಿಗೆ ಸಂತಾಪ ಸೂಚಿಸಲಾಯಿತು.

ಉಪಾಧ್ಯಕ್ಷರಾದ ನವೀನ್ ಅಂಬೆಕಲ್, ಬಿ.ಟಿ.ತಿಮ್ಮಶೆಟ್ಟಿ, ಮಾಜಿ ಅಧ್ಯಕ್ಷ ಗಿರೀಶ್ ಗಣಪತಿ, ಬಿ.ಎನ್.ಪ್ರಕಾಶ್, ಸಂಘಟನಾ ಕಾರ್ಯದರ್ಶಿ ಟಿ.ಆರ್.ಶರವಣ ಕುಮಾರ್, ಬಿ.ಆರ್.ಪ್ರಮೋದ್, ನಿರ್ದೇಶಕರಾದ ಡಿ.ವಿ. ದಿನೇಶ್, ಎಂ.ಧನಂಜಯ್, ಎ.ಪಿ. ವೀರ್ ರಾಜ್, ಜೋಸೆಫ್ ಶಾಮ, ಕೆ.ಎಸ್. ರಾಜಶೇಖರ್, ಶ್ರೀನಿವಾಸ್, ಸ್ಥಾನೀಯ ಸಂಸ್ಥೆಯ ಅಧ್ಯಕ್ಷರು, ನಿರ್ದೇಶಕರು, ಸದಸ್ಯರು ಉಪಸ್ಥಿತರಿದ್ದರು.

ಭಾಷೆಯಿದ್ದರೆ ಸಂಸ್ಕೃತಿ ಉಳಿಯಲು ಸಾಧ್ಯ

ವಿರಾಜಪೇಟೆ: ಒಂದು ಭಾಷೆಯಿದ್ದರೆ ಮಾತ್ರ ಸಂಬಂಧಪಟ್ಟ ಜನಾಂಗ ಹಾಗೂ ಸಂಸ್ಕೃತಿ ಉಳಿಯಲು ಸಾಧ್ಯ ಎಂದು ಶಾಸಕ ಎ.ಎಸ್.ಪೊನ್ನಣ್ಣ ಅಭಿಪ್ರಾಯಪಟ್ಟಿದ್ದಾರೆ.

ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ಶಾಸಕರ ಗೃಹಕಚೇರಿಯಲ್ಲಿ ಇದೇ ಮೊದಲಿಗೆ ಸ್ಥಾಪಿಸಿದ ಕೊಡವ ಪುಸ್ತಕ ಪತ್ತಾಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಕಾಡೆಮಿಯ ಇಂತಹ ಯೋಜನೆಯು ಕೊಡವ ಸಾಹಿತ್ಯ–ಸಂಸ್ಕೃತಿಯನ್ನು ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವಲ್ಲಿ ಸಹಕಾರಿಯಾಗಲಿದೆ ಎಂದರು. ಹಿಂದಿನ ಕಾಲದಲ್ಲಿ ನಮ್ಮ ಹಿರಿಯರಿಗೆ ಯಾವುದೇ ಅನುಕೂಲತೆಗಳು ಇರಲಿಲ್ಲ. ಇಂತಿದ್ದರೂ ಕೊಡವ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದಾರೆಂದರೆ, ಅವನ್ನೆಲ್ಲ ನಾವು ನಮ್ಮ ಮುಂದಿನ ಪೀಳಿಗೆಗೆ ಸಾಂಪ್ರದಾಯಿಕವಾಗಿ ಮುಂದುವರಿಸುವ ಕಾರ್ಯ ಆಗಬೇಕು. ಕೊಡವ ಪುಸ್ತಕ ಪತ್ತಾಯವನ್ನು ಎಲ್ಲಾ ಐನ್‌ಮನೆಗಳಲ್ಲಿ ಮನೆ–ಮನೆಗಳಲ್ಲಿ ಸ್ಥಾಪಿಸುವ ಗುರಿ ಇಟ್ಟುಕೊಂಡಿರುವುದು ಸಂತಸದ ವಿಷಯ ಎಂದರು.

ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ಮಾತನಾಡಿ, ಕೊಡವ ಭಾಷೆಯು ಉತ್ತಮ ಮೌಲ್ಯಗಳನ್ನು ಹೊಂದಿರುವ, ಸಂಪದ್ಭರಿತವಾಗಿರುವ ಭಾಷೆಯಾಗಿದೆ. ಇದು ತನ್ನದೇ ಆದ ಕಲೆ, ಜಾನಪದ, ಸಂಸ್ಕೃತಿ, ಸಾಹಿತ್ಯ ಹಾಗೂ ಒಂದು ಜೀವನ ಕ್ರಮವನ್ನು ರೂಪಿಸಿರುವ ಭಾಷೆಯಾಗಿದ್ದು ಇದರ ಬಳಕೆ ವೃದ್ಧಿಯಾಗಬೇಕು. ಮುಂದಿನ ದಿನಗಳಲ್ಲಿ ಪ್ರತಿಯೊಂದು ಸಮಾಜಗಳಲ್ಲಿ, ಬಲ್ಯಮನೆ, ಮುಂದುಮನೆ, ಐನ್‌ಮನೆಗಳಲ್ಲಿ, ದೇವನೆಲೆಗಳಲ್ಲಿ ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ. ಪ್ರತಿಯೊಬ್ಬರ ಮನೆಯಲ್ಲಿ ಒಂದಿಷ್ಟು ಜಾಗ ಮಾಡಿಕೊಂಡರೆ ಕ್ರಮೇಣ ಎಲ್ಲರಲ್ಲಿ ಪುಸ್ತಕ ಪ್ರೇಮ ಉಂಟಾಗಿ ಜ್ಞಾನ ಭಂಡಾರವೂ ವೃದ್ಧಿಸಲು ಅನುಕೂಲ ಆಗುತ್ತದೆ ಎಂದರು.

ಕೊಡವ ಸಾಹಿತ್ಯ ಕ್ಷೇತ್ರವನ್ನು ಅಂದಿನ ಕಾಲಮಾನದಲ್ಲಿ ಉತ್ತುಂಗಕ್ಕೆ ಏರಿಸಿದವರು ನಡಿಕೇರಿಯಂಡ ಚಿಣ್ಣಪ್ಪ, ಹರದಾಸ ಅಪ್ಪನೆರವಂಡ ಅಪ್ಪಚ್ಚಕವಿ, ಐಚೆಟ್ಟಿರ ಮಾ. ಮುತ್ತಣ್ಣ, ಬಾಚಮಡ ಡಿ.ಗಣಪತಿ, ಮಂಡಿರ ಜಯ ಅಪ್ಪಣ್ಣ, ಬೊವ್ವೇರಿಯಂಡ ನಂಜಮ್ಮ ಚಿಣ್ಣಪ್ಪ ಇವರೆಲ್ಲರ ಸಾಹಿತ್ಯವನ್ನು ಜೀವಂತವಾಗಿರಿಸಲು ಕೊಡವ ಪುಸ್ತಕ ಪತ್ತಾಯವು ಸಹಕಾರಿಯಾಗಲಿದೆ ಎಂದರು.

ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ, ಕೊಡವ ಸಮಾಜ ಒಕ್ಕೂಟಗಳ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ, ನಿವೃತ್ತ ಶಿಕ್ಷಕಿ ಹಿರಿಯರಾದ ಕರ್ನಂಡ ಬೊಳ್ಳಮ್ಮ ನಾಣಯ್ಯ, ಸೋಮವಾರಪೇಟೆ ಕೊಡವ ಸಮಾಜದ ಅಧ್ಯಕ್ಷ ಮಾಳೇಟಿರ ಅಭಿಮನ್ಯುಕುಮಾರ್, ಮಾದಾಪುರ ಕೊಡವ ಸಮಾಜದ ಅಧ್ಯಕ್ಷ ಮಂಡೇಪಂಡ ಮನು ಮೇದಪ್ಪ ಮೂರ್ನಾಡು ಕೊಡವ ಸಮಾಜದ ಅಧ್ಯಕ್ಷ ತೇಲಪಂಡ ಸುಬ್ಬಯ್ಯ, ಅಮ್ಮತ್ತಿ ಕೊಡವ ಸಮಾಜದ ಅಧ್ಯಕ್ಷ ಐನಂಡ ಪ್ರಕಾಶ್ ಗಣಪತಿ ಮಾತನಾಡಿದರು. ಚೆಪ್ಪುಡಿರ ಅರುಣ್ ಮಾಚಯ್ಯ, ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯರನ್ನು ಕೆಂಬಟ್ಟಿ ಸನ್ಮಾನಿಸಲಾಯಿತು.

ಸಾಹಿತಿಗಳಾದ ಪಿವ್ಯೆಲೇಶ್, ಉಳುವಂಗಡ ಕಾವೇರಿ ಉದಯ, ಕೊಟ್ಟಿಯಂಡ ಜೀವನ್ ಚಿಣ್ಣಪ್ಪ, ಪ್ರೊ.ಪಟ್ಟಡ ಎ.ಪೂವಣ್ಣ, ತಾತಂಡ ಪ್ರಭಾ ನಾಣಯ್ಯ, ಕರೋಟಿರ ಶಶಿ ಸುಬ್ರಮಣಿ, ಅಮ್ಮಣಿಚಂಡ ಗಂಗಮ್ಮ ಬೆಳ್ಯಪ್ಪ, ಅಜ್ಜಿನಿಕಂಡ ಪ್ರಮೀಳ ನಾಚಯ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ಶಾಸಕರ ಗೃಹಕಚೇರಿಯಲ್ಲಿ ಕೊಡವ ಪುಸ್ತಕ ಪತ್ತಾಯದಲ್ಲಿ ಪಾಲ್ಗೊಂಡಿದ್ದ ಗಣ್ಯರು

ಜ್ಯೋತಿ ನಿಧನ



ನಾಪೋಕ್ಲು, ಫೆ.7–ಇಲ್ಲಿನ ಇಂದಿರಾ ನಗರದ ನಿವಾಸಿ ನಿವೃತ್ತ ಅಂಗನವಾಡಿ ಶಿಕ್ಷಕಿ ಜ್ಯೋತಿ(61) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಮೃತರು ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸಂಜೆ ಹಿಂದೂ ರುದ್ರಭೂಮಿಯಲ್ಲಿ ಜರುಗಿತು.

ತೆಕ್ಕಡ ಕಾವೇರಪ್ಪ



ನಾಪೋಕ್ಲು: ಇಲ್ಲಿಗೆ ಸಮೀಪದ ಪೇರೂರು ಗ್ರಾಮದ ನಿವಾಸಿ ತೆಕ್ಕಡ ಕಾವೇರಪ್ಪ (ಜೀವು 42) ಅನಾರೋಗ್ಯದಿಂದ ಶನಿವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಭಾನುವಾರ ಪೇರೂರು ಗ್ರಾಮದಲ್ಲಿ ಜರುಗಲಿದೆ.

ಮಣವಟ್ಟಿರ ಅಚ್ಚಪ್ಪ



ನಾಪೋಕ್ಲು: ಸಮೀಪದ ನೆಲಜಿ ಗ್ರಾಮದ ನಿವಾಸಿ ಮಣವಟ್ಟಿರ ಅಚ್ಚಪ್ಪ (ಅಪ್ಪಾಜಿ 99) ಶನಿವಾರ ನಿಧನರಾದರು. ಮೃತರು ಪತ್ನಿ ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಭಾನುವಾರ ನೆಲಜಿ ಗ್ರಾಮದಲ್ಲಿ ಜರುಗಲಿದೆ.

ಬಿ.ಎಸ್. ಕಮಲ



ನಾಪೋಕ್ಲು: ಸ್ಥಳೀಯ ಗ್ರಾಮ ನಿವಾಸಿ ದಿವಂಗತ ಶಾಂತಪ್ಪ ಪೂಜಾರಿ ಅವರ ಧರ್ಮಪತ್ನಿ ಬಿ.ಎಸ್ ಕಮಲ (84) ಶುಕ್ರವಾರ ನಿಧನರಾದರು. ಮೃತರು ಮೂವರು ಪುತ್ರಿಯರು, ಪುತ್ರನನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಜರುಗಿತು.

ಕುಲಪತಿ ಅಶೋಕ ಸಂಗಪ್ಪಗೆ ಕೃಷಿ ರತ್ನ ಪ್ರಶಸ್ತಿ ಪ್ರದಾನ



ಕುಶಾಲನಗರ, ಫೆ.7–ಕೃಷಿ ಆವಿಷ್ಕಾರಗಳಿಗೆ ನೀಡಿದ ಕೊಡುಗೆಗಳನ್ನು ಗುರುತಿಸಿ ಕೊಡಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಅಶೋಕ ಸಂಗಪ್ಪ ಆಲೂರ ಅವರಿಗೆ ನವದೆಹಲಿಯ ಇಂಡಿಯನ್ ಇಂಡಿಜಿನಸ್ ಸೊಸೈಟಿ ಫಾರ್ ಸೈನ್ಸ್ ಮತ್ತು ಸೋಶಿಯಲ್ ಸೈನ್ಸ್‌ನಿಂದ ಕೃಷಿ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಇಂಡಿಯನ್ ಇಂಡಿಜಿನಸ್ ಸೊಸೈಟಿ ಫಾರ್ ಸೈನ್ಸ್ ಅಂಡ್ ಸೋಶಿಯಲ್ ಸೈನ್ಸ್, SS ಜಸ್ವಾಲ್ ಕಾಲೇಜ್ ನಾಗ್ಪುರದ ಅಡಿಯಲ್ಲಿ, ವಿಶ್ವವಿದ್ಯಾಲಯ ನಾಗ್ಪುರದಿಂದ ಆಯೋಜಿಸಲಾಗಿದ್ದ ಫ್ರಾಂಟಿಯರ್ಸ್ ಎಕ್ಸ್‌ಪ್ಲೋರಿಂಗ್ ಇಂಟರ್ ಡಿಸಿಪ್ಲಿನರಿ ಅಡ್ವಾನ್ಸ್ ಇನ್ ಬಯೋಲಾಜಿಕಲ್ ಮತ್ತು ಮೆಟೀರಿಯಲ್ ಸೈನ್ಸ್ ಅಂತಾರಾಷ್ಟ್ರೀಯ ಸಮ್ಮೇಳನದ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಶ್ರೀ ದೇವೀ ಮಹಾತ್ಮೆ ಯಕ್ಷಗಾನ

ನಾಪೋಕ್ಲು: ದಕ್ಷಿಣ ಕನ್ನಡದಲ್ಲಿ ಜನಪ್ರಿಯವಾಗಿರುವ ಯಕ್ಷಗಾನದ ಸೊಗಡು ಸಮೀಪದ ಮೂರ್ನಾಡಿನಲ್ಲಿ ಅಪಾರ ಜನಸಾಗರವನ್ನು ಮೂಕ ಪ್ರೇಕ್ಷಕರನ್ನಾಗಿಸಿತು. ಮೂರ್ನಾಡಿನ ಆಪ್ತಮಿತ್ರ ಬಳಗ ಮೂರನೇ ವರ್ಷದ ನೆನಪಿಗಾಗಿ ಶ್ರೀ ಕೋದಂಡ ರಾಮ ಕೃಪಾಪೋಷಿತ ಯಕ್ಷಗಾನ ಮಂಡಳಿ ಹನುಮಗಿರಿ ಯಕ್ಷಗಾನ ಮೇಳದವರಿಂದ ಸಂಪೂರ್ಣ ಶ್ರೀ ದೇವೀ ಮಹಾತ್ಮೆ ಯಕ್ಷೋತ್ಸವ ಯಶಸ್ಸು ಗಳಿಸಿ ವೀಕ್ಷಕರು ಪುರಾಣ



ಪಾತ್ರಧಾರಿಗಳ ವೇಷಭೂಷಣ ಹಾಗೂ ಮಾತಿನ ಚಾತುರ್ಯವನ್ನು ಕಣ್ತುಂಬಿಕೊಂಡರು.

ಬಾಬು ಜಗಜೀವನರಾಂ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

ಕೊಳ್ಳೇಗಾಲ, ಫೆ.7(ಎನ್‌ಎನ್)– ಬಾಬು ಜಗಜೀವನ್ ರಾಂ ಸಂಘಟನೆಯ ಒಕ್ಕೂಟ ನೂತನ ಸಂಘದ ಪದಾಧಿಕಾರಿಗಳ ಆಯ್ಕೆ ಸಂಬಂಧ ಶನಿವಾರ ಪಟ್ಟಣದ ಗುರುಭವನದಲ್ಲಿ ಸರ್ವ ಸದಸ್ಯರ ಸಭೆ ನಡೆದು ತಾಲೂಕು ಪದಾಧಿಕಾರಿಗಳನ್ನು ಆಯ್ಕೆ ಮಾಡಿತು.

ಪಟ್ಟಣದ ಗುರುಭವನದಲ್ಲಿ ಜಿಲ್ಲಾ ಸಮಿತಿ ಕರೆದಿದ್ದ ಸಭೆಯಲ್ಲಿ ತಾಲೂಕು ಗೌರವಾಧ್ಯಕ್ಷರಾಗಿ ಪಿ.ಶಿವಮಲ್ಲು, ಅಧ್ಯಕ್ಷರಾಗಿ ಬಿ.ಗೋಪಾಲ್, ಉಪಾಧ್ಯಕ್ಷರಾಗಿ ಸುರೇಶ್ ತಿಮ್ಮರಾಜೀಪುರ, ಬಾಪುನಗರ ಸಿದ್ದಪ್ಪ, ಇಂದ್ವಾಡಿ ಮುತ್ತುರಾಜು, ಪ್ರಧಾನ ಕಾರ್ಯದರ್ಶಿಯಾಗಿ ಸಿ.ಮಧು ಅವರನ್ನು ನೇಮಿಸಲಾಯಿತು.

ಉಳಿದಂತೆ ಸಂಘಟನಾ ಕಾರ್ಯದರ್ಶಿ ಮಹೇಶ್ ಟಗರಪುರ, ವಸಂತ್ ಕುಮಾರ್, ಖಜಾಂಚಿ ಮುತ್ತುರಾಜ್, ಜಂಟಿ ಕಾರ್ಯದರ್ಶಿ ಕಾಮಗೆರೆ ನಿಂಗರಾಜು, ರಾಚಪ್ಪ ಆಲಹಳ್ಳಿ, ಸಂಚಾಲಕರು ಸಿದ್ದರಾಜು ಬಾಪುನಗರ, ಹಾಗೂ ನಿರ್ದೇಶಕರಾಗಿ ಮಹದೇವ.ಸಿ ಸರಗೂರು, ಕುಮಾರ ಕರಿಯನಪುರ, ಸಿದ್ದಲಿಂಗಸ್ವಾಮಿ, ಸೋಮಶೇಖರ್ ಮುಳ್ಳೂರು, ಕಾನೂನು ಸಲಹೆಗಾರರಾಗಿ ವಕೀಲರಾದ ರಾಜೇಂದ್ರ ಬೂದಿತಿಟ್ಟು, ನಟರಾಜು ತಿಮ್ಮರಾಜೀಪುರ, ದೊಡ್ಡಿಂದುವಾಡಿ ಸಿದ್ದರಾಜುರವರನ್ನು ಆಯ್ಕೆ ಮಾಡಲಾಯಿತು.

ಬಾಬು ಜಗಜೀವನ್ ರಾಮ್ ಒಕ್ಕೂಟ ಸಂಘ, ಚಾ.ನಗರ ಜಿಲ್ಲೆ ಗೌರವಾಧ್ಯಕ್ಷ ಬಸವನಪುರ ರಾಜಶೇಖರ್ ಮಾತನಾಡಿ ಸಮಾಜ ಸೇವೆಗೆ ಹಾಗೂ ಸಂಘದ ಅಭ್ಯುದಯಕ್ಕೆ ನೂತನ ಪದಾಧಿಕಾರಿಗಳು ಮುಂದಾಗಬೇಕು, ಕೈಲಾದ ಸಹಾಯ ಮಾಡುವ ಮೂಲಕ ಸಾಮಾಜಿಕ ಸೇವೆಗೆ ಸಜ್ಜಾಗಬೇಕು ಎಂದರು.

ಜಿಲ್ಲಾಧ್ಯಕ್ಷ ಹೆಚ್.ಹೆಚ್.ನಾಗರಾಜು, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ರಾಮಸಮುದ್ರ, ಖಜಾಂಚಿ ಬಸವರಾಜು (ದ್ವಾರಕೀ) ತಿಮ್ಮರಾಜೀಪುರ, ಜಿಲ್ಲಾ ಉಪಾಧ್ಯಕ್ಷ ಕೆನರಾ ಬ್ಯಾಂಕ್ ಬಸವರಾಜು, ಬೂದಿತಿಟ್ಟು ರಾಜೇಂದ್ರ, ಎಲ್.ಐ.ಸಿ ರಾಜಣ್ಣ ಬಾಪುನಗರ, ಆಡಿಟರ್ ರೇವಣ್ಣ, ಹಸಕೂಲಿ ಸಿದ್ದಯ್ಯ, ಟಗರಪುರ ಬಸವರಾಜು, ಡಾ.ಲೋಕೇಶ್ ಇನ್ನಿತರರಿದ್ದರು

ಗ್ರಾಮ ಪಂಚಾಯಿತಿಗಳಲ್ಲಿ ವಿಶೇಷ ತೆರಿಗೆ ವಸೂಲಾತಿ ಅಭಿಯಾನ



ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೋನಾ ರೋತ್ ಶನಿವಾರ ಅಧಿಕಾರಿಗಳ ಸಭೆ ನಡೆಸಿದರು

ಚಾಮರಾಜನಗರ, ಫೆ.7–ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿ ಬುಧವಾರ ಹಾಗೂ ಶುಕ್ರವಾರಗಳಂದು ವಿಶೇಷ ತೆರಿಗೆ ವಸೂಲಾತಿ ಅಭಿಯಾನವನ್ನು ಆಯೋಜಿಸಿದ್ದು, ಪ್ರತಿದಿನ ಅಭಿಯಾನದ ಮೂಲಕ ತೆರಿಗೆ ವಸೂಲಿ ಮಾಡಿ ಹೆಚ್ಚಿನ ಪ್ರಮಾಣದಲ್ಲಿ ಪ್ರಗತಿ ಸಾಧಿಸಲು ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೋನಾ ರೋತ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಜಿಲ್ಲೆಯ 30 ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ತೆರಿಗೆ ವಸೂಲಾತಿ ಸಂಬಂಧ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಜಿಲ್ಲೆಯ ಗ್ರಾಪಂ. ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಸಾರ್ವಜನಿಕರು ಕುಡಿಯುವ ನೀರು, ಅಂಗಡಿ ಮಳಿಗೆ, ವಿದ್ಯುಚ್ಛಕ್ತಿ, ವಸತಿ ಹಾಗೂ ಸರ್ಕಾರಿ–ಸಾರ್ವಜನಿಕ ಆಸ್ತಿಗಳಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿಸಬೇಕಾಗಿದ್ದು, ಸಂಬಂಧಪಟ್ಟ ಗ್ರಾ. ಪಂ.ಗಳು ತಮ್ಮ ವ್ಯಾಪ್ತಿಯಲ್ಲಿರುವ ಸರ್ಕಾರಿ ಆಸ್ತಿಗಳಿಗೆ ಅನುಗುಣವಾಗಿ ತೆರಿಗೆ ವಸೂಲಾತಿ ಮಾಡಬೇಕು ಎಂದರು.

ತೆರಿಗೆ ವಸೂಲಾತಿಯಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸಿದಲ್ಲಿ ಮಾತ್ರ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸಲು ಅವಕಾಶವಿದ್ದು, ಹಲವು ಗ್ರಾಪಂಗಳಲ್ಲಿ ಸಿಬ್ಬಂದಿಗಳಿಗೆ ವರ್ಷಾನುಗಟ್ಟಲೆ, ತಿಂಗಳುಗಳ ಕಾಲ ವೇತನ ಪಾವತಿ ಬಾಕಿ ಇರುವುದರಿಂದ ಇಂತಿಷ್ಟು ಮೊತ್ತದ ತೆರಿಗೆ ವಸೂಲಾತಿಯನ್ನು ಕಡ್ಡಾಯವಾಗಿ ವಸೂಲಿ ಮಾಡುವ ಮೂಲಕ ಯಾವುದೇ ಪಂಚಾಯಿತಿ ಸಿಬ್ಬಂದಿಯ ವೇತನವು ಬಾಕಿ ಉಳಿಯದಂತೆ ತೆರಿಗೆ ವಸೂಲಾತಿ ಮಾಡಬೇಕೆಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಹನೂರು ತಾಲೂಕು ವ್ಯಾಪ್ತಿಯ ಕೌದಳ್ಳಿ, ಶೆಟ್ಟಳ್ಳಿ, ಮಾರ್ಟಳ್ಳಿ, ಕುರಟ್ಟಿ ಹೊಸೂರು, ಎಲ್ಲೇಮಾಳ, ಅಜ್ಜೀಪುರ ಹಾಗೂ ಯಳಂದೂರು ತಾಲೂಕಿನ ಮದ್ದೂರು ಗ್ರಾಪಂ. ವ್ಯಾಪ್ತಿಯಲ್ಲಿ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ತುರ್ತು ಕ್ರಮವಹಿಸಬೇಕು. ಕುಡಿ ಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಾಸಗಳು ಉಂಟಾದಲ್ಲಿ ಗ್ರಾಮಸ್ಥರು ಹಾಗೂ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಗಳಾಗದಂತೆ ಟ್ಯಾಂಕರ್ ಗಳ ಮೂಲಕ ಕುಡಿಯುವ ನೀರಿನ ಸರಬರಾಜನ್ನು ಪೂರೈಸಲು ಪರ್ಯಾಯ ವ್ಯವಸ್ಥೆಗಳನ್ನು ಕೈಗೊಳ್ಳುವಂತೆ ಮೋನಾ ರೋತ್ ಅವರು ತಿಳಿಸಿದರು. ಜಿ ಪಂ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ನಾಳೆಯಿಂದ ಹಣಕಾಸು ಸಾಕ್ಷರತಾ ವಾರ ಅಭಿಯಾನ

ಚಾಮರಾಜನಗರ: ಭಾರತೀಯ ರಿಸರ್ವ್ ಬ್ಯಾಂಕ್ (ಆರ್.ಬಿ.ಐ) ನಿರ್ದೇಶನದಂತೆ ಫೆ.9ರಿಂದ 13ರವರೆಗೆ ಹಣಕಾಸು ಸಾಕ್ಷರತಾ ವಾರ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ತಿಳಿಸಿದ್ದಾರೆ.

ಅಭಿಯಾನದ ಧ್ಯೇಯವಾಕ್ಯ 'ಕೆವೈಸಿ–ಸುರಕ್ಷಿತ ಬ್ಯಾಂಕಿಂಗ್‌ಗೆ ನಿಮ್ಮ ಮೊದಲ ಹೆಜ್ಜೆ' ಎಂಬುದಾಗಿದೆ. ಅಭಿಯಾನದ ಅಂಗವಾಗಿ ಜಿಲ್ಲೆಯಾದ್ಯಂತ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಹಾಗೂ ಸಂಬಂಧಿಸಿದ ಇಲಾಖೆಗಳ ಸಹಯೋಗದಲ್ಲಿ ಸಾರ್ವ ಜನಿಕರಿಗೆ ಕೆವೈಸಿ ಸಿ–ಸುರಕ್ಷಿತ ಬ್ಯಾಂಕಿಂಗ್ ಕುರಿತು ಅರಿವು ಮೂಡಿಸಲಾಗುತ್ತದೆ. ಕೆ.ವೈ.ಸಿ ನವೀಕರಣ ಮಾಡಿಸುವ ಅಗತ್ಯತೆ, ದಾಖಲೆಗಳ ಸರಿಯಾದ ಬಳಕೆ ಮತ್ತು ಮಾಹಿತಿಯ ನವೀಕರಣದ ಮಹತ್ವವನ್ನು ಅಭಿಯಾನದಲ್ಲಿ ತಿಳಿಸಿ ಕೊಡಲಾಗುವುದು.

ಸಾರ್ವಜನಿಕರು ತಮ್ಮ ಬ್ಯಾಂಕ್ ಶಾಖೆಗಳಿಗೆ ಭೇಟಿ ನೀಡಿ ಅಥವಾ ಲಭ್ಯವಿರುವ ಅಧಿಕೃತ ಚಾನೆಲ್‌ಗಳ ಮೂಲಕ ತಮ್ಮ ಕೆವೈಸಿ ನವೀಕರಣವನ್ನು ಸಮಯಕ್ಕೆ ಸರಿಯಾಗಿ ಮಾಡಿಸಿಕೊಳ್ಳಬೇಕು. ಯಾವುದೇ ಅನುಮಾನಾಸ್ಪದ ವ್ಯವಹಾರ ಅಥವಾ ವಂಚನೆಗೆ ಒಳಗಾದಲ್ಲಿ ತಕ್ಷಣ ಸಂಬಂಧಿಸಿದ ಬ್ಯಾಂಕ್ ಅಥವಾ ಅಧಿಕೃತ ಸಹಾಯವಾಣಿ ಸಂಖ್ಯೆಗಳಿಗೆ ಮಾಹಿತಿ ನೀಡಬೇಕು. ಜಿಲ್ಲೆಯ ಎಲ್ಲಾ ನಾಗರಿಕರು ಹಣಕಾಸು ಸಾಕ್ಷರತಾ ವಾರದ ಪ್ರಯೋಜನ ಪಡೆದುಕೊಂಡು ಸುರಕ್ಷಿತ ಬ್ಯಾಂಕಿಂಗ್ ಪದ್ಧತಿಗಳನ್ನು ಅನುಸರಿಸಿ ತಮ್ಮ ಹಣಕಾಸು ಭದ್ರತೆಯನ್ನು ಬಲಪಡಿಸಿಕೊಳ್ಳಬೇಕು ಎಂದರು.

ಕಾಡುಪ್ರಾಣಿಗಳ ಹಾವಳಿ ತಪ್ಪಿಸುವಂತೆ ಒತ್ತಾಯಿಸಿ ಬಿಜೆಪಿ ತಮಟೆ ಚಳುವಳಿ



ಪ್ರತಿಭಟನಾಕಾರರನ್ನು ಉದ್ದೇಶಿಸಿ ಬಿಜೆಪಿ ಜಿಲ್ಲಾಧ್ಯಕ್ಷ ನಿರಂಜನ್ ಕುಮಾರ್ ಮಾತನಾಡಿದರು.

ಗುಂಡ್ಲುಪೇಟೆ, ಫೆ.7 (ಸೋಮ್.ಜಿ)– ಕೆರೆಗಳಿಗೆ ನೀರು ತುಂಬಿಸಬೇಕು ಹಾಗೂ ಕಾಡುಪ್ರಾಣಿಗಳ ಹಾವಳಿ ತಪ್ಪಿಸುವಂತೆ ಒತ್ತಾಯಿಸಿ ಶನಿವಾರ ಬಿಜೆಪಿ ಹೆದ್ದಾರಿಯಲ್ಲಿ ತಮಟೆ ಚಳುವಳಿ ನಡೆಸಿತು.

ಪಟ್ಟಣದ ಮಡಳ್ಳಿ ರಸ್ತೆ ಮೂಲಕ ರಾಷ್ಟ್ರೀಯ ಹೆದ್ದಾರಿಯಿಂದ ಸಾಗಿ ಕೆಲ ಕಾಲ ಹೆದ್ದಾರಿ ರಸ್ತೆ ತಡೆ ನಡೆಸಿದರು. ಬಳಿಕ ತಾಲೂಕು ಕಚೇರಿ ಮುಂದೆ ಸಮಾವೇಶಗೊಂಡರು. ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ ಕುಮಾರ್ ಮಾತನಾಡಿ, ತಾಲೂಕಿನ ಹಲವು ಕೆರೆಗಳಿಗೆ ನೀರು ತುಂಬಿಸದ ಕಾರಣ ಜನ ಜಾನುವಾರುಗಳಿಗೆ ತೊಂದರೆಯಾಗಿದೆ. ಮಡಳ್ಳಿಗುಮ್ ಕಲ್ಲುಗುಡ್ಡದಲ್ಲಿ ಅಕ್ರಮ ಸ್ಫೋಟನೆಯಿಂದ ಕೂಲಿ ಕಾರ್ಮಿಕರು ಸಾವನ್ನಪ್ಪಿದ ಪರಿಣಾಮ ಕ್ವಾರಿಯನ್ನು ಸ್ಥಗಿತಗೊಳಿಸಲಾಗಿತ್ತು. ಇದೀಗ ರಾಜಾರೋಷವಾಗಿ ನಡೀತಾ ಇದೆ. ಅಕ್ರಮಗಣಿಗಾರಿಕೆ, ಟಿಪ್ಪರ್ ಹಾವಳಿ ಮಿತಿಮೀರಿದೆ, ಗಾಂಜಾ ಅಫೀಮು ಎಗ್ಗಿಲ್ಲದೆ ನಡೆಯುತ್ತಿದೆ, ತಾಲೂಕಿನಲ್ಲಿ ಗನ್ ಸದ್ದು ಮಾಡುತ್ತಿದೆ. ಕ್ರಷರ್ ಕ್ವಾರಿಗಳಿಗಾಗಿ ದಲಿತರ ಜಮೀನನ್ನು ಕಬಳಿಸುವ ಕೆಲಸ ನಡೆದಿದೆ. ಅಧಿಕಾರಿಗಳಿಂದ ಸಾರ್ವಜನಿಕರ ಮೇಲೆ ನಿರಂತರ ದಬ್ಬಾಳಿಕೆ ನಡಿಯುತ್ತಿದ್ರೂ ಸ್ಥಳೀಯ ಶಾಸಕ ಗಣೇಶಪ್ರಸಾದ್ ಕೈಕಟ್ಟಿ ಕುಳಿತಿದ್ದಾರೆ. ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಪ್ರೊ. ಮಲ್ಲಿಕಾರ್ಜುನಪ್ಪ ಜಿಲ್ಲಾ ಉಪಾಧ್ಯಕ್ಷ ಮಲ್ಲೇಶ, ಪುರಸಭಾ ಮಾಜಿ ಅಧ್ಯಕ್ಷ ಎಲ್.ಸುರೇಶ್, ಹಾಪಕಾಮ್ಸ್ ಜಿಲ್ಲಾಧ್ಯಕ್ಷ ಕೆ.ಆರ್.ಲೋಕೇಶ್, ತಾಲೂಕು ಅಧ್ಯಕ್ಷ ಮಹದೇವಪ್ರಸಾದ್, ಅರಕಲವಾಡಿ ನಾಗೇಂದ್ರ, ಪ್ರಣಯ್, ಮಹದೇವಶೆಟ್ಟಿ, ಬಸವರಾಜು, ನಾಗೇಶ್, ಡಾ.ನವೀನ್ ಮೌರ್ಯ, ಮಾಡ್ರಳ್ಳಿ ನಾಗೇಂದ್ರ, ಮಲ್ಲೇಶ್, ಮಹೇಂದ್ರ, ಕಬ್ಬಳ್ಳಿ ರೇವಣ್ಣ, ಮಂಜು ಶಿವಪುರ, ಸುನೀಲ್, ಕಬ್ಬಳ್ಳಿ ಮಹೇಶ್, ಪ್ರವೀಣ್, ಇದ್ದರು.

ಯುಜಿಸಿ ನಿಯಮ ಯಥಾವತ್ ಜಾರಿಗೆ ಆಗ್ರಹಿಸಿ ಪ್ರತಿಭಟನೆ

ಚಾಮರಾಜನಗರ, ಫೆ.7–ಯುಜಿಸಿ ನಿಯಮ ಯಥಾವತ್ತಾಗಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಡಾ.ಬಿ.ಆರ್. ಅಂಬೇಡ್ಕರ್ ಮಹಾಸಭಾ, ಅಹಿಂದ ಸಂಘಟನೆಗಳ ಒಕ್ಕೂಟ, ಕಾನ್ಸಿರಾಂ ವಿದ್ಯಾರ್ಥಿ ಸಂಘ ಪ್ರತಿಭಟನೆ ನಡೆಸಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಮಹಾಸಭಾದ ಅಧ್ಯಕ್ಷ ಉಮೇಶ್ ಕುದರ್ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ಪ್ರಧಾನಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾದ ಅಧ್ಯಕ್ಷ ಉಮೇಶ್ ಕುದರ್ ಹಾಗೂ ಕಾರ್ಯಾಧ್ಯಕ್ಷ ಸಿ.ಕೆ.ಮಂಜುನಾಥ್ ಮಾತನಾಡಿ, ಹಿಂದುಳಿದ ವಿದ್ಯಾರ್ಥಿಗಳ ಹಿತಕಾಯುವುದಕ್ಕಾಗಿ ಯಥಾವತ್ತಾಗಿ ಯುಜಿಸಿ ನಿಯಮ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು. ಎಸ್‌ಸಿ, ಎಸ್‌ಟಿ, ಓಬಿಸಿ ವಿದ್ಯಾರ್ಥಿಗಳ ಮೇಲೆ ಧರ್ಮ ಜಾತಿಯ ಹೆಸರಿನಲ್ಲಿ ನಡೆಯುತ್ತಿರುವ ತಾರತಮ್ಯ, ಕಿರುಕುಳ, ದೌರ್ಜನ್ಯ ತಡೆಗೆ ವಿಶ್ವ ವಿದ್ಯಾಲಯಗಳ ಧನಸಹಾಯ ಆಯೋಗವು ಜಾರಿಗೆ ತಂದಿರುವ ಹೊಸ ನಿಯಮಗಳನ್ನು ಸ್ವಾಗತಿಸಲಾಗುತ್ತದೆ. ಆದರೆ ನಿಯಮಗಳಿಗೆ ಸುಪ್ರೀಂ ತಡೆಯಾಜ್ಞೆ ನೀಡಿದೆ. ಕೇಂದ್ರ ಸರ್ಕಾರ ತಡೆಯಾಜ್ಞೆ ತೆರವುಗೊಳಿಸಬೇಕು ಎಂದು ಒತ್ತಾಯಿಸಿದರು.

ಇಕ್ವಿಟಿ ಕಮಿತಿ ಮುಂದೆ ಬಂದ ದೂರನ್ನು ಸಮಿತಿ ಪರಿಶೀಲಿಸಿ ವರದಿಯನ್ನು ಸಂಬಂಧಿಸಿದ ಕಾನೂನು ಪ್ರಾಧಿಕಾರ ಸಲ್ಲಿಸುವುದು ಮಾತ್ರ ಅವರ ಕೆಲಸವಾಗಿದೆ ಹೊರತು ಶಿಕ್ಷಿಸುವ ಪ್ರಾಧಿಕಾರವಲ್ಲ. ಆದರೂ ಕೂಡ ಮೇಲ್ವರ್ಗದ ವಿದ್ಯಾರ್ಥಿಗಳ ವಿರೋಧ ಏಕೆ ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಎಂ.ಕೃಷ್ಣಮೂರ್ತಿ, ಪದವಿಪೂರ್ವ ಶಿಕ್ಷಣ ಇಲಾಖೆ ನಿವೃತ್ತ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ರಾಜಶೇಖರ, ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಗಣೇಶ ಪ್ರಸಾದ್, ಎಂ.ಶಿವಮೂರ್ತಿ, ಶಿವರಾಜ್ ಸಿದ್ದಯ್ಯನಪುರ, ಪರ್ವತರಾಜು, ಎಸ್.ಪಿ.ಮಹೇಶ್, ಕುಮಾರ್, ಕಾಗಲವಾಡಿ ಶಿವಸ್ವಾಮಿ, ದೊಡ್ಡರಾಯಪೇಟೆ ಸಿದ್ದರಾಜು, ರೂಪೇಶ್, ಗೋವಿಂದ, ವಾಸು, ಮಹೇಶ್, ಚನ್ನಪ್ಪ, ಹಾಗೂ ವಿದ್ಯಾರ್ಥಿಗಳು ಇತರರು ಭಾಗವಹಿಸಿದ್ದರು.



ಯುಜಿಸಿ ನಿಯಮ ಯಥಾವತ್ತಾಗಿ ಜಾರಿಗೊಳಿಸುವಂತೆ ಒತ್ತಾಯಿಸಿ ಕಾನ್ಸಿರಾಂ ವಿದ್ಯಾರ್ಥಿ ಸಂಘ ಪ್ರತಿಭಟನೆ ನಡೆಸಿತು.

ತಿ.ನರಸೀಪುರ ವಕೀಲರ ಮೇಲೆ ಹಲ್ಲೆ ಖಂಡಿಸಿ ಜಿಲ್ಲಾ ವಕೀಲರ ಪ್ರತಿಭಟನೆ

ಚಾಮರಾಜನಗರ, ಫೆ.7–ತಿ.ನರಸೀಪುರ ವಕೀಲರ ಸಂಘದ ಅಧ್ಯಕ್ಷ ಮಹದೇವ ಸ್ವಾಮಿ ಮೇಲೆ ವ್ಯಕ್ತಿಯೊಬ್ಬ ಅವಾಚ್ಯ ಶಬ್ಧಗಳಿಂದ ನಿಂದಿಸಿ, ಹಲ್ಲೆ ಮಾಡಿರುವ ಘಟನೆಯನ್ನು ಖಂಡಿಸಿ ನಗರದಲ್ಲಿ ಜಿಲ್ಲಾ ವಕೀಲರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಸಂಘದ ಅಧ್ಯಕ್ಷ ಪುಟ್ಟಸ್ವಾಮಿ ರಾಮಸಮುದ್ರ ಮಾತನಾಡಿ, ತಿ.ನರಸೀಪುರದಲ್ಲಿ ವ್ಯಕ್ತಿಯೊಬ್ಬ ವಕೀಲರನ್ನು ಕುರಿತು ಅವಹೇಳನಕಾರಿಯಾಗಿ ನಿಂದಿಸಿದ್ದಾನೆ. ಈ ವೇಳೆ ಸಂಘದ ಅಧ್ಯಕ್ಷ ಮಹದೇವ ಸ್ವಾಮಿ ಮಧ್ಯಪ್ರವೇಶಿಸಿ ವಕೀಲರನ್ನು ಏಕೆ ನಿಂದಿಸುತ್ತಿರುವೆ ಎಂದು ಆತನನ್ನು ಪ್ರಶ್ನಿಸಿದಾಗ ಆತ ಏಕಾಏಕಿ ಮಹದೇವಸ್ವಾಮಿ ಅವರ ಮೇಲೆ ಹಲ್ಲೆ ನಡೆಸಿದ್ದಾನೆ ಎಂದು ಆರೋಪಿಸಿದರು.

ಇತ್ತೀಚಿನ ದಿನಗಳಲ್ಲಿ ವಕೀಲರ ಮೇಲೆ ಹಲ್ಲೆಯಂತಹ ಘಟನೆಗಳು ನಡೆಯುತ್ತಿದ್ದು, ರಕ್ಷಣೆ ಇಲ್ಲದಂತಾಗಿದೆ. ಇಂತಹ ಘಟನೆಗಳನ್ನು ಜಿಲ್ಲಾ ವಕೀಲರ ಸಂಘ ತೀವ್ರವಾಗಿ ಖಂಡಿಸುತ್ತದೆ ಇಂದಿನ ಸಭೆಯ ನಿರ್ಣಯದಂತೆ ಎಲ್ಲಾ ಸದಸ್ಯರು ನ್ಯಾಯಾಲಯದ ಕಲಾಪದಿಂದ ಹೊರಗುಳಿದು ನೊಂದ ವಕೀಲ ಮಿತ್ರನಿಗೆ ಬೆಂಬಲ ಸೂಚಿಸಲಾಗುತ್ತಿದೆ. ಆರೋಪಿತನಿಗೆ ಕಠಿಣ ಶಿಕ್ಷೆ ವಿಧಿಸಬೇಕು. ರಾಜ್ಯ ಸರ್ಕಾರವು ವಕೀಲರ ರಕ್ಷಣಾ ಕಾಯ್ದೆಯನ್ನು ಸಂಪೂರ್ಣವಾಗಿ ಜಾರಿಗೊಳಿಸುವ ಮೂಲಕ ವಕೀಲರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಒತ್ತಾಯಿಸಿದರು.



ವಕೀಲರ ಮೇಲೆ ಹಲ್ಲೆ ವಿರೋಧಿಸಿ ಜಿಲ್ಲಾ ವಕೀಲರು ಪ್ರತಿಭಟನೆ ನಡೆಸಿದರು.

ಡಾ. ಡಿ.ಸಿ.ನಂಜುಂಡ
ಸಹಪ್ರಾಧ್ಯಾಪಕರು, ಮೈಸೂರು ವಿವಿ
ಮೊ. 9008164514

ಅಪಾಯಕಾರಿ...! ಅಹಂಕಾರ...!!



ಮನುಷ್ಯ ಅಹಂನ ಹಸಿವಿಗೆ ಹತ್ತೂರಿನ ಔತಣವೂ ಒಂದು ತುತ್ತಿಗೆ ಸಮ...! ಈ ವಾಕ್ಯ ನಿಜಕ್ಕೂ ಆಧುನಿಕ ಮನುಷ್ಯನ ಮನೋವೈಜ್ಞಾನಿಕ ಸ್ವಭಾವವನ್ನು ಅತ್ಯಂತ ಗಂಭೀರವಾಗಿ ಸೆರೆ ಹಿಡಿದಿಡುತ್ತದೆ. ಇದು ಕೇವಲ ಒಂದು ಹೇಳಿಕೆ ಅಲ್ಲ; ಇತ್ತೀಚಿನ ಮನುಷ್ಯನ ಬದುಕಿನ ಅನೇಕ ಸಮಸ್ಯೆಗಳ ಮೂಲವನ್ನು ತೋರಿಸುವ ಕನ್ನಡಿ. ಮನುಷ್ಯನು ಎಷ್ಟೇ ಸಾಧನೆ ಮಾಡಿದರೂ, ಎಷ್ಟೇ ಸಂಪತ್ತು, ಸ್ಥಾನ, ಗೌರವ ಗಳಿಸಿದರೂ, ಅಹಂಕಾರ ಇರುವವರೆಗೆ ಅವನೊಳಗಿನ ನಾನು ಎಂಬ ಹಸಿವು ತಣಿಯದು. ಅಹಂಕಾರ ಎಂದರೆ ತೃಪ್ತಿಗೆ ವಿರುದ್ಧವಾದ ಶಕ್ತಿ. ಅಹಂಕಾರ ಎಂದರೆ ಕೇವಲ ಗರ್ವವಲ್ಲ. ಅದು ನಾನು ಎಂಬ ಭಾವನೆಯ ಅತಿಯಾದ ವಿಸ್ತರಣೆ. ನಾನು ಇದ್ದೇನೆ ಎನ್ನುವುದು ಸಹಜ ಮತ್ತು ಆರೋಗ್ಯಕರ. ಆದರೆ ನಾನೇ ಎಲ್ಲವೂ, ನನ್ನಿಗಿಂತ ಮೇಲು ಯಾರೂ ಇಲ್ಲ ಎಂಬ ಭಾವನೆ ಅಹಂಕಾರ. ಇದು ನಿಧಾನವಾಗಿ, ತಿಳಿಯದೇ ಮನುಷ್ಯನೊಳಗೆ ಬೇರು ಬಿಡುತ್ತದೆ. ಕೆಲವೊಮ್ಮೆ ಯಶಸ್ಸಿನ ಮೂಲಕ, ಕೆಲವೊಮ್ಮೆ ಅಧಿಕಾರದ ಮೂಲಕ, ಕೆಲವೊಮ್ಮೆ ಜ್ಞಾನದ ಮೂಲಕ ಅಹಂಕಾರ ಬೆಳೆದು ನಿಂತಿರುತ್ತದೆ. ಅಹಂಕಾರದ ಅತೀ ದೊಡ್ಡ ವಂಚನೆ ಎಂದರೆ ಅದು ಮನುಷ್ಯನಿಗೆ ತಾನೇ ಸರಿಯೆಂಬ ಭ್ರಮೆಗೆ ಕಾರಣವಾಗುತ್ತದೆ.

ಅಹಂಕಾರದ ಹಸಿವು ಏಕೆ ಅಂತ್ಯವಿಲ್ಲದ್ದು. ಕಾರಣ, ಅದು ಹೊರಗಿನ ಮಾನ್ಯತೆಯ ಮೇಲೆ ಬದುಕುತ್ತದೆ. ಸದಾ ಇನ್ನೊಬ್ಬರು ಮೆಚ್ಚಬೇಕು, ಹೊಗಳಬೇಕು, ಗೌರವಿಸಬೇಕು ಎಂಬ ಬಯಕೆ ಅಹಂಕಾರದ ಆಹಾರ. ಇಂದು ಒಂದು ಪ್ರಶಂಸೆ ಸಿಕ್ಕರೆ ನಾಳೆ ಅದಕ್ಕಿಂತ ದೊಡ್ಡ ಪ್ರಶಂಸೆ ಬೇಕು. ಇಂದು ಒಂದು ಹುದ್ದೆ ಸಿಕ್ಕರೆ ನಾಳೆ ಇನ್ನೂ ಎತ್ತರದ ಹುದ್ದೆ ಬೇಕು. ಈ ಸರಣಿಗೆ ಕೊನೆ ಇಲ್ಲ. ಹೀಗಾಗಿ ಹತ್ತೂರಿನ ಔತಣ ಅಂದರೆ ಅಪಾರ ಸಾಧನೆಗಳೂ ಅಹಂಕಾರದ ದೃಷ್ಟಿಯಲ್ಲಿ ಅಲ್ಪವಾಗಿಬಿಡುತ್ತವೆ. ಸಮಕಾಲೀನ ಸಮಾಜದಲ್ಲಿ ಅಹಂಕಾರಕ್ಕೆ ಅನೇಕ ರೂಪಗಳಿವೆ. ಸಾಮಾಜಿಕ ಜಾಲತಾಣಗಳು ಇದಕ್ಕೆ ಹೊಸ ವೇದಿಕೆಯಾಗಿವೆ. ಲೈಕ್‌ಗಳು, ಫಾಲೋವರ್ಸ್, ವೀಕ್ಷಣೆಗಳು ಇವೆಲ್ಲವೂ ಅಹಂಕಾರದ ಹಸಿವಿಗೆ ಹೊಸ ಆಹಾರ. ಇನ್ನೊಬ್ಬನ ಪೋಸ್ಟ್ ಹೆಚ್ಚು ಜನ ಮೆಚ್ಚಿದರೆ ಅಸಮಾಧಾನ. ತನ್ನ ಚಿತ್ರಕ್ಕೆ ಕಡಿಮೆ ಲೈಕ್ ಬಂದರೆ ನಿರಾಶೆ. ಹೀಗೆ ಮನುಷ್ಯ ತನ್ನ ಮೌಲ್ಯವನ್ನು ಹೊರಗಿನ ಪ್ರತಿಕ್ರಿಯೆಗಳಲ್ಲಿ ಅಳೆಯಲು ಶುರು ಮಾಡುತ್ತಾನೆ. ಇದು ಅಹಂಕಾರದ ಅತಿ ಸೂಕ್ಷ್ಮ ಆದರೆ ಅಪಾಯಕಾರಿ ರೂಪ.

ಉದಾಹರಣೆ, ಒಬ್ಬ ಅಧಿಕಾರಿ ಕಚೇರಿಯಲ್ಲಿ ತನ್ನ ಅಧೀನ ಸಿಬ್ಬಂದಿಯ ಸಲಹೆಗಳನ್ನು ನಿರಾಕರಿಸುತ್ತಾನೆ. ನನಗೆ ಇಷ್ಟು ವರ್ಷಗಳ ಅನುಭವ ಇದೆ, ನಿಮಗೆ ಏನು ಗೊತ್ತು ಎನ್ನುವ ಭಾವ. ಫಲಿತಾಂಶವಾಗಿ ತಪ್ಪಾದ ನಿರ್ಧಾರಗಳು, ತಂಡದಲ್ಲಿ ಅಸಮಾಧಾನ, ಕೆಲಸದ ಗುಣಮಟ್ಟದಲ್ಲಿ ಕುಸಿತ. ಆದರೆ ಅಧಿಕಾರಿಗೆ ತನ್ನ ತಪ್ಪು ಕಾಣುವುದಿಲ್ಲ. ಇದು ಅಹಂಕಾರದ ಅಂಧತ್ವ.

ಒಬ್ಬ ಉದ್ಯಮಿ ಮೊದಲ ಬಾರಿ ದೊಡ್ಡ ಲಾಭ ಗಳಿಸುತ್ತಾನೆ. ಸಂತೋಷವಾಗುತ್ತದೆ. ಆದರೆ ಕೆಲವೇ ದಿನಗಳಲ್ಲಿ ಇನ್ನೊಬ್ಬ ಉದ್ಯಮಿ ಇನ್ನಷ್ಟು ಲಾಭ ಗಳಿಸಿದ್ದಾನೆ ಎಂಬ ಸುದ್ದಿ ಕೇಳಿದಾಗ ಅಸಮಾಧಾನ. ತನ್ನ ಲಾಭವೂ ದೊಡ್ಡದೇ ಇದ್ದರೂ, ಇನ್ನೊಬ್ಬನ ಸಾಧನೆ ತನ್ನ ಸಂತೋಷವನ್ನು ಕಸಿದುಕೊಳ್ಳುತ್ತದೆ. ಹೀಗಾಗಿ ಹತ್ತೂರಿನ ಔತಣವೂ ಅಹಂಕಾರದ ಹಸಿವಿಗೆ ಒಂದು ತುತ್ತು ಮಾತ್ರ.

ಅಹಂಕಾರ ಇರುವವನು ಸದಾ ಹೋಲಿಕೆ ಮಾಡುತ್ತಾನೆ. ತನ್ನ ಜೀವನವನ್ನು ಇನ್ನೊಬ್ಬನ ಜೀವನದೊಂದಿಗೆ ಹೋಲಿಸುತ್ತಾನೆ. ಈ ಹೋಲಿಕೆ ಎಂದಿಗೂ ನ್ಯಾಯಸಮ್ಮತವಾಗುವುದಿಲ್ಲ. ಒಬ್ಬ ಉದ್ಯೋಗಿ ಉತ್ತಮ ಸಂಬಳ ಪಡೆಯುತ್ತಾನೆ. ಆದರೆ ಅವನ ಸ್ನೇಹಿತ ಇನ್ನೂ ಹೆಚ್ಚು ಸಂಬಳ ಪಡೆಯುತ್ತಿದ್ದಾನೆ ಎಂಬುದು ಗೊತ್ತಾದಾಗ ಸಂತೋಷ ಮಾಯವಾಗುತ್ತದೆ. ತನ್ನ ಜೀವನದಲ್ಲಿರುವ ಅನುಕೂಲಗಳು, ಸಾಧನೆಗಳು ಅಪ್ರಮುಖವಾಗುತ್ತವೆ. ಅಸೂಯೆ, ಅಸಮಾಧಾನ, ಒಳಗಿನ ಅಶಾಂತಿ ಹೆಚ್ಚಾಗುತ್ತದೆ. ಇದು ಅಹಂಕಾರದಿಂದ ಹುಟ್ಟುವ ದುಃಖ.

ಇಂದಿನ ಕಾಲದಲ್ಲಿ ಸಾಮಾಜಿಕ ಜಾಲತಾಣಗಳು ಅಹಂಕಾರದ ಹಸಿವಿಗೆ ಹೊಸ ವೇದಿಕೆಗಳಾಗಿವೆ. ಲೈಕ್‌ಗಳು, ಫಾಲೋವರ್ಸ್, ವೀಕ್ಷಣೆಗಳು ಇವೆಲ್ಲವೂ ಮನುಷ್ಯನ ಮೌಲ್ಯವನ್ನು ಅಳೆಯುವ ಅಳತೆ ಗೋಲುಗಳಾಗಿ ಬದಲಾಗಿವೆ. ಉದಾಹರಣೆ, ಒಬ್ಬ ಯುವತಿ ಸಾಮಾಜಿಕ ಜಾಲತಾಣದಲ್ಲಿ ತನ್ನ ಚಿತ್ರವನ್ನು ಹಂಚಿಕೊಳ್ಳುತ್ತಾಳೆ. ಹೆಚ್ಚು ಲೈಕ್‌ಗಳು ಬಂದರೆ ಸಂತೋಷ, ಕಡಿಮೆ ಬಂದರೆ ನಿರಾಶೆ. ತನ್ನ ಸೌಂದರ್ಯ, ಮೌಲ್ಯ, ಆತ್ಮಗೌರವ ಎಲ್ಲವನ್ನೂ ಲೈಕ್‌ಗಳ ಸಂಖ್ಯೆಯೊಂದಿಗೆ ತೂಕ ಹಾಕಲು ಶುರುಮಾಡುತ್ತಾಳೆ. ಇದು ಅಹಂಕಾರದ ಸೂಕ್ಷ್ಮ ಆದರೆ ಅಪಾಯಕಾರಿ ರೂಪ. ಏಕೆಂದರೆ ಇಲ್ಲಿ ಮನುಷ್ಯ ತನ್ನ ಅಸ್ತಿತ್ವವನ್ನೇ ಹೊರಗಿನ ಪ್ರತಿಕ್ರಿಯೆಗೆ ಒಪ್ಪಿಸುತ್ತಾನೆ.

ಅಹಂಕಾರ ಸಂಬಂಧಗಳ ಅತೀ ದೊಡ್ಡ ಶತ್ರು. ಕುಟುಂಬದಲ್ಲಿ, ಸ್ನೇಹದಲ್ಲಿ, ದಾಂಪತ್ಯದಲ್ಲಿ ನಾನೇ ಸರಿ ಎಂಬ ಭಾವನೆ ಬಿರುಕು ಮೂಡಿಸುತ್ತದೆ. ಪತಿಪತ್ನಿಯ ನಡುವೆ ಒಂದು ಸಣ್ಣ ವಿಚಾರದಲ್ಲಿ ಭಿನ್ನಾಭಿಪ್ರಾಯ. ಇಬ್ಬರಲ್ಲೂ ಅಹಂಕಾರ ಇದ್ದರೆ, ಯಾರೂ ಮೊದಲಿಗೆ ಕ್ಷಮೆ ಕೇಳುವುದಿಲ್ಲ. ನಾನು ಯಾಕೆ ತಗ್ಗಬೇಕು ಎಂಬ ಭಾವ. ವಿಷಯ ದೊಡ್ಡದಾಗುತ್ತದೆ, ಮಾತು ಮಾತಾಗಿ ಜಗಳವಾಗುತ್ತದೆ. ಪ್ರೀತಿಯ ಸಂಬಂಧ ಅಹಂಕಾರದ ಗೋಡೆಯ ಮುಂದೆ ಸೋಲುತ್ತದೆ. ತಂದೆ ನಾನು ಅನುಭವಿಸಿದ ಜೀವನವೇ ಸರಿ ಎಂದು ಮಕ್ಕಳ ಮಾತು ಕೇಳಲು ನಿರಾಕರಿಸುತ್ತಾನೆ. ಮಕ್ಕಳು ನಮಗೆ ನಮ್ಮ ಜೀವನ ಗೊತ್ತು ಎಂದು ತಿರಸ್ಕರಿಸುತ್ತಾರೆ. ಸಂವಾದ ಇಲ್ಲದಾಗ ಅಂತರ ಹೆಚ್ಚಾಗುತ್ತದೆ. ಇಲ್ಲಿ ಸಮಸ್ಯೆ ಪ್ರೀತಿಯ ಕೊರತೆಯಲ್ಲ, ವ್ಯಕ್ತಿಗಳ ಅಹಂಕಾರದ ಹೆಚ್ಚಳ.

ಅಹಂಕಾರ ಇರುವವನು ಸದಾ ಹೋಲಿಕೆ ಮಾಡುತ್ತಾನೆ. ತನ್ನ ಜೀವನವನ್ನು ಇನ್ನೊಬ್ಬನ ಜೀವನದೊಂದಿಗೆ ಹೋಲಿಸುತ್ತಾನೆ. ಈ ಹೋಲಿಕೆ ಎಂದಿಗೂ ನ್ಯಾಯಸಮ್ಮತವಾಗುವುದಿಲ್ಲ. ಒಬ್ಬ ಉದ್ಯೋಗಿ ಉತ್ತಮ ಸಂಬಳ ಪಡೆಯುತ್ತಾನೆ. ಆದರೆ ಅವನ ಸ್ನೇಹಿತ ಇನ್ನೂ ಹೆಚ್ಚು ಸಂಬಳ ಪಡೆಯುತ್ತಿದ್ದಾನೆ ಎಂಬುದು ಗೊತ್ತಾದಾಗ ಸಂತೋಷ ಮಾಯವಾಗುತ್ತದೆ. ತನ್ನ ಜೀವನದಲ್ಲಿರುವ ಅನುಕೂಲಗಳು, ಸಾಧನೆಗಳು ಅಪ್ರಮುಖವಾಗುತ್ತವೆ. ಅಸೂಯೆ, ಅಸಮಾಧಾನ, ಒಳಗಿನ ಅಶಾಂತಿ ಹೆಚ್ಚಾಗುತ್ತದೆ. ಇದು ಅಹಂಕಾರದಿಂದ ಹುಟ್ಟುವ ದುಃಖ.

ಒಬ್ಬ ಸನ್ಯಾಸಿ ಹೊರಗೆ ಎಲ್ಲವನ್ನೂ ತ್ಯಜಿಸಿದ್ದಾನೆ. ಆದರೆ, ನಾನು ದೊಡ್ಡ ಸನ್ಯಾಸಿ ಎಂಬ ಭಾವ ಇದ್ದರೆ, ಅಹಂಕಾರ ಇನ್ನೂ ಜೀವಂತ. ಅಹಂಕಾರ ರೂಪ ಬದಲಾಯಿಸುತ್ತದೆ. ಆದರೆ ಅಸ್ತಿತ್ವ ಕಳೆದುಕೊಳ್ಳುವುದಿಲ್ಲ. ಅಹಂಕಾರವನ್ನು ಸಂಪೂರ್ಣವಾಗಿ ನಾಶಮಾಡುವುದು ಬಹುಶಃ ಸಾಧ್ಯವಿಲ್ಲ. ಆದರೆ ಅದನ್ನು ಅರಿತು, ನಿಯಂತ್ರಿಸಿ, ಸರಿಯಾದ ಸ್ಥಾನದಲ್ಲಿ ಇಡಬಹುದು. ಇದರ ಮೊದಲ ಹೆಜ್ಜೆ ಜಾಗೃತಿ. ಅಹಂಕಾರ ಮನುಷ್ಯನ ಸಂಬಂಧಗಳನ್ನು ಹಾಳುಮಾಡುತ್ತದೆ. ಕುಟುಂಬದಲ್ಲಿ ಅಹಂಕಾರ ಇದ್ದರೆ ಅಲ್ಲಿ ಸಂವಾದಕ್ಕಿಂತ ಸಂಘರ್ಷ ಹೆಚ್ಚಾಗುತ್ತದೆ. ಪತಿ–ಪತ್ನಿಯರ ನಡುವೆ, ತಂದೆ–ಮಕ್ಕಳ ನಡುವೆ, ಸಹೋದರರ ನಡುವೆ ನಾನೇ ಸರಿ ಎಂಬ ಭಾವನೆ ಬಿರುಕು ಮೂಡಿಸುತ್ತದೆ. ಕೇಳುವ ಮನಸ್ಸು ಇಲ್ಲದಾಗ, ಒಪ್ಪಿಕೊಳ್ಳುವ ಮನಸ್ಸು ಇಲ್ಲದಾಗ ಸಂಬಂಧಗಳು ಉಸಿರುಗಟ್ಟುತ್ತವೆ. ಅನೇಕ ಸಂಬಂಧಗಳು ಪ್ರೀತಿಯಿಂದ ಅಲ್ಲ, ಅಹಂಕಾರದ ಕಾರಣದಿಂದ ಮುರಿದು ಬೀಳುತ್ತವೆ.



ಅಹಂಕಾರ ಮನುಷ್ಯನ ದುಃಖಕ್ಕೂ ಕಾರಣ. ಅಹಂಕಾರ ಇರುವವನು ಸದಾ ತಾನೇ ಹೆಚ್ಚು ಎಂದುಕೊಳ್ಳುತ್ತಾನೆ. ತನ್ನ ಜೀವನವನ್ನು ಇನ್ನೊಬ್ಬನ ಸುಖ–ಶಾಂತಿಯ ಜೊತೆ ತೂಕ ಹಾಕುತ್ತಾನೆ. ಈ ಹೋಲಿಕೆ ಸರಿಯೇ ಎಂದು ಆತನಿಗೆ ಅನಿಸುವುದೇ ಇಲ್ಲ. ಯಾಕೆಂದರೆ ಪ್ರತಿಯೊಬ್ಬನ ಜೀವನವೂ ವಿಭಿನ್ನ. ಆದರೆ ಅಹಂಕಾರ ಈ ಸತ್ಯವನ್ನು ಒಪ್ಪುವುದಿಲ್ಲ. ಹೀಗಾಗಿ ಅಸೂಯೆ, ಅಸಮಾಧಾನ, ಅಶಾಂತಿ ಮನುಷ್ಯನ ಮನಸ್ಸನ್ನು ಆವರಿಸಿಕೊಳ್ಳುತ್ತವೆ. ಹೊರಗೆ ಎಲ್ಲವೂ ಚೆನ್ನಾಗಿದ್ದರೂ ಆತನಿಗೆ ಒಳಗೆ ಶಾಂತಿ ಇರುವುದಿಲ್ಲ.


ಆಧ್ಯಾತ್ಮಿಕ ದೃಷ್ಟಿಯಿಂದ ಅಹಂಕಾರವೇ ಬಂಧನ. ನಾನು ಮತ್ತು ನನ್ನದು ಎಂಬ ಭಾವನೆ ಮನುಷ್ಯನನ್ನು ಸೀಮಿತಗೊಳಿಸುತ್ತದೆ. ಉಪನಿಷತ್ತುಗಳು ಹೇಳುವಂತೆ, ಅಹಂಕಾರ ಮಿಥ್ಯೆ, ತಾತ್ಕಾಲಿಕ. ಆದರೆ ಮನುಷ್ಯ ಅದನ್ನೇ ಶಾಶ್ವತವೆಂದು ಭಾವಿಸಿ ಅದರ ಹಿಂದೆ ಸದಾ ಓಡುತ್ತಾನೆ. ಬುದ್ಧನು ಹೇಳಿದಂತೆ, ತೃಷ್ಣೆಯೇ ದುಃಖದ ಮೂಲ. ಅಹಂಕಾರವೂ ಒಂದು ತೃಷ್ಣೆಯೇ ಗೌರವದ, ಅಧಿಕಾರದ, ಗುರುತಿನ ತೃಷ್ಣೆ. ಆದರೆ ಅಹಂಕಾರವಿಲ್ಲದೆ ಬದುಕುವುದು ಸಾಧ್ಯವೇ ಅಹಂಕಾರವನ್ನು ಸಂಪೂರ್ಣವಾಗಿ ನಾಶಮಾಡುವುದು ಮನುಷ್ಯನಿಗೆ ಬಹುಶಃ ಸಾಧ್ಯವಿಲ್ಲ. ಇದು ನನ್ನ ಅಗತ್ಯವೇ, ಅಥವಾ ನನ್ನ ಅಹಂಕಾರದ ಬೇಡಿಕೆಯೇ ಎಂದು ತಾನೇ ಪ್ರಶ್ನಿಸಿಕೊಳ್ಳುವ ಅಭ್ಯಾಸ. ಈ ಪ್ರಶ್ನೆ ಅಹಂಕಾರದ ಹಸಿವಿಗೆ ಬ್ರೇಕ್ ಹಾಕುತ್ತದೆ. ವಿನಯ ಅಹಂಕಾರದ ಪ್ರತಿಕಾರ. ವಿನಯ ಎಂದರೆ ತಾನೇ ಸಣ್ಣವನು ಎನ್ನುವುದಲ್ಲ, ತಾನು ಸತ್ಯದ ಮುಂದೆ ಚಿಕ್ಕವನು ಎನ್ನುವುದನ್ನು ಒಪ್ಪಿಕೊಳ್ಳುವುದು. ಕೃತಜ್ಞತೆ ಅಹಂಕಾರದ ಮತ್ತೊಂದು ಔಷಧಿ.

ತನ್ನ ಬಳಿ ಇಲ್ಲದುದನ್ನು ನೋಡುವ ಬದಲು, ಇರುವುದನ್ನು ಗುರುತಿಸುವ ಮನೋಭಾವ. ಯಾವಾಗ ಮನುಷ್ಯ ನನಗೆ ಇನ್ನೇನು ಬೇಕು ಎನ್ನುವುದಕ್ಕಿಂತ ನನಗೆ ಈಗಿರುವುದು ಸಾಕು ಎಂದು ಭಾವಿಸಲು ಕಲಿಯುತ್ತಾನೋ, ಅಹಂಕಾರದ ಹಿಡಿತ ಅಲ್ಲಿ ಸಡಿಲವಾಗುತ್ತದೆ. ಅಹಂಕಾರ ಹೊರಗಿನ ಮಾನ್ಯತೆಯ ಮೇಲೆ ಬದುಕುತ್ತದೆ. ಇನ್ನೊಬ್ಬರು ಮೆಚ್ಚಬೇಕು, ಹೊಗಳಬೇಕು, ಗೌರವಿಸಬೇಕು ಇದು ಅದರ ಆಹಾರ. ಈ ಆಹಾರ ಎಷ್ಟು ಸಿಕ್ಕರೂ ಸಾಕಾಗದು. ಒಂದು ಪ್ರಶಂಸೆಯ ನಂತರ ಮತ್ತೊಂದು ಬೇಕು. ಒಂದು ಸಾಧನೆಯ ನಂತರ ಇನ್ನೊಂದು ದೊಡ್ಡ ಸಾಧನೆ ಬೇಕು.


ಹತ್ತೂರಿನ ಔತಣವೂ ಒಂದು ತುತ್ತಿಗೆ ಸಮ ಎಂಬ ಮಾತು ನಮ್ಮನ್ನು ಸದಾ ಎಚ್ಚರಿಸುತ್ತದೆ. ಅಹಂಕಾರದ ದಾರಿಯಲ್ಲಿ ಸಾಗಿದರೆ ತೃಪ್ತಿ ಕೊನೆವರೆವಿಗೂ ಸಿಗದು. ಆದರೆ ಸರಳತೆ, ವಿನಯ ಮತ್ತು ತೃಪ್ತಿಯ ದಾರಿಯನ್ನು ಹಿಡಿದರೆ, ಒಂದು ತುತ್ತೂ ಜೀವನಕ್ಕೆ ರಸ ನೀಡಬಹುದು. ನಿಜವಾದ ಶ್ರೀಮಂತಿಕೆ ಹೊರಗಿನಲ್ಲಿ ಇಲ್ಲ; ಒಳಗಿನ ಶಾಂತಿಯಲ್ಲಿ ಇದೆ. ಅದನ್ನು ಅರಿತ ಕ್ಷಣದಿಂದಲೇ ಅಹಂಕಾರದ ಅಂತ್ಯವಿಲ್ಲದ ಹಸಿವು ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ತನ್ನ ಬಳಿ ಇಲ್ಲದುದನ್ನು ನೋಡುವ ಬದಲು, ಇರುವುದನ್ನು ಕಾಣುವ ಸಮಷ್ಟಿ ದೃಷ್ಟಿ ನಮಗೆ ಮುಖ್ಯ.

ಮಕ್ಕಳ ಚಿತ್ರಕಥೆ — 'ಕೋತಿ ಮತ್ತು ಮೊಸಳೆ' (ಕಳೆದ ಸಂಚಿಕೆಯಿಂದ)


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಈಗ ಕೋತಿಗೆ ತಿಳಿಯಿತು ಅದರ ಪ್ರಾಣಕ್ಕೆ ಕುತ್ತು ಇರುವುದೆಂದು. ಕೋತಿಯು ಆಲೋಚಿಸಿ ಒಂದು ಉಪಾಯ ಮಾಡಿ ಮೊಸಳೆಗೆ 'ಹಾಗೇ ಆಗಲಿ. ಆಪ್ತಮಿತ್ರನಾಗಿ ನಿನ್ನ ಆಸೆ ಪೂರೈಸುವೆ ನಮ್ಮ ಹೃದಯವು ಅತ್ಯಂತ ರುಚಿಕರವಾದುದ್ದರಿಂದ ಅದನ್ನು ಮರದ ಹಿಂಭಾಗ ರಹಸ್ಯ ಸ್ಥಳದಲ್ಲಿ ಇಟ್ಟಿರುವೆ. ಹಾಗಾಗಿ ಈಗ ನೀನು ನನ್ನನ್ನು ಮತ್ತೆ ದಡಕ್ಕೆ ಕರೆದುಕೊಂಡು ಹೋಗಬೇಕಾಗುತ್ತದೆ' ಎಂದಿತು.




ಕೋತಿಯ ಮಾತಿಗೆ ಮೊಸಳೆಯು ಸಂತೋಷದಿಂದಲೇ ಒಪ್ಪಿಕೊಂಡು ವೇಗವಾಗಿ ಅದರ ವಾಸಸ್ಥಾನಕ್ಕೆ ಕೊಂಡೊಯ್ದು ಬಿಟ್ಟಿತು. ನದಿಯ ತೀರ ಸಮೀಪಿಸುತ್ತಿದ್ದಂತೆಯೇ ಕೋತಿಯು ನೆಗೆದು ಮರವನ್ನೇರಿ ಕುಳಿತುಬಿಟ್ಟಿತು. ಹೀಗೆ ಕುಳಿತ ಕೋತಿಯು ಮನದಲ್ಲೇ ಆಪ್ತಮಿತ್ರನ ನಂಬಿಕೆ ದ್ರೋಹದ ಬಗ್ಗೆ ಸಿಟ್ಟಾಗಿ ಮೊಸಳೆಗೆ ತಕ್ಕ ಪಾಠ ಕಲಿಸಬೇಕೆಂದು ನಿರ್ಧರಿಸಿತು.




ನಂತರ ಕೋತಿಯು ಮರದಿಂದ ಒಂದು ಸಣ್ಣ ರೆಂಬೆಯನ್ನು ತುಂಡು ಮಾಡಿ ಹಿಡಿದುಕೊಂಡು ನೆಲಕ್ಕೆ ಜಿಗಿದು, ಮೊಸಳೆಯ ಬಳಿ ಬಂದು 'ನಮ್ಮ ಹೃದಯವಿದೆಯಲ್ಲಾ ಅದು ವಯಸ್ಸಾದಂತೆಲ್ಲಾ ದೊಡ್ಡದಾಗುತ್ತಾ ಹೋಗುವುದು. ನನ್ನ ವಯಸ್ಸು ಜಾಸ್ತಿಯಾಗಿರುವುದರಿಂದ ನನ್ನ ಹೃದಯವೂ ಕೂಡ ಬಹಳ ದೊಡ್ಡದಾಗಿದೆ. ನೀನೀಗ ನುಂಗಲಾರೆ..!' ಎಂದಿತು.



ಕೋತಿಯು ತನ್ನ ಮಾತನ್ನು ಮುಂದುವರೆಸುತ್ತಾ, 'ಏಕೆಂದರೆ ನಿನ್ನ ಬಾಯಿಯನ್ನು ಅಷ್ಟು ಗಾತ್ರಕ್ಕೆ ತೆರೆಯಲಾಗುವುದಿಲ್ಲಾ..!' ಎಂದಿತು. ಆಗ ಮೊಸಳೆಯು 'ಅರೆ, ಇದೇನು ಹೇಳುವೆ ನನ್ನ ಬಾಯಿ ದೊಡ್ಡದಲ್ಲವೇ..? ನಾನದನ್ನು ಇಷ್ಟ ಬಂದಷ್ಟು ಗಾತ್ರಕ್ಕೆ ತೆರೆಯಬಲ್ಲೆ..!' ಎಂದಿತು. ಆಗ ಕೋತಿಯು 'ಓ... ಹಾಗೋ... ಹಾಗಾದರೆ ನಿನ್ನ ಬಾಯಿ ತೆರೆದು ತೋರಿಸು..!' ಎನ್ನಲು, ಮೊಸಳೆಯು ತನ್ನ ಬಾಯಿಯನ್ನು ಅಗಲಿಸಿ ತೋರಿಸಿತು.



ಕೋತಿಯು 'ಅರೆ ಅಷ್ಟೇ ಅಲ್ಲಾ. ನನ್ನ ಹೃದಯವು ಇನ್ನೂ ದೊಡ್ಡದಿದೆ. ಆದ್ದರಿಂದ ನೀನು ಇನ್ನೂ ಸ್ವಲ್ಪ ಅಗಲವಾಗಿ ತೆರೆದು ತೋರಿಸು..! ಎಂದು ಕೇಳಲು, ಮೊಸಳೆಯು ತನಗೆ ಸಾಧ್ಯವಾದಷ್ಟು ದೊಡ್ಡದಾಗಿ ಬಾಯಿ ತೆರೆಯಿತು. ಇದೇ ಸಮಯಕ್ಕಾಗಿ ಕಾಯುತ್ತಿದ್ದ ಕೋತಿಯು ತಾನು ತಂದಿದ್ದ ರೆಂಬೆಯನ್ನು ಮೊಸಳೆಯ ಬಾಯಲ್ಲಿ ನೀಳವಾಗಿ ಇಟ್ಟು ಸಿಲುಕಿಸಿಬಿಟ್ಟಿತು.



ಈಗ ಮೊಸಳೆಯ ಪರಿಸ್ಥಿತಿ ಬಾಯಿ ಮುಚ್ಚಲು–ಆಗದೇ ತೆರೆಯಲೂ ಆಗದೇ ತೀವ್ರ ವೇದನೆ ಅನುಭವಿಸುತ್ತಿತ್ತು. ಕಡೆಗೆ ತನ್ನ ಸ್ನೇಹಿತ ಕೋತಿಗೆ 'ಈ ರೆಂಬೆಯನ್ನು ತೆಗೆದು ನನಗೆ ಸಹಾಯ ಮಾಡು...!' ಎಂದು ಅಂಗಲಾಚಿತು. ಆಗ ಕೋತಿಯು ಈಗ ಗೆಳೆತನದ ಮಾತನಾಡುತ್ತಿದ್ದೀಯಲ್ಲಾ. ನನ್ನನ್ನು ಕೊಂದು ತಿನ್ನಲು ನಿರ್ಧರಿಸಿದಾಗ ಈ ಮಾತು ಎಲ್ಲಿ ಹೋಗಿತ್ತು..? ನಿನ್ನ ತಪ್ಪಿಗೆ ಶಿಕ್ಷೆ ಅನುಭವಿಸು ಹೋಗು..!' ಎಂದು ಹೇಳುತ್ತಾ ಕೋತಿಯು ಮರವನ್ನೇರಿತು.

ನೀತಿ:– 'ಸ್ನೇಹಿತರಲ್ಲಿ ವಂಚನೆ ಬುದ್ಧಿ ಇರಬಾರದು. ಕುತಂತ್ರಗಳು ತಿರುಮಂತ್ರಗಳಾಗುತ್ತವೆ'.

ವಾರಭವಿಷ್ಯ

8.2.2026 ರಿಂದ 14.2.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ : ರವಿ–ಮಕರ , ಚಂದ್ರ–ತುಲಾ, ವೃಶ್ಚಿಕ, ಧನುಸ್ಸು, ಕುಜ– ಮಕರ, ಬುಧ–ಕುಂಭ, ಗುರು–ಮಿಥುನ, ಶುಕ್ರ–ಕುಂಭ, ಶನಿ–ಮೀನ, ರಾಹು–ಕುಂಭ ಮತ್ತು ಕೇತು– ಸಿಂಹ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೊ,ಅ)
ತಾತ್ಕಾಲಿಕ ಉದ್ಯೋಗ ಸದ್ಯದ ಪರಿಸ್ಥಿತಿಯಲ್ಲಿ ಸಮಾಧಾನ ತಂದುಕೊಡಲಿದೆ. ಒಮ್ಮೊಮ್ಮೆ ಪರರಿಗೆ ಸಹಾಯ ನಿಮಗೆ ಸಮಸ್ಯೆ ತಂದೀತು. ಸಣ್ಣ ಮಕ್ಕಳ ಆರೋಗ್ಯದ ಬಗ್ಗೆ ಜಾಗ್ರತೆ ಇರಲಿ. ವಾರದ ಉತ್ತರಾರ್ಧಕ್ಕೆ ವ್ಯಾಪಾರ ವ್ಯವಹಾರಗಳು ತಕ್ಕ ಮಟ್ಟಿಗೆ ನಡೆದುಕೊಂಡು ಹೋಗುತ್ತವೆ. ಅನಗತ್ಯ ಸಂಚಾರಗಳು ದೇಹಾಯಾಸಕ್ಕೆ ಕಾರಣವಾಗುವುದು. ಶಿಕ್ಷಕ ವರ್ಗದವರಿಗೆ ಮೇಲಧಿಕಾರಿಗಳ ಕಿರಿಕಿರಿ.
ಶ್ರೀ ವಿನಾಯಕ ಪ್ರಾರ್ಥನೆ. ಶುಭ ಸಂಖ್ಯೆ–3

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ನಿಮ್ಮ ಸದಾಚಾರ ಸಂಪನ್ನತೆ ಹೊಸ ನೆಂಟಸ್ತನಗಳಿಗೆ ಅನುವು ಮಾಡಿಕೊಡುವುದು. ಸ್ವತ್ತು ವಿಷಯಗಳಲ್ಲಿ ಆಶಾದಾಯಕ ಸೂಚನೆಗಳಿಂದ ಮಾನಸಿಕ ನೆಮ್ಮದಿ. ಧಾರ್ಮಿಕ ಗ್ರಂಥಾಧ್ಯಯನದ ಕಡೆಗೆ ಒಲವು. ಉದ್ಯೋಗ ಅರಸುವವರಿಗೆ ಉನ್ನತಾಧಿಕಾರಿಗಳ ಭೇಟಿಯಿಂದ ಕಾರ್ಯಸಾಫಲ್ಯತೆ, ಉತ್ತಮ ವಾಕ್ಪಟುತ್ವದಿಂದ ನಿಮಗೆ ಬೇಕಾದ್ದನ್ನು ಸಾಧಿಸಿಕೊಳ್ಳುವಿರಿ. ಗುರು ಜನರ ಆಶೀರ್ವಾದ ದೊರಕುವುದು.
ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ –5

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ಹಿತ ಚಿಂತಕರ ನೆರವು ನಿಮಗೆ ದೊರೆಯಲಿದೆ. ಹಳೆ ಸಾಲಗಳ ಮರುಪಾವತಿಗೆ ಶ್ರಮಿಸುವಿರಿ. ಅಪೇಕ್ಷಿತ ಕೆಲಸಗಳು ಮಂದಗತಿಯಲ್ಲಿ ಸಾಗುವುದರಿಂದ ಮನಸ್ಸಿಗೆ ಬೇಸರ. ಮನೆ ಮಂದಿಯ ಬಗ್ಗೆ ಅನಾದರ ತೋರುವುದರಿಂದ ಮನೆಯಲ್ಲಿ ಬಿಗುವಿನ ವಾತಾವರಣ. ನಿಮ್ಮ ಹೆಸರಿಗೆ ಧಕ್ಕೆ ತರುವುದರೊಂದಿಗೆ ಸಂಬಂಧ ಹೊಂದಬೇಡಿ. ವಾರದ ಕಡೆಗೆ ಶುಭ ಸಂದೇಶ ಬರುವುದು.
ಶ್ರೀ ವಿಷ್ಣು ಪ್ರಾರ್ಥನೆ. ಶುಭ ಸಂಖ್ಯೆ –2

ಕಟಕ (ಹೊ,ಹು,ಹೆ,ಡ,ಡಿ,ಡು)
ಗೃಹ ಕೃತ್ಯಗಳು, ಮಕ್ಕಳ ಸಂಬಂಧದ ಕೆಲಸ ಕಾರ್ಯಗಳು ಕೈಗೂಡುವುದು. ನೂತನ ಕಾರ್ಯಾರಂಭದ ಬಗ್ಗೆ ಆತುರ ಪಡಬೇಡಿ. ನಿಮ್ಮ ಕಾರ್ಯ ಕ್ಷೇತ್ರದಲ್ಲಿ ಶತ್ರುಗಳ ಹಿನ್ನಡೆ ಸಮಾಧಾನ ತಂದರೂ ಜಾಗರೂಕರಾಗಿರಿ. ಸಾಫ್ಟ್‌ವೇರ್ ಉದ್ಯೋಗಿಗಳಿಗೆ ಉದ್ಯೋಗದ ಬದಲಾವಣೆಯ ಅವಕಾಶವಿರುತ್ತದೆ. ಸಪ್ತಾಹದ ಕಡೆಗೆ ಸರ್ಕಾರಿ ಕೆಲಸ ಕಾರ್ಯಗಳು ನಿಮಗೆ ಅನುಕೂಲವಾಗಿರುತ್ತವೆ.
ಶ್ರೀ ನವದುರ್ಗಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ –4

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ಕುಟುಂಬ ಸದಸ್ಯರೊಂದಿಗೆ ನಿಮ್ಮ ಸಂಬಂಧಗಳು ಸುಧಾರಿಸುತ್ತವೆ. ಇದರಿಂದ ಕುಟುಂಬ ಪರಿಸರದಲ್ಲಿ ಶಾಂತಿಯ ವಾತಾವರಣ ಇರುತ್ತದೆ. ನೂತನ ವಸ್ತ್ರಾಭರಣ ಖರೀದಿಸುವಿರಿ. ಗುರುಕೃಪೆಯಿಂದ ಆರಾಮವಾಗಿ ಹರ್ಷಚಿತ್ತರಾಗಿ ಇರುತ್ತೀರಿ. ಗುರುಗಳ ಜ್ಞಾನದ ಲಾಭವನ್ನು ಪಡೆದುಕೊಳ್ಳಲು ಹಿಂಜರಿಯಬೇಡಿ. ಅಷ್ಟಮ ಶನಿಯ ಕಾರಣ ನಿಮ್ಮ ಆರೋಗ್ಯ ಪರಿಸ್ಥಿತಿ ಹದಗೆಡಬಹುದು.
ಶ್ರೀ ಔದುಂಬರ ವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ –9

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ವಾರದಾರಂಭಕ್ಕೆ ಅನಾವಶ್ಯಕ ಜಗಳಗಳಿಂದ ಜೀವನದ ಸರಸ ಸಮಯ ಹಾಳಾಗದಂತೆ ಎಚ್ಚರ ವಹಿಸಿ, ಇದಕ್ಕಾಗಿ ನೀವು ಸ್ವಪ್ರತಿಷ್ಠೆಯನ್ನು ತ್ಯಾಗ ಮಾಡಿದರೆ ಮನಃಕ್ಲೇಶಗಳು ದೂರವಾಗುತ್ತವೆ. ವಾರ ಮಧ್ಯಾನಂತರ ದೇಹ ಸುಖ, ಮಿತ್ರರ ಸಮಾಗಮ, ಧನಲಾಭಗಳು ಉಂಟಾಗುತ್ತವೆ. ಅಧಿಕಾರಿ ವರ್ಗದವರ ಕೃಪಾದೃಷ್ಟಿಯಿಂದ ಕಾರ್ಯಸಾಧನೆ. ಸಂಚಾರಿ ನಿಯಮ ಮೀರಿ ದಂಡ ಪಾವತಿಸಬೇಕಾಗುತ್ತದೆ.
ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ–6

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ವ್ಯಾಪಾರ ವ್ಯವಹಾರಗಳು ನಿರೀಕ್ಷಿತ ಹಾದಿಯಲ್ಲಿ ಸಾಗಲು ನಿಮ್ಮ ರಾಶಿಗೆ ಬಂದ ಚಂದ್ರನ ಕೃಪೆ ಇದೆ. ಹೊಸ ಹೂಡಿಕೆಗಳು ಲಾಭವನ್ನು ತರಲಿವೆ. ಗುರು–ಹಿರಿಯರ ಹಾಗೂ ಅನುಭವಿಗಳ ಮಾರ್ಗದರ್ಶನ ದೊರಕುವುದು. ಕೆಲವೊಂದು ಮನದ ಬೇಗುದಿಗಳೂ ನಿವಾರಣೆಯಾಗುವುದು. ಧೈರ್ಯಶಾಲಿಗಳೆನಿಸಿ ಸಮಾಜದಲ್ಲಿ ಮನ್ನಣೆ ಗಳಿಸುವಿರಿ. ವಾರದ ಕಡೆಗೆ ಶ್ರೀಮತಿಯಲ್ಲಿ ವಿರಸ ಉಂಟಾದೀತು.
ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–9

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ಯತ್ನ ಕಾರ್ಯಗಳು ಸಫಲವಾಗಲು ತಾಳ್ಮೆಯ ಅಗತ್ಯವಿದೆ. ವಾಮ ಮಾರ್ಗದಿಂದ ಧನಲಾಭವಾಗುತ್ತದೆ. ಐಷಾರಾಮಿ ವಸ್ತುಗಳನ್ನು ಖರೀದಿಸುವಿರಿ. ನಿಮ್ಮ ಬುದ್ಧಿಯಲ್ಲಿ ಚುರುಕುತನ ಕಾಣಬರುವುದು. ಹೆಂಗಳೆಯರಲ್ಲಿ ಜನಾನುರಾಗಿಗಳಾಗುವಿರಿ. ಮಿತ್ರರ ಮಿಲನ, ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ನಡೆಯುವುದು. ಪಂಚಮ ಶನಿಯಿಂದ ಆರೋಗ್ಯದಲ್ಲಿ ಏರು–ಪೇರು ಉಂಟಾದೀತು. ಸಟ್ಟಾ, ಜೂಜುಗಳಿಂದ ದೂರವಿರಿ.
ಶ್ರೀ ಸುಬ್ರಮಣ್ಯನಿಗೆ ಕೆಂಪು ಕಣಗಿಲೆ ಹೂವು ಸಮರ್ಪಣೆ. ಶುಭ ಸಂಖ್ಯೆ –3

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ಉಪಾಯ ಬಲ್ಲವನಿಗೆ ಅಪಾಯವಿಲ್ಲ ಎಂಬ ಗಾದೆಯಂತೆ ನಿಮ್ಮ ಜಾಣ್ಮೆ ಬಳಸಿ ಕಷ್ಟಗಳಿಂದ ಹೊರ ಬರುವಿರಿ. ಪೂರ್ವಾರ್ಜಿತ ಆಸ್ತಿ ಮಾರುವ ಯೋಚನೆಯನ್ನು ಬಿಡಿ. ಸರ್ಕಾರಿ ನೌಕರರು ಕಾನೂನುಬಾಹಿರ ಕೆಲಸ ಎಸಗಿ ಕಾನೂನು ಕ್ರಮವನ್ನು ಎದುರಿಸಬೇಕಾಗುವುದು. ರಾಹು–ಕೇತುಗಳು ಅಶುಭರಿದ್ದು, ಮನೆಯಲ್ಲಿ ಅಹಿತಕರ ಘಟನೆ ನಡೆಯಲು ಕಾರಣೀಭೂತರಾಗುವರು.
ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ –1

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)
ಕಠಿಣ ಪ್ರಯತ್ನ ಹಾಗೂ ಸಂಯಮ ನೀವು ಯಶಸ್ಸು ಗಳಿಸುವಲ್ಲಿ ಸಹಕರಿಸುತ್ತವೆ. ಮನೆಯೊಳಗಿನ ಸಮಸ್ಯೆಗಳ ಸಾಮರಸ್ಯದಿಂದ ಪರಿಹರಿಸಿಕೊಳ್ಳಿ. ಈ ವಾರ ನಿಮ್ಮ ಜವಾಬ್ದಾರಿಗಳು ಹೆಚ್ಚಾಗುವ ಸಂಭವವಿದೆ. ಪ್ರೀತಿ ಪಾತ್ರರ ಅನಾರೋಗ್ಯದಿಂದ ಮಾನಸಿಕ ಕಳವಳ, ಔಷಧಿ ವೆಚ್ಚಗಳೂ ಹೆಚ್ಚಾಗಬಹುದು. ವಾರಾಂತ್ಯಕ್ಕೆ ಗೆಳೆಯರ ಬಳಗದ ಭೇಟಿ, ಲಘು 'ಪಾರ್ಟಿ'ಗಳು ನಡೆದೀತು.
ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ–4

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಕಳೆದ ಕೆಲವು ವಾರಗಳ ನಿಮ್ಮ ಪ್ರಯತ್ನ ಈಗ ಫಲಿಸಲಿದೆ. ಹಾಗೂ ನಿಮ್ಮ ಕ್ಷೇತ್ರದಲ್ಲಿನ ಕೆಲಸಗಳು ಸರಾಗವಾಗಿ ಸಾಗುವುದು. ಯಶಸ್ಸಿನಿಂದ ಅತಿಯಾಗಿ ಹಿಗ್ಗಬೇಡಿ. ದೇವತಾ ಕಾರ್ಯಗಳಲ್ಲಿ ಭಾಗವಹಿಸಿ ಧನ್ಯತಾಭಾವವನ್ನು ಹೊಂದುವಿರಿ. ವಿವಾಹ ಯೋಗ್ಯ ಕನ್ಯಾಮಣಿಯರಿಗೆ ಕಂಕಣಬಲ ಕೂಡಿ ಬರಲಿದೆ. ವಾರಾಂತ್ಯಕ್ಕೆ ಸರ್ಕಾರದಿಂದ ಆತಂಕದ ಸುದ್ದಿ ಬಂದೀತು.
ಶ್ರೀ ಲಿಂಗಾಷ್ಟಕ ಪಠಿಸಿ. ಶುಭ ಸಂಖ್ಯೆ –8

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ವಾರದ ಆದಿಗೆ ಹಣಕಾಸಿನ ಅಡಚಣೆ ಉಂಟಾಗಿ ಸಮಯಕ್ಕೆ ಸರಿಯಾಗಿ ಸರಿದೂಗಿಸಿಕೊಳ್ಳುವಿರಿ. ನಿಮ್ಮ ನಿಯಮಿತ ಕೆಲಸಗಳನ್ನು ಎಂದಿನಂತೆ ನಡೆಸುತ್ತಿರಬೇಕು. ಪ್ರಮುಖ ಕಾರ್ಯಭಾರಗಳನ್ನು ವಾರದ ಮೊದಲಾರ್ಧದಲ್ಲಿ ಮುಗಿಸಿದರೆ ಉತ್ತಮ. ಕಲಾವಿದರ ಕೆಲಸಗಳು ಗುರುತಿಸಲ್ಪಟ್ಟು ಗೌರವಕ್ಕೆ ಪಾತ್ರರಾಗುತ್ತಾರೆ. ಕಾರ್ಯನಿಮಿತ್ತ ಪ್ರಯಾಣಗಳಿಂದ ದೇಹಕ್ಕೆ ಆಯಾಸ ಉಂಟಾಗಲಿದೆ.
ಓಂ ನಮೋ ಭಗವತೇ ರುದ್ರಾಯ ಜಪಿಸಿ. ಶುಭ ಸಂಖ್ಯೆ –4

ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿ ಉದ್ಘಾಟನೆ

ಕುಸ್ತಿ ಆಡಿ, ಸದೃಢ ಆರೋಗ್ಯ ಜೀವನ ನಡೆಸಿ: ದರ್ಶನ್



ರಾಜ್ಯಮಟ್ಟದ ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿಯನ್ನು ಶಾಸಕ ದರ್ಶನ್ ಧ್ರುವನಾರಾಯಣ ಉದ್ಘಾಟಿಸಿದರು.

ನಂಜನಗೂಡು: ಜಿಲ್ಲೆಯಲ್ಲಿಯೇ ನಂಜನಗೂಡು ನಗರ ಕುಸ್ತಿ, ಕಬ್ಬಡ್ಡಿ, ಫುಟ್ಬಾಲ್ ಕ್ರೀಡೆಗಳಿಗೆ ಹೆಸರಾಗಿತ್ತು, ಯುವಕರು ವಿದ್ಯೆಗೆ ಪ್ರಾಧಾನ್ಯತೆ ನೀಡಿದಂತೆ ಕ್ರೀಡೆಗೂ ಹೆಚ್ಚಿನ ಆದ್ಯತೆ ನೀಡಬೇಕು, ಕುಸ್ತಿ ಕಲೆಯನ್ನು ಮೈಗೂಡಿಸಿಕೊಂಡಾಗ ಯುವಕರು ಸಧೃಡವಾಗಿ ಆರೋಗ್ಯಕರ ಜೀವನ ನಡೆಸಬಹುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ನಗರದ ತಾಲೂಕು ಕ್ರೀಡಾಂಗಣದಲ್ಲಿ ಶನಿವಾರ ಜಿಲ್ಲಾ ಕುಸ್ತಿ ಸಂಘ ಆಯೋಜಿಸಿದ್ದ 3 ದಿನಗಳ ರಾಜ್ಯಮಟ್ಟದ ಪುರುಷರ ಮತ್ತು ಮಹಿಳೆಯರ ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು ಜಿಲ್ಲೆ ಕುಸ್ತಿಗೆ ವಿಶೇಷವಾಗಿ ಪ್ರಸಿದ್ಧವಾಗಿದ್ದು, ಈ ಪರಂಪರೆಯನ್ನು ನಂಜನಗೂಡಿನ ಕುಸ್ತಿಪಟುಗಳು ಮುಂದುವರೆಸಿದ್ದಾರೆ, ನಗರದ ಕುಸ್ತಿಪಟುಗಳು ರಾಜ್ಯದಲ್ಲೇ ಹೆಸರುವಾಸಿಯಾಗಿದ್ದರು, ನಗರದಲ್ಲಿ ಆಯೋಜನೆಗೊಂಡಿರುವ ಪಂದ್ಯಾವಳಿಗೆ ರಾಜ್ಯದಾದ್ಯಂತದ ಕುಸ್ತಿ ಪಟುಗಳು ಪಾಲುಗೊಂಡು ನಗರದ ಕುಸ್ತಿಪ್ರೇಮಿಗಳಿಗೆ ರಂಜನೆ ನೀಡಿದ್ದೀರಿ, ತಾಲೂಕಿನ ಗ್ರಾಮೀಣ ಪ್ರದೇಶ ಸೇರಿದಂತೆ ನಗರ ಪ್ರದೇಶದಲ್ಲಿ ಪ್ರತಿತಿಂಗಳು ವಿವಿಧ ಕ್ರೀಡಾ ಸ್ಪರ್ಧೆಗಳು ನಿರಂತರವಾಗಿ ನಡೆಯುತ್ತಿವೆ, ತಮ್ಮೂಲಕ ಯುವಕರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ, ಮುಂದಿನ ದಿನಗಳಲ್ಲಿಯೂ ಇದೇ ರೀತಿಯಲ್ಲಿ ಕುಸ್ತಿ ಪಂದ್ಯಾವಳಿಗಳನ್ನು ನಿರಂತರವಾಗಿ ನಡೆಸಬೇಕು. ಈ ದಿಸೆಯಲ್ಲಿ ಅಗತ್ಯವಿರುವ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತೇನೆ ಎಂದು ಭರವಸೆ ನೀಡಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ ಕಳೆದ 50 ವರ್ಷಗಳಿಂದ ನಗರದಲ್ಲಿ ಕುಸ್ತಿ ಕಲೆಗೆ ಹೆಚ್ಚಿನ ಅಭಿಮಾನ ಪ್ರೋತ್ಸಾಹ ದೊರೆತಿದೆ, ಕುಸ್ತಿ ಕಲೆ ಶ್ರಮ,ನಿರಂತರ ಅಭ್ಯಾಸ, ಗುರುವಿನ ಆಶೀರ್ವಾದ ದೊರೆತಾಗ ಮಾತ್ರ ಬೆಳೆಯುತ್ತದೆ. ಮಟ್ಟಿ ಕುಸ್ತಿ ನಮ್ಮ ಜನಪದ, ಹಳ್ಳಿಗಾಡಿನ ಸಂಪ್ರದಾಯಿಕ ಕ್ರೀಡೆ, ಈಗಿನ ಮ್ಯಾಟ್ ಕುಸ್ತಿಯಿಂದ ಮಟ್ಟಿ ಕುಸ್ತಿ ಕಲೆಗೆ ಹಿನ್ನಡೆಯಾಗುವುದಿಲ್ಲ, ಯುವಕರು ದುರಭ್ಯಾಸ, ಚಟಗಳಿಂದ ಮುಕ್ತರಾಗಿ ಉತ್ತಮ ಜೀವನ ನಡೆಸಲು ಕುಸ್ತಿ ಕಲೆಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜ್ಞಾನ ಪ್ರಕಾಶ್ ಸ್ವಾಮೀಜಿ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಎಂ.ಶಂಕರ್, ಪೈಪ್ರಸನ್ನ, ರಾಂಬೋ ಕಿರಣ್, ಚಂದನ್ ಗೌಡ, ದೇಬೂರು ಅಶೋಕ್, ವಿಜಯ್‌ಕುಮಾರ್, ರವಿಕುಮಾರ್, ಸುಧಾಕರ್, ಶ್ರೀಕಂಠ, ಗಿರೀಶ್, ಮಹದೇವಮೂರ್ತಿ ಉಪಸ್ಥಿತರಿದ್ದರು.

ಅವಧಿ ಪೂರೈಸಿದ ಸೋಸಲೆ ಗ್ರಾಪಂ ಸದಸ್ಯರಿಗೆ ಬೀಳ್ಕೊಡುಗೆ



ತಿ.ನರಸೀಪುರ, ಫೆ7– ತಾಲೂಕಿನ ಸೋಸಲೆ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಆಡಳಿತಾವಧಿ 5 ವರ್ಷ ಪೂರ್ಣಗೊಂಡ ಹಿನ್ನಲೆಯಲ್ಲಿ ಕಚೇರಿಯ ಸಭಾಂಗಣದಲ್ಲಿ ಗ್ರಾಪಂ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ಬೀಳ್ಕೊಡುಗೆ ನೀಡಲಾಯಿತು.

ಅಧ್ಯಕ್ಷೆ ಭಾಗ್ಯ ಶಿವಕುಮಾರ್(ಬಡ್ಡು) ಮಾತನಾಡಿ, ನಮ್ಮ ಆಡಳಿತಾವಧಿಯಲ್ಲಿ ಪಟ್ಟಣದ ಪ್ರಗತಿಗೆ ಸಹಕಾರ ನೀಡಿದ ಸದಸ್ಯರು, ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಧನ್ಯವಾದ ತಿಳಿಸಿ ಕಡಿಮೆ ಅವಧಿಯಲ್ಲಿ ಸದಸ್ಯರು ನಮಗೆ ಅವಕಾಶ ನೀಡಿದ ಸಮಯದಲ್ಲಿ ನಾವು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ನೂತನವಾಗಿ ಪಂಚಾಯಿತಿ ಕಟ್ಟಡವನ್ನು ನವೀಕರಣಗೊಳಿಸಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅನುಯಾಯಿ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುವುದು ನಮಗೆ ತೃಪ್ತಿ ನೀಡಿದೆ ಮುಂದಿನ ದಿನದಲ್ಲಿ ಮತದಾರರು ನಮಗೆ ಅವಕಾಶ ನೀಡಿದ್ದೆ ಆದಲ್ಲಿ ಇನ್ನು ಹೆಚ್ಚಿನ ಅಭಿವೃದ್ಧಿಪಡಿಸುತ್ತೇನೆ ಎಂದು ಮತದಾರರಿಗೆ ಹಾಗೂ ಸದಸ್ಯರಿಗೆ ಮತ್ತು ಅಧಿಕಾರಿಗಳಿಗೆ ಅಭಿನಂದಿಸುತ್ತೇನೆ ಎಂದರು.

ಸದಸ್ಯರಾದ ಮಹೇಶ್, ಪುಟ್ಟಸ್ವಾಮಿ, ಮಹೇಶ್‌ಕುಮಾರ್, ಜ್ಞಾನೇಂದ್ರ ಮಲ್ಲೇಶ್, ನಾಗೇಂದ್ರ ಕುಮಾರ್, ಸುಂದರ್, ಮಧುಕುಮಾರ್, ರಾಜಮ್ಮ, ಶೈಲಜಾ, ರೇಖಾ, ಪ್ರಭಾ, ನಾಗರತ್ನ, ಚಾಂದಿನಿ, ಕಾರ್ಯದರ್ಶಿ ರಾಜೇಶ್, ನಾಗರತ್ನ, ಪುಟ್ಟಮ್ಮ ಸುನಿಲ್, ಚಂದ್ರಶೇಖರ್, ಗ್ರಂಥಪಾಲಕಿ ವಿಜಯಲಕ್ಷ್ಮಿ ಹಾಜರಿದ್ದರು.

ಸರಗೂರಲ್ಲಿ ಮನೆಯಿಂದ ಹೊರಗೆ ಹೋದ ವ್ಯಕ್ತಿ ನಾಪತ್ತೆ



ಸರಗೂರು: ಕುಂಬಾರ ಜನಾಂಗದ ರಾಮು ಬಿನ್ ಲೇ ರಂಗಶೆಟ್ಟಿ @ ತಮ್ಮಯ್ಯ ಶೆಟ್ಟಿ (48)ಸರಗೂರಿನಲ್ಲಿರುವ ಮನೆಯಿಂದ ಕಾಣೆಯಾಗಿದ್ದಾರೆ. ಹೊರ ಹೋದವರು ಇದುವರೆವಿಗೂ ವಾಪಾಸ್ ಮನೆಗೆ ಬಂದಿಲ್ಲ. ಪತ್ತೆ ಮಾಡಿಕೊಡಬೇಕೆಂದು ರಾಮು ಮಾವನ ಮಗ ಎಸ್.ಆರ್.ಆನಂದ ಸರಗೂರು ಠಾಣೆಗೆ ಬಂದು ದೂರು ನೀಡಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕವರು ದೂರವಾಣಿ ಸಂಖ್ಯೆ 08228–265542–9480805064 ತಿಳಿಸಲು ಕೋರಲಾಗಿದೆ

ಹೆಬ್ಬಲಗುಪ್ಪೆಯ ಸರ್ಕಾರಿ ಶಾಲೆಗೆ 113 ಸೈಕಲ್‌ಗಳ ವಿತರಣೆ



ಹೆಬ್ಬಲಗುಪ್ಪೆ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಶಾಸಕ ಅನಿಲ್ ಚಿಕ್ಕಮಾದು ಸೈಕಲ್ ವಿತರಿಸಿದರು.

ಹೆಚ್.ಡಿ.ಕೋಟೆ: ಮಕ್ಕಳ ವಿಧ್ಯಾಭ್ಯಾಸಕ್ಕಾಗಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸ್ಥಳೀಯರು ಕೈಜೋಡಿಸಿಕೊಂಡಾಗ ಮಾತ್ರ ಆಯಾ ಶಾಲೆಗಳು ಅಭಿವೃದ್ಧಿ ಸಾಧಿಸಲು ಸಾಧ್ಯ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಹೆಬ್ಬಲಗುಪ್ಪೆ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ, ಕೆನರಾ ರೊಬ್ಯಾಕೋ ಮ್ಯುಚ್ಯುವಲ್ ಫಂಡ್ ಮತ್ತು 24 ಮನೆ ತೆಲಗು ಶೆಟ್ಟರ ಸಮುದಾಯದ ವತಿಯಿಂದ 113 ಸೈಕಲ್‌ಗಳ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ತಾಲೂಕಿನಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆಗಳಲ್ಲಿ ಭಾಗವಹಿಸಿದ ಪ್ರತಿಭೆಗಳು ಇದ್ದಾರೆ, ಅವರಂತೆ ವಿದ್ಯಾರ್ಥಿಗಳು ಎಲ್ಲಾ ಕ್ಷೇತ್ರದಲ್ಲೂ ಬೆಳೆಯಬೇಕು ಎಂದರು.

ಕಳೆದ ಎರಡು ವರ್ಷಗಳಿಂದ ನಿಮ್ಮ ಸಂಸ್ಥೆಯಿಂದ ಸರ್ಕಾರಿ ಶಾಲೆಯನ್ನು ಗುರುತಿಸಿ, ಅಲ್ಲಿರುವ ಬಡ ಮಕ್ಕಳನ್ನು ಗುರುತಿಸಿ ಸೈಕಲ್ ವಿತರಣೆ ಮಾಡಿರುವುದು ಶ್ಲಾಘನೀಯ, ಹಾಗೆ ಮುಂದಿನ ದಿನಗಳಲ್ಲಿ, ಸರ್ಕಾರಿ ಶಾಲೆಯನ್ನು ದತ್ತು ಪಡೆದು ಅಭಿವೃದ್ಧಿಪಡಿಸುವಂತೆ ಮನವಿ ಮಾಡಿದರು.

ವಿದ್ಯಾರ್ಥಿಗಳಿಗೆ ಸೈಕಲ್ ನೀಡಿರುವುದು ನಿಗದಿತ ಸಮಯಕ್ಕೆ ಶಾಲೆಗೆ ಬಂದು ಪಾಠ ಪ್ರವಚನ ಕೇಳುವುದಕ್ಕಾಗಿ, ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದು ಶಾಲೆಗೆ ಉತ್ತಮ ಫಲಿತಾಂಶ ತರಬೇಕೆಂದು ಮಕ್ಕಳಿಗೆ ಕಿವಿಮಾತು ಹೇಳಿದರು.

ಶಾಲೆಗೆ ಶೌಚಾಲಯದ ಅಗತ್ಯ ಇರುವುದನ್ನು ಗಮನಿಸಿದ್ದು ಮುಂದಿನ ದಿನಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಹಣ ಮಂಜೂರು ಮಾಡಲಾಗುವುದು ಎಂದರು.

> ಹೆಬ್ಬಲಗುಪ್ಪೆ ಸರ್ಕಾರಿ ಪ್ರೌಢಶಾಲೆ, ರವೀಂದ್ರ ಶಾಲೆ, ಕೋಟೆ ಆದರ್ಶ ವಿದ್ಯಾಲಯ, ಯರಳ್ಳಿ ಶಾಲೆ, ಯರಳ್ಳಿ ಕಾವಲ್ ಶಾಲೆ ಸೇರಿದಂತೆ ಇತರೆ ಶಾಲೆಯ ವಿದ್ಯಾರ್ಥಿಗಳಿಗೆ 113 ಸೈಕಲ್‌ಗಳ ವಿತರಣೆ ಮಾಡಿದ್ದೇವೆ. ಸಮಾಜದಲ್ಲಿ ಅಂಕು ಡೊಂಕುಗಳನ್ನು ತಿದ್ದುವ ಸಲುವಾಗಿ ಕೆನರಾ ರೋಬ್ಯಾಕ್ ಫಂಡಿನ ಮೂಲಕ ಸಮಾಜ ಸೇವೆಗಳನ್ನು ಮಾಡುತ್ತಾ ಬಂದಿದ್ದು ಅದರಂತೆ ಭಾರತದಾದ್ಯಂತ 6000 ವಿದ್ಯಾರ್ಥಿಗಳಿಗೆ ಸೈಕಲ್‌ಗಳನ್ನು ವಿತರಣೆ ಮಾಡಲಾಗಿದೆ –ಸುಮಂತ್, ಕೆನರಾ ರೊಬ್ಯಾಕೋ ಮ್ಯುಚ್ಯುವಲ್ ಫಂಡ್‌ನ ಪ್ರತಿನಿಧಿ

16 ಕೊಠಡಿಗಳು ಸರಗೂರು ಮತ್ತು ಹೆಚ್.ಡಿ.ಕೋಟೆ ತಾಲೂಕಿನ ವಿವಿಧ ಶಾಲೆಗೆ ಮಂಜೂರಾಗಿದೆ ಎಂದರು.

ಕೆಪಿಎಸ್‌ಸಿಯ ಎರಡು ಶಾಲೆಗಳು ತಾಲ್ಲೂಕಿನಲ್ಲಿ ಸ್ಥಾಪನೆಗೆ ಮಂಜೂರಾಗಿದ್ದು ಮುಂದಿನ ದಿನಗಳಲ್ಲಿ ಕಾಮಗಾರಿ ಭೂಮಿಪೂಜೆ ನೆರವೇರಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶ್ರೀನಿವಾಸ್, 24 ಮನೆ ತೆಲಗುಶೆಟ್ಟರ ಸಮಾಜದ ತಾಲೂಕು ಅಧ್ಯಕ್ಷ ಆಟೋ ಪಾರ್ಟ್ಸ್ ಎನ್.ಎಸ್.ಮಂಜುನಾಥ್, ಗೌರವಾಧ್ಯಕ್ಷ ಶಿವನಾಗಶೆಟ್ಟಿ, ಉಪಾಧ್ಯಕ್ಷ ಶೇಖರ್, ಖಜಾಂಚಿ ಭಾಸ್ಕರ್, ಕಾರ್ಯದರ್ಶಿ ಮೃತ್ಯುಂಜಯ, ನಿರ್ದೇಶಕರುಗಳಾದ ಗಣೇಶ್, ಜಗದೀಶ್, ಮಾದೇವಶೆಟ್ಟಿ ಅಶೋಕ್, ಅಜರುದ್ದೀನ್, ಸೌಮ್ಯ, ಚಿಕ್ಕದಾಸನಾಯಕ, ಮಹದೇವನಾಯಕ, ನಾಗರಾಜು, ಚಿಕ್ಕನಾಯಕ, ಭೈರನಾಯಕ, ನವೀನ್, ಬಸವರಾಜು, ಮಾದೇಶ್, ನಾಗೇಶ್, ಬೋಗನಂಜಯ್ಯ ಇದ್ದರು.

ಗೊಬ್ಬರದ ಲಾರಿ ಡಿಕ್ಕಿ: ಇಬ್ಬರು ಬೈಕ್ ಸವಾರರ ಸಾವು

ನಂಜನಗೂಡು: ಗೊಬ್ಬರದ ಲಾರಿ ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಹನುಮನಪುರ ಗೇಟ್ ಬಳಿ ಸಂಭವಿಸಿದೆ.

ಮೈಸೂರಿನ ಜೆ.ಪಿ.ನಗರದ ಚಂದ್ರು (38), ನಡುಕಲು ಮೊಳೆ ಗ್ರಾಮದ ಶೀಲಾ (35) ಮೃತ ದುರ್ದೈವಿಗಳು.

ಚಂದ್ರು, ಶೀಲಾ ಬೈಕಿನಲ್ಲಿ ಸಂತೇಮರಹಳ್ಳಿ ಕಡೆಗೆ ತೆರಳುತ್ತಿದ್ದ ವೇಳೆ ಎದುರಿಗೆ ಬಂದ ಗೊಬ್ಬರ ತುಂಬಿದ್ದ ಲಾರಿ ಡಿಕ್ಕಿ ಹೊಡೆಯಿತು. ಇದರಿಂದ ಬೈಕ್ ಸವಾರ ಚಂದ್ರು, ಹಿಂಬದಿಯಲ್ಲಿ ಕುಳಿತಿದ್ದ ಶೀಲಾ ಕೆಳಗಡೆ ಬಿದ್ದಿದ್ದಾರೆ. ಈ ವೇಳೆ ಇಬ್ಬರ ಮೇಲೆ ಲಾರಿ ಚಕ್ರ ಹರಿದಿದೆ. ಪರಿಣಾಮ ಸ್ಥಳದಲ್ಲೇ ಇಬ್ಬರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಡಿವೈಎಸ್ಪಿ ರಘು, ಸಿಪಿಐ ಚಂದ್ರಶೇಖರ್, ಕವಲಂದೆ ಪೊಲೀಸ್ ಠಾಣೆಯ ಪಿಎಸ್‌ಐ ಬಸವರಾಜು, ಎಸ್.ಬಿ.ರಮೇಶ್ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆಯಿಂದ ಸಾಗರೆಯಲ್ಲಿ ಜಾತ್ರಾ ಮಹೋತ್ಸವ

ಸರಗೂರು: ತಾಲೂಕಿನ ಸಾಗರೆ ಗ್ರಾಮದಲ್ಲಿ ಫೆ.9ರಿಂದ 11 ರವರೆಗೆ ಸಾಗರೆ ಶ್ರೀಮಹದೇಶ್ವರ ಜಾತ್ರಾ ಮಹೋತ್ಸ ಹಾಗೂ ದನಗಳ ಪ್ರದರ್ಶನ ನಡೆಯಲಿದೆ.

ಜಾತ್ರಾ ಮಹೋತ್ಸವಕ್ಕಾಗಿ ಸಾಗರೆ ಗ್ರಾಮದಲ್ಲಿ ಸಿದ್ಧತಾ ಕಾರ್ಯಗಳು ಜೋರಾಗಿ ಸಾಗಿವೆ. ಜಾತ್ರಾ ಮಹೋತ್ಸವಕ್ಕೆ ಹೆಚ್ಚು ಭಕ್ತರು ಆಗಮಿಸುವ ನಿರೀಕ್ಷೆ ಇದೆ. ಬಿಸಿಲ ಝಳ ಹೆಚ್ಚಾಗಿರುವುದರಿಂದ ವಿಶೇಷ ನೆರಳಿನ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯ, ದಾಸೋಹ ಸೇರಿದಂತೆ ಎಲ್ಲ ರೀತಿಯ ಸೌಕರ್ಯಗಳನ್ನು ಸಾಗರೆ ಗ್ರಾಮಸ್ಥರು ಕಲ್ಪಿಸಲು ಸಕಲ ಸಿದ್ದತೆ ನಡೆಸಿದ್ದಾರೆ. ಸೋಮವಾರ ಮುಂಜಾನೆ ಹೋಮ ಹವನ, ರುದ್ರಾಭಿಷೇಕ, ಮಹಾಮಂಗಳಾರತಿ ನಂತರ ರಾತ್ರಿ 7 ಗಂಟೆಗೆ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ. ಹಾಗೆ ರಾತ್ರಿ 10ಗಂಟೆಗೆ ಸುಗಮಸಂಗೀತ ಕಾರ್ಯಕ್ರಮ ನಡೆಯಲಿದೆ.

ಫೆ.10ರ ಮಂಗಳವಾರ ಮುಂಜಾನೆ ಅಭಿಷೇಕ ಪೂಜೆ, ಹಾಲು–ಹರವಿ ಸೇವೆ, ನಂತರ ಕಪಿಲಾ ನದಿಯಿಂದ ಪೂರ್ಣಕಳಸ ದೊಂದಿಗೆ ಹುಲಿವಾಹನದಲ್ಲಿ ಅಲಂಕರಿಸಿರು ಮಹದೇಶ್ವರ ಸ್ವಾಮಿ, ಉತ್ಸವಮೂರ್ತಿ ಮೆರವಣಿಗೆ ನಡೆಸಿ ದೇವಾಯಕ್ಕೆ ತರಲಾಗುವುದು, ನಂತರ ದೇವಸ್ಥಾನದ ಮುಂಬಾಗ ಕೊಂಡೋತ್ಸವ ನಡೆಸಲಾಗುವುದು, ಅಂದೇ ರಾತ್ರಿ ಸಮಾಜಿಕ ನಾಟಕವನ್ನು ಏರ್ಪಡಿಸಲಾಗಿದೆ. ಬುಧವಾರ ಮುಂಜಾನೆ ಮಹದೇಶ್ವರಸ್ವಾಮಿಗೆ ವಿಶೇಶ ಪೂಜೆ ನಡೆಯಲಿದೆ.

ಸಚಿವ ಮಹದೇವಪ್ಪಗೆ ಅಭಿನಂದನೆ



ಅಖಿಲ ಕರ್ನಾಟಕ ಡಾ.ಹೆಚ್.ಸಿ.ಮಹದೇವಪ್ಪ ಅವರ ಅಭಿಮಾನಿ ಬಳಗ ರಾಜ್ಯ ಸಮಿತಿಯ 8ನೇ ವರ್ಷದ ವಾರ್ಷಿಕೋತ್ಸವ ಯಶಸ್ವಿಯಾಗಿ ನಡೆದ ಹಿನ್ನೆಲೆಯಲ್ಲಿ ರಾಜ್ಯ ಸಮಿತಿಯ ಅಧ್ಯಕ್ಷರಾದ ಹಿನಕಲ್ ನಂಜುಂಡ ಅವರ ನೇತೃತ್ವದಲ್ಲಿ ಸಮಾಜಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಬೆಂಗಳೂರಿನ ಗೃಹ ಕಚೇರಿಯಲ್ಲಿ ಸನ್ಮಾನಿಸಲಾಯಿತು. ಕಾರ್ಯಾಧ್ಯಕ್ಷ ಡಾ.ಕೆ.ಎನ್.ಬಸವರಾಜು, ಉಪಾಧ್ಯಕ್ಷ ಕಡಕೊಳ ಭರತ್, ಪ್ರಧಾನ ಕಾರ್ಯದರ್ಶಿ ಬಿ.ಆರ್.ನಾಗರಾಜು, ಮಂಜುನಾಥ್ ಕೋಟೆ, ಬೆನಕನಹಳ್ಳಿ ಹರೀಶ್, ಮೈಸೂರು ಜಿಲ್ಲಾ ಅಧ್ಯಕ್ಷ ಕಗ್ಗಲೀಪುರ ಮಧುಕುಮಾರ್ ಇತರರು ಉಪಸ್ಥಿತರಿದ್ದರು.

ಅಕ್ರಮ ವಿದ್ಯುತ್ ತಂತಿ ಬಲೆಗೆ ಸಿಲುಕಿ ಹೆಣ್ಣಾನೆ ಸಾವು



ಬೈಲಕುಪ್ಪೆ: ಪಂಚಾಯಿತಿ ವ್ಯಾಪ್ತಿಯ ದೊಡ್ಡ ಹರವೇ ಗ್ರಾಮದಲ್ಲಿ ಮಾನವ ನಿರ್ಲಕ್ಷ್ಯಕ್ಕೆ ಮತ್ತೊಂದು ವನ್ಯಜೀವಿ ಬಲಿಯಾಗಿದೆ. ಜೋಳದ ಜಮೀನಿಗೆ ಅಳವಡಿಸಲಾಗಿದ್ದ ಅಕ್ರಮ ವಿದ್ಯುತ್ ತಂತಿ ಬಲೆಗೆ ಸಿಲುಕಿ ಸುಮಾರು 15 ವರ್ಷದ ಹೆಣ್ಣು ಆನೆ ಮೃತಪಟ್ಟಿರುವ ಘಟನೆ ಬೆಳಕಿಗೆ ಬಂದಿದೆ.

ಮಧ್ಯರಾತ್ರಿ ವೇಳೆಯಲ್ಲಿ ಆನೆ ಆಹಾರಕ್ಕಾಗಿ ಜಮೀನಿನೊಳಗೆ ಪ್ರವೇಶಿಸಿದ ಸಂದರ್ಭದಲ್ಲಿ ಜೋಳದ ಬೆಳೆ ರಕ್ಷಣೆಗಾಗಿ ಹಾಕಲಾಗಿದ್ದ ಕರೆಂಟ್ ಹರಿದ ತಂತಿಗೆ ಸಿಲುಕಿ ಆನೆ ಸ್ಥಳದಲ್ಲೇ ಮೃತಪಟ್ಟಿದೆ ಎನ್ನಲಾಗಿದೆ. ಬೆಳಿಗ್ಗೆ ಗ್ರಾಮಸ್ಥರು ಜಮೀನಿನ ಬಳಿ ಆನೆಯ ಶವ ಕಂಡು ಅರಣ್ಯ ಇಲಾಖೆ ಹಾಗೂ ಪಂಚಾಯಿತಿ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಆನೆಯ ಸಾವು ಅಕ್ರಮ ವಿದ್ಯುತ್ ತಂತಿಯಿಂದಲೇ ಸಂಭವಿಸಿರುವ ಸಾಧ್ಯತೆ ಇದೆ ಎಂದು ಪ್ರಾಥಮಿಕ ವರದಿಯಲ್ಲಿ ತಿಳಿದುಬಂದಿದೆ. ಪ್ರಕರಣ ದಾಖಲಿಸಿಕೊಂಡಿರುವ ಇಲಾಖೆ, ಜಮೀನು ಮಾಲೀಕರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ಸೂಚನೆ ನೀಡಿದೆ.

ಇದ್ದಕ್ಕೆ ಸಂಬಂಧ ಪಟ್ಟಂತೆ ಬೈಲಕುಪ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲುಗೊಂಡಿದೆ.

ಉನ್ನತ ಶಿಕ್ಷಣ ಕೊಡಿಸಿದ ಪೋಷಕರ ನಿರೀಕ್ಷೆ ಸಾಕಾರಗೊಳಿಸಿ



ತಿ.ನರಸೀಪುರ, ಫೆ.7– ಪೋಷಕರು ತಮ್ಮ ಮಕ್ಕಳ ಮೇಲೆ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡು ಉನ್ನತ ಶಿಕ್ಷಣ ಕೊಡಿಸುತ್ತಾರೆ. ಅವರ ಹಂಬಲ ಸಾಕಾರಗೊಳಿಸುವ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದೆ ಎಂದು ಸೋಮನಾಥಪುರ ಆರೋಹಣ ಸೆಂಟ್ರಲ್ ಸ್ಕೂಲ್‌ನ ಕಾರ್ಯದರ್ಶಿ ಎನ್.ಎಂ.ರಾಮಚಂದ್ರ ಹೇಳಿದರು.

ತಾಲೂಕಿನ ಸೋಮನಾಥಪುರ (ಕುಳ್ಳನ ಕೊಪ್ಪಲು)ಗ್ರಾಮದ ಬಳಿಯ ಆರೋಹಣ ಸೆಂಟ್ರಲ್ ಸ್ಕೂಲ್‌ನಲ್ಲಿ ಆಯೋಜಿಸಲಾಗಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಹಾಗು ಸರಸ್ವತಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಇಡೀ ವರ್ಷ ಕಷ್ಟಪಟ್ಟು ವ್ಯಾಸಾಂಗ ಮಾಡಿರುತ್ತಾರೆ. ಪರೀಕ್ಷೆ ಕೂಡ ಹತ್ತಿರ ಬರುತ್ತಿದೆ. ಹಾಗಾಗಿ ವಿದ್ಯಾರ್ಥಿಗಳಿಗೆ ಜ್ಞಾಪಕ ಶಕ್ತಿ ಹೆಚ್ಚಾಗಲಿ ಎಂಬ ಉದ್ದೇಶದಿಂದ ಸರಸ್ವತಿ ಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹಾಗಾಗಿ ವಿದ್ಯಾರ್ಥಿಗಳು ದೇವರ ಪೂಜೆಯೊಂದಿಗೆ ಕಠಿಣ ವಿದ್ಯಾಭ್ಯಾಸದಲ್ಲಿ ತೊಡಗಿಕೊಳ್ಳುವ ಮೂಲಕ ಉತ್ತಮ ಅಂಕ ಗಳಿಸಿ ಪೋಷಕರ ಶ್ರಮಕ್ಕೆ ಪ್ರತಿಫಲ ನೀಡುವ ಕೆಲಸ ಮಾಡಬೇಕಿದೆ, ವಿದ್ಯಾರ್ಥಿಗಳು ನೈತಿಕ ಮೌಲ್ಯಗಳನ್ನು ರೂಢಿಸಿ ಕೊಂಡು ವಿದ್ಯಾರ್ಜನೆಯಲ್ಲಿ ಸಾಧನೆ ಮಾಡಿದರೆ, ನಿಮ್ಮ ಜೀವನ ಉತ್ತಮವಾಗುತ್ತದೆ. ನಿರುದ್ಯೋಗ ಎಂದು ಭಯ ಬೀಳುವ ಅಗತ್ಯವಿಲ್ಲ. ಅಧ್ಯಯನ ಮಾಡಿ ನೀವು ಸಾಮರ್ಥ್ಯ ಗಳಿಸಿಕೊಂಡರೆ ದೇಶ–ವಿದೇಶಗಳಲ್ಲಿ ಅವಕಾಶ ಖಂಡಿತ ಸಿಗುತ್ತದೆ ಎಂದರು.

ಶಾಲೆಯ ಅಧ್ಯಕ್ಷ ವೈ.ಎಚ್.ಹನುಮಂತೇಗೌಡ ಮಾತನಾಡಿ ದೇಶ ಬುದ್ಧಿವಂತ ಮಾನವ ಸಂಪನ್ಮೂಲವನ್ನು ಹೊಂದಿದೆ. ನಮ್ಮ ಪೂರ್ವಿಕರ ಕೊಡುಗೆ ಅತ್ಯಂತ ಮಹತ್ವದ್ದು. ಅನೇಕ ಮಹನೀಯರು ತಂತ್ರಜ್ಞಾನಕ್ಕೆ ಶ್ರೇಷ್ಠ ಕೊಡುಗೆ ನೀಡಿದ್ದಾರೆ. ಹಾಗೆ ವಿದ್ಯಾರ್ಥಿಗಳಾದ ನೀವು ನಿಮ್ಮ ಬುದ್ಧಿವಂತಿಕೆಯನ್ನು ದೇಶಕ್ಕೆ ಮುಡಿಪಾಗಿರಿಸಿ. ಯಾವ ಕಾರಣಕ್ಕೂ ನಿಮ್ಮಲ್ಲಿ ಕೀಳರಿಮೆ ಇರಬಾರದು. ಉತ್ತಮ ಪ್ರಜೆಗಳಾಗಬೇಕಾದರೆ ನೀವು ಉತ್ತಮ ವಿದ್ಯಾರ್ಥಿಗಳಾಗಿ ಸಾಧನೆ ಮಾಡಬೇಕು ಎಂದು ತಿಳಿಸಿದರು.

ಈ ವೇಳೆ ಗೌರವ ಕಾರ್ಯದರ್ಶಿ ಬಿ.ಎಸ್.ಯೋಗೇಂದ್ರ, ಖಜಾಂಚಿ ಮಾಣಿಕ್‌ಚಂದ್, ಪ್ರಾಂಶುಪಾಲೆ ಬಿ.ವಿಮಲ, ಮುಖ್ಯ ಶಿಕ್ಷಕಿ ಬಿ.ಆರ್.ಲಕ್ಷ್ಮಿ ಸೇರಿದಂತೆ ಶಿಕ್ಷಕ–ಶಿಕ್ಷಕಿಯರು, ವಿದ್ಯಾರ್ಥಿ–ವಿದ್ಯಾರ್ಥಿನಿಯರು ಹಾಜರಿದ್ದರು.

ಗ್ರಾಮಸ್ಥರೊಂದಿಗೆ ಡಿವೈಎಸ್ಪಿ ಚರ್ಚೆ



ಮೈಸೂರು ತಾಲೂಕು ಜಯಪುರ ಹೋಬಳಿಯ ಮಂಡನಹಳ್ಳಿ ಗ್ರಾಮದಲ್ಲಿ ಭಾನುವಾರ ದಿಂದ ನಡೆಯಲಿರುವ ಮುರುಡ ಬಸವೇಶ್ವರಸ್ವಾಮಿ ಓಕಳಿ ಜಾತ್ರಾ ಮಹೋತ್ಸವದ ಧಾರ್ಮಿಕ ಮಹಾಸಭೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವಿವಿಧ ಮಠದ ಸ್ವಾಮೀಜಿಗಳು ಆಗಮಿಸಲಿದ್ದು, ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಲು ಗ್ರಾಮದ ಮುಖಂಡರೊಂದಿಗೆ ಮೈಸೂರು ಗ್ರಾಮಾಂತರ ಡಿವೈಎಸ್ಪಿ ರಾಜಣ್ಣ ಅವರು ಸಭೆ ನಡೆಸಿದರು. ಸರ್ಕಲ್ ಇನ್ಸ್‌ಪೆಕ್ಟರ್ ಶಿವನಂಜ ಶೆಟ್ಟಿ, ಜಯಪುರ ಪೊಲೀಸ್ ಠಾಣೆಯ ಪಿಎಸ್‌ಐ ಕಾಳೇಗೌಡ ಅವರು ಉಪಸ್ಥಿತರಿದ್ದರು.

ಜಿನ್ನಹಳ್ಳಿಯಲ್ಲಿ ಶ್ರೀ ಗಣಪತಿ ಮೂರ್ತಿ ಪ್ರತಿಷ್ಠಾಪನೆ



ಹಂಪಾಪುರ: ಹೆಚ್.ಡಿ.ಕೋಟೆ ತಾಲೂಕು ಹಂಪಾಪುರ ಹೋಬಳಿಯ ಜಿನ್ನಹಳ್ಳಿ ಗ್ರಾಮದ ಶ್ರೀ ಮಹದೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ ಶ್ರೀ ಗಣಪತಿ ಮೂರ್ತಿ ಪ್ರತಿಷ್ಠಾಪನೆ ಹಾಗೂ ಧಾರ್ಮಿಕ ಸೇವಾ ಕಾರ್ಯಕ್ರಮಗಳು ಭಕ್ತಿಭಾವ ಮತ್ತು ಸಂಭ್ರಮದೊಂದಿಗೆ ನಡೆಯಿತು.

ಬೆಳಗ್ಗೆ ಶುಭ ಮುಹೂರ್ತದಲ್ಲಿ ಗಣಪತಿ ಹೋಮ–ಹವನ, ಪೂಜಾ ವಿಧಿವಿಧಾನಗಳು ಆರಂಭಗೊಂಡು, ನಂತರ ವೈದಿಕ ಮಂತ್ರೋಚ್ಚಾರಣೆಯೊಂದಿಗೆ ಶ್ರೀ ಗಣಪತಿ ಮೂರ್ತಿ ಪ್ರತಿಷ್ಠಾಪನೆ ನಡೆಯಿತು. ಈ ಸಂದರ್ಭದಲ್ಲಿ ದೇವಾಲಯವು ಹೂವಿನ ಅಲಂಕಾರ, ದೀಪಾಲಂಕಾರಗಳಿಂದ ಕಂಗೊಳಿಸುತ್ತಿತ್ತು. ಭಕ್ತಾದಿಗಳು "ಗಣಪತಿ ಬಪ್ಪಾ ಮೋರಿಯಾ" ಘೋಷಣೆಯೊಂದಿಗೆ ದೇವರ ದರ್ಶನ ಪಡೆದರು.

ಈ ಧಾರ್ಮಿಕ ಕಾರ್ಯಕ್ರಮವನ್ನು ಶ್ರೀ ಗಣಪತಿ ಪೂಜಾ ಸಮಿತಿ ಮತ್ತು ಪ್ರಗತಿ ಬಂಧು ಸ್ವಸಾಯ ಸಂಘಗಳ ಒಕ್ಕೂಟ ಹೊಮ್ಮರಗಳ್ಳಿ ವಲಯ ವತಿಯಿಂದ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಎಲ್ಲಾ ದಾನಿಗಳು, ಸೇವಾದಾರರು ಹಾಗೂ ಭಕ್ತಾದಿಗಳಿಗೆ ಆಯೋಜಕರು ಕೃತಜ್ಞತೆ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಧರ್ಮಸ್ಥಳ ಶ್ರೀ ಕ್ಷೇತ್ರ ಗ್ರಾಮ ಯೋಜನೆಯ ನಿರ್ದೇಶಕ ವಿ.ವಿಜಯಕುಮಾರ್ ನಾಗನಾಳ್, ಗಣೇಶ್‌ನಾಯಕ್, ಕಾಶಿ ಮಹೇಶ್, ಕಾರ್ಯದರ್ಶಿಗಳಾದ ತಾರಾಮಣಿ, ಪರಮೇಶ್, ನಾಗರಾಜಚಾರಿ, ಪ್ರಕಾಶ್, ಯಶೋಧ ಡಿ, ಮಂಜುನಾಥ್ ಪಿ.ಎಸ್, ನಿಂಗಣ್ಣ, ಮಹೇಶ್ ಗುಡಿಗೌಡರು, ದೇವಿರಮ್ಮ, ಸುಧಾ, ನಾಗರಾಜು ಕೆ.ಎಸ್, ಮಹಾದೇವಸ್ವಾಮಿ ಮತ್ತು ಗ್ರಾಮದ ಹಿರಿಯರು, ಯುವಕರು, ಮಹಿಳೆಯರು ಹಾಗೂ ಸುತ್ತಮುತ್ತಲ ಗ್ರಾಮಗಳಿಂದ ಆಗಮಿಸಿದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು ಇತರರು ಹಾಜರಿದ್ದರು.

ಅಧಿಕಾರವಿಲ್ಲದಿದ್ದರೂ ಮತದಾರರ ಹೃದಯ ಗೆಲ್ಲೋಣ

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕರೆ



ಹಿರಿಕ್ಯಾತನಹಳ್ಳಿ ಗ್ರಾಮದಲ್ಲಿ ನಿರ್ಮಿಸಿರುವ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಿರುವ ನಿಖಿಲ್

ಹುಣಸೂರು, ಫೆ7– ರಾಜ್ಯದಲ್ಲಿ ಜೆಡಿಎಸ್ ಪಕ್ಷ ಅಧಿಕಾರದಲ್ಲಿ ಇಲ್ಲವಾಗಿದ್ದರೂ ಮತದಾರರ ಸಮಸ್ಯೆಗಳಿಗೆ ಸ್ಪಂದಿಸಿ ಹೃದಯ ಗೆಲ್ಲುವುದರೊಂದಿಗೆ ಪಕ್ಷ ಸಂಘಟಿಸುವ ದಿಕ್ಕಿನಲ್ಲಿ ಯುವ ಘಟಕ ರಾಜ್ಯದಾದ್ಯಂತ ಪ್ರವಾಸ ಕೈಗೊಂಡು ನಡೆಸಿ ಚೈತನ್ಯ ತುಂಬುತ್ತಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ತಾಲೂಕಿನ ಹಿರಿಕ್ಯಾತನಹಳ್ಳಿ ಗ್ರಾಮದಲ್ಲಿ 1 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಭಕ್ತರನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಎಚ್.ಡಿ.ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದರೂ ಅಲ್ಪಾವಧಿಯಲ್ಲಿ ರಾಜ್ಯದ ರೈತ ಸಮುದಾಯದ ಸಾಲ ಮನ್ನಾ ಸೇರಿದಂತ ಹಲವು ಸಮಸ್ಯೆಗೆ ಸ್ಪಂದಿಸಿರುವುದರಿಂದ ಮತದಾರರ ಮನಸ್ಸಿನಲ್ಲಿ ಉಳಿಯಲು ಸಾಧ್ಯವಾಗಿದೆ ಎಂದರು.

ಜೆಡಿಎಸ್ ಕಾರ್ಯಕರ್ತರ ಧ್ವನಿಯಾಗಿ ಪಕ್ಷ ಬಲಿಷ್ಠಗೊಳಿಸಿ ಯುವಕರನ್ನು ರಾಜಕೀಯ ಕ್ಷೇತ್ರಕ್ಕೆ ಕರೆತರುವ ಪ್ರಯತ್ನ ನಡೆದಿದ್ದು, ಯುವ ಸಮುದಾಯ ರಾಜಕೀಯ ಜ್ಞಾನ ಹೊಂದಿರಬೇಕು. ಸಮಾಜದ ಅಭಿವೃದ್ಧಿಗೆ ರಾಜಕೀಯ ಶಕ್ತಿ ಹೊಂದಿರಬೇಕು ಇಲ್ಲವಾದಲ್ಲಿ ಹೊರಗಿನವರು ಆಕ್ರಮಿಸಲಿದ್ದಾರೆ. ಯುವ ಸಮುದಾಯ ನಾಯಕತ್ವದ ಗುಣದೊಂದಿಗೆ ಪ್ರಾದೇಶಿಕ ಪಕ್ಷಗಟ್ಟಿಯಾಗಿಸಲು ಕರೆ ನೀಡಿದರು.

> **ಭವಿಷ್ಯದ ಮುಖ್ಯಮಂತ್ರಿ**
>
> ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರಾಜ್ಯದ ಭವಿಷ್ಯದ ಮೈತ್ರಿ ಪಕ್ಷದ ಮುಖ್ಯಮಂತ್ರಿ ಆಗುವ ಎಲ್ಲಾ ಅರ್ಹತೆ ಇದ್ದು, ಪಕ್ಷದ ಹಿತ ಕಾಯುವ ದೃಷ್ಠಿಯಿಂದ ಮೂರು ಬಾರಿ ಸೋಲು ಅನುಭವಿಸಿದ್ದರೂ ಕಾರ್ಯಕರ್ತರ ಒತ್ತಡಕ್ಕೆ ಮಣಿದು ಚುನಾವಣೆ ಎದುರಿಸಿದ್ದರು. ಅವರ ಆ ಧೈರ್ಯ ರಾಜ್ಯದ ಪ್ರತಿಯೊಬ್ಬ ಕಾರ್ಯಕರ್ತರಿಗೆ ಮನೋಬಲವಾಗಿದೆ. –ಜಿ.ಡಿ.ಹರೀಶ್ ಗೌಡ, ಶಾಸಕ

ಸ್ಥಳೀಯ ಚುನಾವಣೆ: ಮುಂಬರಲಿರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ನಿಮ್ಮನ್ನು ನೀವು ಗುರುತಿಸಿಕೊಳ್ಳುವ ಕೆಲಸ ಆಗಬೇ ಕಾಗಿದೆ, ನಿಮ್ಮ ಕೇರಿಗಳಲ್ಲಿ ಪಕ್ಷ ಕಟ್ಟುವ ಮೂಲಕ ಮನೆಯಿಂದ ಗ್ರಾಮ, ಹೋಬಳಿ ಮತ್ತು ತಾಲೂಕಿನ ಹಂತದವರಗೆ ಜೆಡಿಎಸ್ ಗಟ್ಟಿಗೊಳಿಸಿ ಸ್ಥಳೀಯ ಸಂಸ್ಥೆಗಳಲ್ಲಿ ಕ್ಷೇತ್ರದ ಶಾಸಕರು ನಿಮ್ಮನ್ನು ಗುರುತಿಸಿ ಜವಾಬ್ದಾರಿ ನೀಡಲಿದ್ದಾರೆ. ನಿಮ್ಮ ಗೆಲುವಿಗೆ ನಾವುಗಳು ಸದಾ ನಿಮ್ಮೊಂದಿಗೆ ಕೈಜೋಡಿಸಲಿದ್ದೇವೆ ಎಂದರು.

ಭವಿಷ್ಯದ ನಾಯಕ: ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಡಿ.ಹರೀಶ್ ಗೌಡರಿಗೆ ರಾಜ್ಯದ ಭವಿಷ್ಯದ ನಾಯಕರಾಗುವ ಎಲ್ಲಾ ಲಕ್ಷಣಗಳಿದ್ದು, ಅವರ ದೂರ ದೃಷ್ಟಿ, ಆಲೋಚನೆ ಹಾಗೂ ರಾಜಕೀಯ ಚಾಣಾಕ್ಷತನ ಮತ್ತಷ್ಟು ಮೇಲಕ್ಕೆ ತೆಗೆದುಕೊಂಡು ಹೋಗಬಲ್ಲದು ಎಂದರು.

ತಂಬಾಕು ದರ ಕುಸಿತ ಬೆಳೆಗಾರರನ್ನು ಕಂಗೆಡಿಸಿತ್ತು. ಆ ಸಮಯದಲ್ಲಿ ಕ್ಷೇತ್ರದ ಶಾಸಕ ಹರೀಶ್‌ಗೌಡರ ನೇತೃತ್ವದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಿ ದರ ಚೇತರಿಕೆ ಕಂಡಿತ್ತು. ಈ ಸಾಲಿನಲ್ಲಿ ದರ ಮತ್ತು ತೆರಿಗೆ ಎರಡೂ ಸಮಸ್ಯೆಗೆ ಕೇಂದ್ರದ ಅರ್ಥ ಸಚಿವೆ ಮತ್ತು ವಾಣಿಜ್ಯ ಸಚಿವ ಅವರ ಗಮನಕ್ಕೆ ತಂದು ತೆರಿಗೆ ರದ್ದುಗೊಳಿಸಿದ್ದು, ಮಾರುಕಟ್ಟೆಯಲ್ಲಿ ದರ ಚೇತರಿಕೆಗೆ ಕೈ ಜೋಡಿಸಿದ್ದಾರೆ ಎಂದರು.

ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಹುಣಸೂರು ಕ್ಷೇತ್ರದ ಮತದಾರರು 2023ರ ಚುನಾವಣೆಯಲ್ಲಿ ಯುವ ರಾಜಕಾರಣಿಗೆ ಮಣೆ ಹಾಕಿ ಶಾಸಕರನ್ನಾಗಿ ಆಯ್ಕೆ ಮಾಡಿದ್ದು, ಈ ಗೆಲುವಿನಲ್ಲಿ ಹಿರಿಕ್ಯಾತನಹಳ್ಳಿ ಮತದಾರರ ಕೊಡುಗೆ ವಿಶೇಷವಾಗಿದೆ ಎಂದರು. ಕ್ಷೇತ್ರದ ಅಭಿವೃದ್ಧಿ ಮೂಲಕ ಮತದಾರರ ಋಣ ತೀರಿಸಲು ಸರ್ಕಾರದಲ್ಲಿ ಅನುದಾನ ವಿಲ್ಲವಾಗಿದೆ. ಕಾಂಗ್ರೆಸ್ ಸರ್ಕಾರದ ಉಚಿತ ಗ್ಯಾರಂಟಿ ಯೋಜನೆ ಅಭಿವೃದ್ಧಿ ಕಾಮಗಾರಿ ನಿಂತ ನೀರಾಗಿದೆ. ತಾಲೂಕಿನಲ್ಲಿ ಅಭಿವೃದ್ಧಿ ಕುರಿತು ಮತದಾರರ ಪ್ರಶ್ನಿಸುತ್ತಾರೆ. ಸರ್ಕಾರ ಗ್ಯಾರಂಟಿಗೆ ಅನುದಾನ ಕಾದಿಟ್ಟು ರಾಜ್ಯದ ರಾಜಧಾನಿ ರಸ್ತೆಗಳು ಗುಂಡಿ ಬಿದ್ದಿದ್ದು ಇನ್ನು ಗ್ರಾಮೀಣ ರಸ್ತೆಗಳನ್ನು ಕೇಳುವವರಾರು ಎಂದು ಸರ್ಕಾರಕ್ಕೆ ಚಾಟಿ ಬೀಸಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಯಜಮಾನ ಜಗದೀಶ್, ಕೆ.ಆರ್.ಪೇಟೆ ಶಾಸಕ ಹೆಚ್.ಡಿ.ಮಂಜು, ಮಾಜಿ ಶಾಸಕ ಅಶ್ವಿನ್ ಕುಮಾರ್, ಮಾಜಿ ಮೈಮುಲ್ ಅಧ್ಯಕ್ಷ ಪ್ರಸನ್ನ, ಹರವೇ ಶ್ರೀಧರ್, ಸತೀಶ್ ಪಾಪಣ್ಣ, ಗಣೇಶ್ ಕುಮಾರಸ್ವಾಮಿ, ಡಾ.ಲೋಹಿತ್, ಚಿಕನ್ ಮಧು, ವೆಂಕಟೇಶ್ ಇದ್ದರು.

ನಾಳೆ ಶ್ರೀ ಗೋಣಹಳ್ಳಿ ಮಾರಮ್ಮನ ಜಾತ್ರೆ

ಸುತ್ತೂರು: ನಂಜನಗೂಡು ತಾಲೂಕು ಗೋಣಹಳ್ಳಿ ಗ್ರಾಮದ ಶ್ರೀ ಆದಿಶಕ್ತಿ ಗೋಣಹಳ್ಳಿ ಮಾರಮ್ಮ ರಥೋತ್ಸವ ಹಾಗೂ ವಿಶೇಷ ಪೂಜೆಗಳು 5 ದಿನಗಳ ಕಾಲ ನಡೆಯಲಿದೆ.

ಸೋಮವಾರ (ಫೆ9) 9.45ರಿಂದ ರಥೋತ್ಸವ ಜರುಗಲಿದ್ದು, ಈ ಜಾತ್ರೆಗೆ ಸುಮಾರು 25 ಸಾವಿರ ಭಕ್ತಾದಿಗಳು ಆಗಮಿಸಲಿದ್ದಾರೆ. ಗ್ರಾಮದ ಎಲ್ಲಾ ಮುಖಂಡರ ಸಮ್ಮುಖದಲ್ಲಿ ಕಾರ್ಯಕ್ರಮಗಳು ಜರುಗಲಿವೆ. ಎಲ್ಲಾ ಕಾರ್ಯಕ್ರಮಗಳ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ನಾಳೆ ಮಂಡನಹಳ್ಳಿಯಲ್ಲಿ ಜೋಡಿಲಿಂಗ ಶ್ರೀ ಮಹದೇಶ್ವರಸ್ವಾಮಿ ದೇವಾಲಯ ಉದ್ಘಾಟನೆ

ಕೊಟ್ಟ ಮಾತಿಗೆ ತಪ್ಪದೆ ಸ್ವಂತ ಮೂರೂವರೆ ಎಕರೆ ಜಮೀನು ಮಾರಿ 2.25 ಕೋಟಿ ವೆಚ್ಚದಲ್ಲಿ ದೇವಸ್ಥಾನ ನಿರ್ಮಿಸಿಕೊಟ್ಟ ಮಾವಿನಹಳ್ಳಿ ಸಿದ್ದೇಗೌಡರು

ಮೈಸೂರು, ಫೆ.7–ಮೈಸೂರು ತಾಲೂಕು ಜಯಪುರ ಹೋಬಳಿಯ ಮಂಡನಹಳ್ಳಿ ಗ್ರಾಮದಲ್ಲಿ 2.25ಕೋಟಿ ರೂ. ವೆಚ್ಚದಲ್ಲಿ ಮಾವಿನಹಳ್ಳಿ ಎಸ್.ಸಿದ್ದೇಗೌಡರು ನೂತನವಾಗಿ ನಿರ್ಮಿಸಿರುವ ಜೋಡಿಲಿಂಗ ಶ್ರೀ ಮಹದೇಶ್ವರ ಸ್ವಾಮಿ ದೇವಾಲಯ ಉದ್ಘಾಟನೆ ಮತ್ತು ಧಾರ್ಮಿಕ ಸಭಾ ಕಾರ್ಯಕ್ರಮ ಫೆ.9ರಂದು ನಡೆಯಲಿದ್ದು, ಫೆ.10ರಂದು ಮಂಗಳವಾರ ಮುಂಜಾನೆ ಕೊಂಡೋತ್ಸವ ಜರುಗಲಿದೆ.

ಇಂದಿನಿಂದಲೇ ಪೂಜಾ ಕೈಂಕರ್ಯಗಳು ಆರಂಭ



ನೂತನವಾಗಿ ನಿರ್ಮಿಸಿರುವ ಜೋಡಿಲಿಂಗ ಶ್ರೀ ಮಹದೇಶ್ವರ ಸ್ವಾಮಿ ದೇವಾಲಯ

ಬರಡನಪುರ ಗುರು ಮಹಂತೇಶ್ವರ ಮಠದ ಪೀಠಾಧ್ಯಕ್ಷರಾದ ಶ್ರೀ ಪರಶಿವಮೂರ್ತಿ ಸ್ವಾಮೀಜಿ ಮತ್ತು ಪುರ ಬಸವೇಶ್ವರ ಪಟ್ಟದ ಮಠದ ಪೀಠಾಧ್ಯಕ್ಷರಾದ ಶ್ರೀ ಚಂದ್ರಶೇಖರ ಸ್ವಾಮೀಜಿಯವರ ನೇತೃತ್ವದಲ್ಲಿ ಫೆ.8ರಂದು ಸಂಜೆ ಗಂಗಾಪೂಜೆ, ಗೋಪೂಜೆ, ಗಣಪತಿ ಹೋಮ ನಡೆಯಲಿದೆ. ನಂತರ ರಾತ್ರಿ 10 ಗಂಟೆಗೆ ಬದನವಾಳು ಶಿವಕುಮಾರ ಶಾಸ್ತ್ರಿ ಮತ್ತು ತಂಡದವರಿಂದ ಶಿವಕಥೆ ನಡೆಯಲಿದೆ.

ಫೆ.9ರಂದು ಮುಂಜಾನೆ 4ರಿಂದ 6ಗಂಟೆಯೊಳಗೆ ಬ್ರಾಹ್ಮಿ ಮುಹೂರ್ತದಲ್ಲಿ ಹೋಮ ಕಾರ್ಯಗಳು ನಡೆಯುತ್ತವೆ. ಅಷ್ಟ ಕಳಸ ಸ್ಥಾಪನೆ ಮಾಡಿ, ಪೂಜೆ ಸಲ್ಲಿಸಿದ ನಂತರ ನವಗ್ರಹ ಹೋಮ, ರುದ್ರಹೋಮ, ನಂತರ ರುದ್ರಾಭಿಷೇಕ ನೆರವೇರುತ್ತದೆ. ಬೆಳಿಗ್ಗೆ 6.30ರಿಂದ 8.30ರ ಸಮಯದಲ್ಲಿ ಗಂಗಾ ತೀರದಿಂದ ದೇವರ ಬಿರುದು ಬಾವಲಿಗಳು, ಛತ್ರಿ ಚಾಮರಗಳು, ಪೂರ್ಣಕುಂಭ ಸ್ವಾಗತದೊಂದಿಗೆ, ವೀರಗಾಸೆ, ಮಂಗಳವಾದ್ಯಗಳೊಡನೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಬರುವ ಮೂಲಕ ದೇವಾಲಯ ತಲುಪಲಿದೆ. ಬೆಳಿಗ್ಗೆ 9.30ಕ್ಕೆ ಮಹಾಮಂಗಳಾರತಿ ನಡೆಯುತ್ತದೆ. ಬರಡನಪುರ ಗ್ರಾಮದ ಗಣೇಶ ಮೂರ್ತಿ ಸ್ವಾಮೀಜಿ ಮತ್ತು ತಂಡದವರಿಂದ ಪೂಜಾ ಕೈಂಕರ್ಯಗಳು ನಡೆಯಲಿವೆ.

ಫೆ.9ರಂದು ಬೆಳಿಗ್ಗೆ 10.30ಕ್ಕೆ ಧಾರ್ಮಿಕ ಸಭೆ ಕಾರ್ಯಕ್ರಮ ಆಯೋಜಿಸಿದ್ದು, ಸುತ್ತೂರು ಶ್ರೀಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ದಿವ್ಯಸಾನ್ನಿಧ್ಯ ವಹಿಸುವರು. ತುಮಕೂರು ಸಿದ್ದಗಂಗಾ ಮಠದ ಪರಮಪೂಜ್ಯ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು, ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಶಿವಸಿದ್ದೇಶ್ವರ ಮಹಾಸ್ವಾಮಿಗಳು, ಕನಕಪುರ ದೇಗುಲ ಮಠದ ಕಿರಿಯ ಶ್ರೀಗಳಾದ ಡಾ.ಚನ್ನಬಸವ ಸ್ವಾಮಿಜಿ, ದೇವನೂರು ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದ ಮಹಾಂತಸ್ವಾಮಿಗಳು, ಮೈಸೂರು ಕುಂದೂರು ಮಠದ ಡಾ.ಶರತ್ಚಂದ್ರ ಸ್ವಾಮೀಜಿ, ಮೈಸೂರು ಕುದೇರು ಮಠದ ಗುರುಶಾಂತ ಸ್ವಾಮಿಗಳು, ಪಡುವಲು ವಿರಕ್ತ ಮಠದ ಮಹದೇವ ಸ್ವಾಮೀಜಿ, ಮಾದಹಳ್ಳಿ ಉಕ್ಕಿನಕಂತೆ ಮಠದ ಸಾಂಬಶಿವ ಸ್ವಾಮೀಜಿ, ಬೇಬಿಬೆಟ್ಟ ರಾಮಯೋಗೀಶ್ವರ ಮಠದ ಶಿವಬಸವ ಸ್ವಾಮೀಜಿ, ಸಂಗಮ ಕಾರ್ಯಸ್ವಾಮಿ ಮಠದ ಮಹೇಶ್ವರ ಸ್ವಾಮೀಜಿ, ಹಂಚೀಪುರ ಸಿದ್ದಮಲ್ಲೇಶ್ವರ ಪಟ್ಟದ ಮಠದ ತೋಂಟದಾರ್ಯ ಸ್ವಾಮೀಜಿ, ಮಂಡನಹಳ್ಳಿ ನಾಗೇಂದ್ರ ಆರಾಧ್ಯ ಸೇರಿ ಹರಗೂರು ಚರಮೂರ್ತಿಗಳು ಧಾರ್ಮಿಕ ಸಭೆಯಲ್ಲಿ ಭಾಗವಹಿಸಿ ಆಶೀರ್ವಚನ ನೀಡುವರು. ಭಾನುವಾರ, ಸೋಮವಾರ, ಮಂಗಳವಾರ ಮೂರು ದಿನಗಳು ನಿರಂತರ ದಾಸೋಹ ನಡೆಯಲಿದೆ.

> 2018ರಲ್ಲಿ ಇಂದಿನ ಚಾಮುಂಡೇಶ್ವರಿ ಕ್ಷೇತ್ರ ಶಾಸಕ ಜಿ.ಟಿ.ದೇವೇಗೌಡರು ಮತ್ತು ನಾನು ಜೆಡಿಎಸ್‌ನಲ್ಲಿದ್ದಾಗ ಗ್ರಾಮಸ್ಥರ ಮನವಿ ಮೇರೆಗೆ ದೇವಾಲಯ ಕಟ್ಟಿಸಿಕೊಡಲು ಶಾಸಕರೇ ಒಪ್ಪಿಕೊಂಡಿದ್ದರು. ಬದಲಾದ ರಾಜಕೀಯ ಸನ್ನಿವೇಶದಿಂದ ಶಾಸಕರು ದೇವಾಲಯ ಕಟ್ಟಕೊಡಲು ಮನಸ್ಸು ಮಾಡಲಿಲ್ಲ. ಅನಂತರ 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಚುನಾವಣೆ ಸೋತೆ. ಚುನಾವಣೆಯಾದ 6 ತಿಂಗಳು ಬಳಿಕ ಮಂಡನಹಳ್ಳಿ ಗ್ರಾಮಸ್ಥರಿಗೆ ಕೊಟ್ಟ ಮಾತು ತಪ್ಪಬಾರದೆಂದು ನನ್ನ ಸ್ವಂತ ಮೂರೂವರೆ ಎಕರೆ ಜಮೀನು ಮಾರಾಟ ಮಾಡಿ 2.25ಕೋಟಿ ವೆಚ್ಚದಲ್ಲಿ ಜೋಡಿಲಿಂಗ ಮಹದೇಶ್ವರ ದೇವಸ್ಥಾನವನ್ನು ಕಟ್ಟಿ, ಕೊಟ್ಟು ಮಾತು ಉಳಿಸಿಕೊಂಡಿದ್ದೇನೆ. -ಮಾವಿನಹಳ್ಳಿ ಎಸ್.ಸಿದ್ದೇಗೌಡ



ದೇವಸ್ಥಾನದ ಹಿನ್ನೆಲೆ: ಮಂಡನಹಳ್ಳಿ ಗ್ರಾಮದ ರೈತರೊಬ್ಬರ ಜಮೀನಿನಲ್ಲಿ 05–04–1962 ರಂದು ಜೋಡಿಲಿಂಗ ಗೋಚರವಾಗಿದ್ದು, ನಂತರ ಚಿಕ್ಕದಾಗಿ ಗುಡಿ ಕಟ್ಟಲಾಗಿತ್ತು. ಮಾವಿನಹಳ್ಳಿ ಎಸ್.ಸಿದ್ದೇಗೌಡರವರನ್ನು ದೇವಾಲಯ ನಿರ್ಮಿಸಿಕೊಡುವಂತೆ ಗ್ರಾಮಸ್ಥರೆಲ್ಲರು ಒಟ್ಟಿಗೆ ಸೇರಿ ಮನವಿ ಮಾಡಿಕೊಂಡಿದ್ದೆವು. ಶಾಸಕ ಜಿ.ಟಿ.ದೇವೇಗೌಡರು ಬಂದು ದೇವಾಲಯ ನಿರ್ಮಾಣಕ್ಕೆ ಭೂಮಿಪೂಜೆ ಮಾಡಿದ್ದರು. ದೇವಾಲಯ ಕಟ್ಟಿಸಿಕೊಡಲು ಮಾತು ಕೊಟ್ಟಿದ್ದ ಮಾವಿನಹಳ್ಳಿ ಸಿದ್ದೇಗೌಡರು 2023ರ ವಿಧಾನಸಭಾ ಚುನಾವಣೆಯಲ್ಲಿ ಸೋತರು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿ 2.25 ಕೋಟಿ ವೆಚ್ಚದಲ್ಲಿ ಮಂಡನಹಳ್ಳಿ ಜೋಡಿಲಿಂಗ ಮಹದೇಶ್ವರ ದೇವಾಲಯವನ್ನು ಸ್ವಂತ ಹಣದಲ್ಲಿ ಅಚ್ಚುಕಟ್ಟಾಗಿ ನಿರ್ಮಾಣ ಮಾಡಿಸಿಕೊಟ್ಟರು. ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಎಸ್.ಸಿದ್ದೇಗೌಡರು ಮತ್ತು ಅವರ ಪತ್ನಿ ಕಮಲಮ್ಮ ಅವರನ್ನು ಧಾರ್ಮಿಕ ಸಭೆಯಲ್ಲಿ ಅದ್ಧೂರಿಯಾಗಿ ಸನ್ಮಾನಿಸಲಾಗುವುದು ಎಂದು ಮಂಡನಹಳ್ಳಿ ಗ್ರಾಮಸ್ಥರು ತಿಳಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತೀ ಟೀಚರ್(ಕ) + ಮನಶಂಕರ ವರಪ್ರಸಾದ್ (ತೆ)	1+3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರಕ್ಕಸಪುರದೋಳ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮರ್ದಾನಿ–3 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ವಿತ್ ಲವ್ (ತ)	4 ಪ್ರದರ್ಶನಗಳು
ಸಂಗಂ	
ಕರಿಕಾಡ (ಕ) + ಜೆ.ಪಿ.(ಕ)	2+2 ಪ್ರದರ್ಶನಗಳು
ಲಿಡೋ	
ಕರಗ (ಕ) + ಶಿವಲೀಲಾ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾವುತ (ಕ)	4 ಪ್ರದರ್ಶನಗಳು

ಮಾಜಿ ಶಾಸಕ ಬಸ್ರೂರು ಅಣ್ಣಪ್ಪ ಹೆಗ್ಡೆ ನಿಧನ



ಕುಂದಾಪುರ, ಫೆ.7– ಮಾಜಿ ಶಾಸಕ, ಧಾರ್ಮಿಕ, ಸಹಕಾರ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ಬಸ್ರೂರು ಅಪ್ಪಣ್ಣ ಹೆಗ್ಡೆ ಶನಿವಾರ ನಿಧನರಾಗಿದ್ದಾರೆ. ಅವರಿಗೆ 91 ವರ್ಷ ವಯಸ್ಸಾಗಿತ್ತು. ವಯೋಸಹಜ ಕಾಯಿಲೆಯಿಂದ ಅವರು ಕೊನೆಯುಸಿರೆಳೆದರು.

1983–1985 ಅವಧಿಯಲ್ಲಿ ಜನತಾ ಪಕ್ಷದಿಂದ ಉಡುಪಿ ಜಿಲ್ಲೆಯ ಬೈಂದೂರು ಕ್ಷೇತ್ರದ ಶಾಸಕರಾಗಿದ್ದ ಅಪ್ಪಣ್ಣ ಹೆಗ್ಡೆ ಅವರು ರಾಜಕೀಯ ಜೀವನದಲ್ಲಿ ಜನಸಾಮಾನ್ಯರ ಸಮಸ್ಯೆಗಳಿಗೆ ಧ್ವನಿಯಾಗಿದ್ದು, ಜನಪ್ರತಿನಿಧಿಯಾಗಿ ಪ್ರಾಮಾಣಿಕ ಸೇವೆ ಸಲ್ಲಿಕೆಗೆ ಹೆಸರುವಾಸಿಯಾಗಿದ್ದರು. ಶಾಸಕರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದರು.

ಧಾರ್ಮಿಕ ಕ್ಷೇತ್ರದಲ್ಲಿಯೂ ಅವರ ಸೇವೆ ಗಣನೀಯವಾಗಿದ್ದು, ಅನೇಕ ದೇವಾಲಯಗಳ ಅಭಿವೃದ್ಧಿ, ಧಾರ್ಮಿಕ ಕಾರ್ಯಕ್ರಮಗಳ ಆಯೋಜನೆ ಹಾಗೂ ಸಂರಕ್ಷಣೆಗೆ ಅವರು ಮುನ್ನಡೆ ನೀಡಿದ್ದರು. ರಾಜಕೀಯ ಹಾಗೂ ನಿಜ ಜೀವನದಲ್ಲಿ ಅಜಾತ ಶತ್ರು ಎನಿಸಿಕೊಂಡಿದ್ದರು. ಸಾಮಾಜಿಕ ಕ್ಷೇತ್ರಗಳಲ್ಲೂ ತೊಡಗಿಸಿಕೊಂಡಿದ್ದ ಅವರು ತಾಲೂಕು ಕೋ ಅಪರೇಟಿವ್ ಮಾರಾಟ ಸೊಸೈಟಿ ಹಾಗೂ ಭೂ ಅಭಿವೃದ್ಧಿ ಬ್ಯಾಂಕ್ ಉಪಾಧ್ಯಕ್ಷರಾಗಿ, ಬಸ್ರೂರು ಸೇವಾ ಸಹಕಾರಿ ಸಂಘದ ಅಧ್ಯಕ್ಷರಾಗಿ, ಬಸ್ರೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮುಖ್ಯಸ್ಥರಾಗಿ, ಕೊಲ್ಲೂರು ಮೂಕಾಂಬಿಕಾ ದೇವಳದ ಅಧ್ಯಕ್ಷರಾಗಿ ಕೂಡ ಸೇವೆ ಸಲ್ಲಿಸಿದ್ದಾರೆ. ಮೃತರು ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರನ್ನು ಅಗಲಿದ್ದಾರೆ.

ಫೆ.10ರಂದು ಕಾಯಕ ಶರಣರ ಜಯಂತಿ

ಮೈಸೂರು,ಫೆ.7– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕಾಯಕ ಶರಣರ ಜಯಂತಿ ಯನ್ನು ಫೆ.10 ರಂದು ಬೆಳಗ್ಗೆ 11.30 ಘಂಟೆಗೆ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್ ಕುಮಾರ್ ಸಿ. ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿ ಸಿದ್ದೇಗೌಡ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಎಂ, ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ ಅಧ್ಯಕ್ಷೆ ಹೆಚ್.ಡಿ. ಗಣೇಶ್ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್ ಆಗಮಿಸಲಿದ್ದಾರೆ.

ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ರವಿಶಂಕರ್ ಡಿ., ಟಿ.ಎಸ್. ಶ್ರೀವತ್ಸ, ಜಿ.ಡಿ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಹೆಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಡಾ. ಯತೀಂದ್ರ ಎಸ್, ಕೆ. ವಿವೇಕಾನಂದ, ಕೆ. ಶಿವಕುಮಾರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ ಹಾಗೂ ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ಯಾರಿಜಾನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಉರಿಲಿಂಗ ಪೆದ್ದಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಜ್ಞಾನಪ್ರಕಾಶ ಸ್ವಾಮೀಜಿ ಹಾಗೂ ಅಶೋಕಪುರಂನ ಆದಿ ಕರ್ನಾಟಕ, ಛಲವಾದಿ ಮಹಾಸಂಸ್ಥಾನ ಗುರುಪೀಠದ ಡಾ.ಜ್ಞಾನಸ್ವರೂಪಾನಂದ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ಗಾಂಧಿ ಅಧ್ಯಯನ ಕೇಂದ್ರದ ಉಪನ್ಯಾಸಕ ಡಾ. ಮಂಜು.ಟಿ ಹಾಗೂ ನಿವೃತ್ತ ಅಧಿಕಾರಿಗಳು ಮತ್ತು ಲೇಖಕರಾದ ಕೆ.ಪಿ ರಾಚಯ್ಯ ಉಪನ್ಯಾಸ ನೀಡುವರು.

ಕುಕ್ಕರಹಳ್ಳಿಯಲ್ಲಿ ಮಾತೆ ರಮಾಬಾಯಿ ಅಂಬೇಡ್ಕರ್ ಜನ್ಮದಿನಾಚರಣೆ



ಮೈಸೂರಿನ ಕುಕ್ಕರಹಳ್ಳಿಯ ಡಾ.ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಮಾತೆ ರಮಾಬಾಯಿ ಅಂಬೇಡ್ಕರ್ ಅವರ ಜನ್ಮದಿನಾಚರಣೆ ಆಚರಿಸಲಾಯಿತು.

ಮೈಸೂರು,ಫೆ.7(ಪಿಎಂ)– ನಗರದ ಕುಕ್ಕರಹಳ್ಳಿಯ ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ದಲಿತ ಒಕ್ಕೂಟದ ವತಿಯಿಂದ ಮಾತೆ ರಮಾಬಾಯಿ ಅಂಬೇಡ್ಕರ್ ಜನ್ಮದಿನಾಚರಣೆ ಆಚರಿಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಹಾಗೂ ರಮಾಬಾಯಿ ಅವರ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಚಾಮರಾಜ ಕ್ಷೇತ್ರದ ಮಾಜಿ ಶಾಸಕರೂ ಆದ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಭಾರತದ ಸಂವಿಧಾನವು ಇಡೀ ಪ್ರಪಂಚದಲ್ಲೇ ಅತ್ಯಂತ ಶ್ರೇಷ್ಠವಾದುದು. ಅದರ ಶಿಲ್ಪಿ ಡಾ.ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಕೊಡುಗೆಗಳಿಗೆ ಮಾತೆ ರಮಾಬಾಯಿ ಸ್ಫೂರ್ತಿಯೂ ಕಾರಣ. ರಮಾಬಾಯಿ ಅವರು ತ್ಯಾಗದ ಸಂಕೇತ. ಬಾಬಾ ಸಾಹೇಬರ ಶಿಕ್ಷಣ ಮತ್ತು ಸಾಮಾಜಿಕ ಹೋರಾಟದ ಹಾದಿಯಲ್ಲಿ ಬಂಡೆಯಂತೆ ನಿಂತವರು ರಮಾಬಾಯಿ. ಅವರು ಪತಿ ಅಂಬೇಡ್ಕರ್ ಅವರಿಗೆ ಬೆನ್ನೆಲುಬಾಗಿದ್ದರು ಎಂದು ಸ್ಮರಿಸಿದರು.

'ರಾಮಾಯಿ' ಎಂದೇ ಜನಪ್ರಿಯರಾದ ಇವರು, ಅಂಬೇಡ್ಕರ್ ಅವರ ಯಶಸ್ಸಿನ ಹಿಂದಿನ ಶಕ್ತಿ. ಪ್ರತಿಯೊಬ್ಬ ಮಹಿಳೆಯರ ಆದರ್ಶಮಾತೆ ಈ ಮಹಾತಾಯಿ ಎಂದು ಗೌರವ ಸಲ್ಲಿಸಿದರು. ನಗರ ಪಾಲಿಕೆ ಮಾಜಿ ಸದಸ್ಯೆ ವೇದಾವತಿ, ಬಿಜೆಪಿ ರಾಜ್ಯ ಎಸ್‌ಸಿ ಮೋರ್ಚಾ ಕಾರ್ಯದರ್ಶಿ ಪರಮಾನಂದ, ನಗರ ಪ್ರಧಾನ ಕಾರ್ಯದರ್ಶಿಗಳಾದ ಸೋಮಸುಂದರ್, ಸಿ.ಕೆ.ರುದ್ರಮೂರ್ತಿ, ಬಿ.ಎಂ.ರಘು, ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಕೆ.ಗಿರೀಶ್, ಆರ್. ಸೋಮಣ್ಣ, ರೈಲ್ವೆ ಸಲಹಾ ಸಮಿತಿ ಸದಸ್ಯ ಚೆಲುವ, ನಗರ ಬಿಜೆಪಿ ಕಾರ್ಯದರ್ಶಿ ಇ.ರಮೇಶ್‌ಗೌಡ, ಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟು, ಮುಖಂಡರಾದ ಕಾರ್ತಿಕ್ ಮರಿಯಪ್ಪ, ನವೀನ, ಆಶಾಲಕ್ಷ್ಮೀ, ಶುಭಲಕ್ಷ್ಮೀ, ಮಹದೇವು, ಶಿವಶಂಕರ್, ಪುಷ್ಪ, ಸುನೀಲ್, ಹರೀಶ್, ರಾಕೇಶ್, ಪ್ರಕೃತ್, ಹೇಮರಾಜ್, ಪವನ್, ಪ್ರಮೋದ್ ಮತ್ತಿತರರು ಹಾಜರಿದ್ದರು.

ಫೆ.11, 12 ರಂದು ಹೈಲೈಫ್ ಬ್ರೈಡ್ಸ್ ಉಡುಪು, ಆಭರಣದ ಪ್ರದರ್ಶನ–ಮಾರಾಟ

ಮೈಸೂರು,ಫೆ.7(ಎಂಟಿವೈ)– ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್ ಸಭಾಂಗಣದಲ್ಲಿ ಫೆ.11 ಮತ್ತು 12ರಂದು 'ಹೈ ಲೈಫ್ ಬ್ರೈಡ್ಸ್' ಹೊಸ ವಿನ್ಯಾಸದ ಉಡುಪು ಹಾಗೂ ಮದುವೆ ಸಮಾರಂಭಕ್ಕಾಗಿ ವಧು–ವರರಿಗೆ ಉಡುಪು, ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದೆ ಎಂದು ಪ್ರದರ್ಶನದ ಆಯೋಜಕರಾದ ಶೋಮಿಕಾ ಎಸ್. ರಾವ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ ಪ್ರತಿ ವರ್ಷ 'ಹೈ ಲೈಫ್ ಬ್ರೈಡ್ಸ್' ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸುತ್ತಾ ಬಂದಿದ್ದು, ಮದುವೆ ಸಂಭ್ರಮದಲ್ಲಿರುವ ವಧು–ವರರಿಗೆ ತಮಗೆ ಇಷ್ಟವಾದ ಹಾಗೂ ಹೊಸ ಹೊಸ ವಿನ್ಯಾಸದ ಉಡುಪುಗಳನ್ನು ಒಂದೇ ಸ್ಥಳದಲ್ಲಿ ಸಿಗುವಂತೆ ಮಳಿಗೆ ತೆರೆಯಲಾಗುತ್ತಿತ್ತು. ಇದು ಮೈಸೂರಿನ ಜನರ ಮನಸೂರೆಗೊಂಡಿತ್ತು. ಇದೀಗ ಈ ಬಾರಿಯೂ 45 ಮಳಿಗೆಗಳಲ್ಲಿ 'ಹೈ ಲೈಫ್ ಬ್ರೈಡ್ಸ್' ಫ್ಯಾಷನ್ ಉಡುಪು, ಮದುವೆ ಉಡುಪು, ಆಭರಣ ಸೇರಿದಂತೆ ಇನ್ನಿತರ ವಸ್ತುಗಳ ಮಾರಾಟ ಮೇಳ ಆಯೋಜಿಸಲಾಗಿದೆ. ಫೆ.11 ಮತ್ತು 12ರಂದು ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ ಹೈ ಲೈಫ್ ಬ್ರೈಡ್ಸ್ ಉಡುಗೆ ಮತ್ತು ಫ್ಯಾಷನ್ ಉತ್ಪನ್ನ, ಆಭರಣ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಪ್ರವೇಶ ಶುಲ್ಕವಿಲ್ಲದೆ ವೀಕ್ಷಿಸಬಹುದಾಗಿದೆ ಎಂದು ತಿಳಿಸಿದರು.

ಈ ಮೇಳದಲ್ಲಿ ಸಂಸ್ಕೃತಿ ಮತ್ತು ಪರಂಪರೆ ಬಿಂಬಿಸುವ ಉಡುಪು, ದೇಶದ ವಿವಿಧ ಭಾಗಗಳ ಡಿಸೈನರ್ ಲೆಹೆಂಗಾ, ಸೀರೆ, ಸಮಕಾಲೀನ ಗೌನ್‌ಗಳು, ಆಭರಣಗಳ ಮಾರಾಟಕ್ಕಿಡಲಾಗುತ್ತದೆ. ಈ ಮೇಳದಲ್ಲಿ 100 ರೂ.ನಿಂದ 1 ಲಕ್ಷ ರೂ.ವರೆಗಿನ ವಸ್ತುಗಳು ಲಭ್ಯವಿರಲಿವೆ ಎಂದರು.


ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮ ಸಂಯೋಜಕ ಎಸ್. ಶ್ರೀಕಾಂತ್ ಇದ್ದರು.

ಮೈಸೂರು ಸಂತೆ–2026



ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರಿನ ಸಾಂಸ್ಕೃತಿಕ ಸೊಬಗು, ಪರಂಪರೆ, ಪ್ರವಾಸೋದ್ಯಮ, ವಾಣಿಜ್ಯೋದ್ಯಮ ಹಾಗೂ ಸಂಗೀತ, ಹಾಸ್ಯ, ನೃತ್ಯ, ಮನರಂಜನೆ ನೀಡುವ ಉದ್ದೇಶದಿಂದ ಆಯೋಜಿಸಿರುವ 'ಮೈಸೂರು ಸಂತೆ–2026' ಎರಡನೇ ದಿನವಾದ ಶನಿವಾರ ಕಳೆಗಟ್ಟಿತ್ತು.

ಪ್ರಸಕ್ತ ಬಜೆಟ್‌ನಲ್ಲಿ ವಿಶ್ವಕರ್ಮ ಸಮುದಾಯಕ್ಕೆ ಆದ್ಯತೆ ನೀಡಲು ಆಗ್ರಹ



ಮೈಸೂರು, ಫೆ.7(ಎಂಟಿವೈ)– ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿರುವ ವಿಶ್ವಕರ್ಮ ಸಮುದಾಯದ ಏಳಿಗೆಗಾಗಿ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ 100 ಕೋಟಿ ರೂ. ಮೀಸಲಿಡುವುದೂ ಸೇರಿದಂತೆ ವಿಶ್ವಕರ್ಮ ಸಮುದಾಯದ ಅಭಿವೃದ್ಧಿಗೆ ವಿವಿಧ ಯೋಜನೆ ಘೋಷಿಸುವಂತೆ ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಅಧ್ಯಕ್ಷ ಕೆಂಡಗಣ್ಣ ವಿಶ್ವಕರ್ಮ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 40 ಲಕ್ಷದ ವಿಶ್ವಕರ್ಮ ಸಮುದಾಯದ ಜನರಿದ್ದಾರೆ. ಆದರೂ, ಶೈಕ್ಷಣಿಕ, ರಾಜಕೀಯ, ಆರ್ಥಿಕವಾಗಿ ಇನ್ನೂ ಸಬಲೀಕರಣವಾಗಿಲ್ಲ. ಹೀಗಾಗಿ ಈ ಸಮುದಾಯವನ್ನು ಮುಖ್ಯ ವಾಹಿನಿಗೆ ತರಲು ಸಾಧ್ಯವಾಗುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಬಜೆಟ್‌ನಲ್ಲಿ ಈ ಸಮುದಾಯಕ್ಕೆ ಆದ್ಯತೆ ನೀಡಬೇಕು. ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ಬಜೆಟ್‌ನಲ್ಲಿ 100 ಕೋಟಿ ಮೀಸಲಿಡಬೇಕು. ಅಮರಶಿಲ್ಪಿ ಜಕಣಾಚಾರಿ ಪುತ್ಥಳಿಯನ್ನು ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ಸ್ಥಾಪಿಸಬೇಕು. ಸಮುದಾಯದ ಅರೆಮಾದನಹಳ್ಳಿ ಮಹಾ ಸಂಸ್ಥಾನ ಪೀಠಕ್ಕೆ ಎರಡು ಕೋಟಿ ಅನುದಾನ ನೀಡಬೇಕು. ಸಮುದಾಯದ ಧಾರ್ಮಿಕ ಪೀಠಗಳ ಅಧ್ಯಕ್ಷರು ಮನವಿ ಸಲ್ಲಿಸಿದರೆ, ತಲಾ ಒಂದು ಕೋಟಿ ಅನುದಾನ ನೀಡಬೇಕು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಶ್ವಕರ್ಮ ಅಧ್ಯಯನ ಪೀಠ ಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಪದಾಧಿಕಾರಿಗಳಾದ ಸತೀಶ್ ಆಯರಹಳ್ಳಿ, ಶ್ರೀಲಕ್ಷ್ಮೀ, ಸಿದ್ದೇಶ್, ಮಂಜು, ಬಿ. ರಾಜು, ಕೃಷ್ಣಮೂರ್ತಿ, ಶಿವಶಂಕರ್, ನಾಗರಾಜು ಇತರರು ಇದ್ದರು.

ಸೋಲಾರ್ ಬೆಳಕಲ್ಲಿ ಝಗಮಗಿಸಲಿದೆ ವಿಧಾನಸೌಧ

ಪಾರ್ಕಿಂಗ್ ಪ್ರದೇಶದಲ್ಲಿ 'ಸೋಲಾರ್ ಪ್ಯಾನಲ್ಸ್' ಅಳವಡಿಕೆ; ವರ್ಷಕ್ಕೆ ಲಕ್ಷಾಂತರ ರೂ. ವಿದ್ಯುತ್ ಉಳಿತಾಯ



ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿ ಸೌರ ಫಲಕಗಳನ್ನು ಅಳವಡಿಸಿರುವುದು.

ಬೆಂಗಳೂರು, ಫೆ.7– ರಾಜ್ಯದ ಆಡಳಿತ ಶಕ್ತಿ ಕೇಂದ್ರ, ವಿಧಾನಸೌಧ ಹಾಗೂ ವಿಕಾಸಸೌಧ ಇನ್ನು ಮುಂದೆ ಸೌರಶಕ್ತಿ ಬೆಳಕಲ್ಲಿ ಝಗಮಗಿಸಲಿದೆ.

ಸ್ವಚ್ಛ ಹಾಗೂ ನವೀಕರಿಸಬಹುದಾದ ಇಂಧನ ಬಳಕೆಗೆ ಉತ್ತೇಜನ ನೀಡುವ ಮಹತ್ವದ ಕ್ರಮವಾಗಿ ವಿಧಾನಸೌಧ ಮತ್ತು ವಿಕಾಸಸೌಧ ಆವರಣದಲ್ಲಿ ಸೌರ ವಿದ್ಯುತ್ ಪ್ಯಾನೆಲ್‌ಗಳನ್ನು ಅಳವಡಿಸಲಾಗಿದ್ದು, ಈ ಕ್ರಮವು ಇತರ ಸರ್ಕಾರಿ ಕಟ್ಟಡಗಳಿಗೂ ಮಾದರಿಯಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಧಾನಸೌಧವು ಐತಿಹಾಸಿಕ ಕಟ್ಟಡವಾಗಿದ್ದು, ಮೇಲ್ಛಾವಣಿಯಲ್ಲಿ ಸ್ಥಳಾಭಾವ ಇರುವ ಕಾರಣ ಮೇಲ್ಛಾವಣಿಯಲ್ಲಿ ಪ್ಯಾನೆಲ್ ಅಳವಡಿಸುವುದಕ್ಕೆ ಅವಕಾಶ ಇಲ್ಲ. ಹೀಗಾಗಿ ಕಟ್ಟಡದ ಆವರಣದಲ್ಲಿರುವ ಪಾರ್ಕಿಂಗ್ ಪ್ರದೇಶದಲ್ಲಿ ಸೌರ ಪ್ಯಾನೆಲ್‌ಗಳನ್ನು ಅಳವಡಿಸಲಾಗಿದೆ ಎಂದು ಹೇಳಿದ್ದಾರೆ.

ಸುಸ್ಥಿರ ಇಂಧನಕ್ಕಾಗಿ ದೀರ್ಘಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ SELCO ಫೌಂಡೇಶನ್‌ನೊಂದಿಗೆ ಖಾಸಗಿ ಸಾರ್ವಜನಿಕ ಸಹಭಾಗಿತ್ವದ ಅಡಿಯಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಪ್ರಸ್ತುತ ಸಂಸ್ಥೆಯು ವಿಧಾನಸೌಧ ಮತ್ತು ವಿಕಾಸಸೌಧ ಆವರಣದ ವಿವಿಧ ಸ್ಥಳಗಳಲ್ಲಿ ಪಾರಂಪರಿಕ ರಚನೆಗೆ ಧಕ್ಕೆಯಾಗದಂತೆ ಸೌರ ಫಲಕಗಳನ್ನು ಸ್ಥಾಪಿಸುತ್ತಿದ್ದಾರೆ. ಇದರಿಂದ ಸುಮಾರು 300 ಕಿಲೋವಾಟ್ ವಿದ್ಯುತ್ ಉತ್ಪಾದನೆ ಸಾಧ್ಯವಾಗಲಿದ್ದು, ಕಟ್ಟಡದ ಒಟ್ಟು ವಿದ್ಯುತ್ ಅವಶ್ಯಕತೆಯ ಪೈಕಿ ಶೇ.12ರಷ್ಟು ಮಾತ್ರ ಇದು ಪೂರೈಸಲಿದೆ.

ವಾರ್ಷಿಕ 20 ಲಕ್ಷ ಉಳಿತಾಯ: ವಿಧಾನಸೌಧ ಮತ್ತು ವಿಕಾಸಸೌಧಗಳಲ್ಲಿ ಸುಮಾರು 1,000ಕ್ಕೂ ಹೆಚ್ಚು ಕೊಠಡಿಗಳು ಇದ್ದು, ತಿಂಗಳಿಗೆ ರೂ.12 ಲಕ್ಷದಿಂದ ರೂ.15 ಲಕ್ಷದವರೆಗೆ ವಿದ್ಯುತ್ ಬಿಲ್ ಬರುತ್ತಿದೆ. 300 ಕಿಲೋವಾಟ್ ಸೌರ ವ್ಯವಸ್ಥೆಯಿಂದ ವಾರ್ಷಿಕ ಸುಮಾರು ರೂ.20 ಲಕ್ಷ ಉಳಿತಾಯ ಸಾಧ್ಯವಾಗಲಿದೆ. ಎರಡು ವರ್ಷಗಳ ಬಳಿಕ ಹೂಡಿಕೆಯಿಂದ ಲಾಭ (ರಿಟರ್ನ್) ನಿರೀಕ್ಷಿಸಬಹುದು. ಪಂಚಾಯತ್ ಕಚೇರಿ ಕಟ್ಟಡಗಳು ಸೇರಿದಂತೆ ರಾಜ್ಯಾದ್ಯಂತ ಸರ್ಕಾರಿ ಕಟ್ಟಡಗಳಲ್ಲಿ ಇದೇ ರೀತಿಯ ಅಳವಡಿಕೆಯನ್ನು ಪ್ರೋತ್ಸಾಹಿಸುವುದು ಈ ಯೋಜನೆಯ ಗುರಿಯಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಮಾತನಾಡಿ, ವಿದ್ಯುತ್ ಮೇಲಿನ ಹೊರೆ ಕಡಿಮೆ ಮಾಡುವುದು ಅತ್ಯಂತ ಅಗತ್ಯ. ಸರ್ಕಾರವು ಸೌರಶಕ್ತಿ ಅಳವಡಿಕೆಯ ಕುರಿತು ಆದೇಶಗಳನ್ನು ನೀಡುತ್ತಲೇ ಇರುತ್ತದೆ. ಆದರೆ, ಆದೇಶ ಹೊರಡಿಸುವ ಸ್ಥಳವಾಗಿರುವ ವಿಧಾನಸೌಧದಲ್ಲೇ ಸೌರಶಕ್ತಿ ಅಳವಡಿಸಿಕೊಳ್ಳದಿದ್ದರೆ, ಆದೇಶ ಉತ್ತವಾಗಿ ಕಾಣುವುದಿಲ್ಲ ಈ ನಿಟ್ಟಿನಲ್ಲಿ ಸರ್ಕಾರ ಒಂದು ಪ್ರಮುಖ ಹೆಜ್ಜೆಯನ್ನಿಟ್ಟಿದೆ. ಎಲ್ಲಾ ಶಾಸಕಾಂಗ ಸದನಗಳಲ್ಲಿ ಸೌರ ಫಲಕಗಳನ್ನು ಅಳವಡಿಸುವ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಮಕ್ಕಳ ಅಮೂಲ್ಯ ಬಾಲ್ಯವನ್ನ ಮೊಬೈಲ್, ಟಿವಿಗಳು ಕಸಿಯುತ್ತಿವೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ವಿಷಾಧ



ಆಯಾಮ ಅಕಾಡೆಮಿ ವಿದ್ಯಾರ್ಥಿಗಳಿಂದ 'ನಿನಾದ' ಸಮೂಹ ಗಾಯನ ನಡೆಯಿತು.

ಮೈಸೂರು, ಫೆ.7(ವಿವಿಹೆಚ್)– ಮಕ್ಕಳ ಬಾಲ್ಯ ಸಹಜವಾದ ಮುಗ್ಧತೆಯನ್ನು ಅಂಕಗಳು, ಮೊಬೈಲ್, ಟಿವಿ ಮಾಧ್ಯಮಗಳು ಕಸಿಯದ ಹಾಗೆ ನೋಡಿಕೊಳ್ಳುವುದು ಪ್ರತಿಯೊಬ್ಬ ಪೋಷಕರ ಆದ್ಯ ಕರ್ತವ್ಯವಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರಿನ ರಂಗಾಯಣದ ಕಲಾಮಂದಿರ ಆವರಣದಲ್ಲಿ ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ವತಿಯಿಂದ ಎರಡು ದಿನಗಳ ಕಾಲ ಆಯೋಜಿಸಲಾಗಿರುವ ಸಂಗೀತ–ನೃತ್ಯ–ನಾಟಕಗಳ 'ಆಯಾಮೋತ್ಸವ–2026' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹುಟ್ಟಿನಿಂದಲೇ ಇರುವ ಗುಣ ಸ್ವಭಾವಗಳನ್ನು ಬೇರೆ–ಬೇರೆ ವಿಷಯಗಳ ನೆಪವೊಡ್ಡಿ ಕಿತ್ತುಕೊಳ್ಳಬಾರದು. ಆಧುನಿಕತೆ ಹೆಸರಲ್ಲಿ ಜಾನಪದ ಕಲೆ, ದೇಸೀ ನಾಟಕ, ಸಂಗೀತ, ನೃತ್ಯಗಳ ಮೇಲಿನ ಒಲವನ್ನು ಕಸಿಯಲಾಗುತ್ತಿದೆ. ಇಂತಹವುಗಳ ನಡುವೆ ಮಕ್ಕಳನ್ನೇ ಕೇಂದ್ರೀಕರಿಸಿರುವ ಈ ಚಟುವಟಿಕೆಗಳು ಮಕ್ಕಳ ಮನಸ್ಸಿಗೆ ಮುದ ನೀಡುವ ಜೊತೆಗೆ ಸಮಾಜದೊಂದಿಗೆ ಮುಕ್ತವಾಗಿ ಬೆರೆಯಲು ಸಹಕಾರಿಯಾಗುತ್ತದೆ ಎಂದರು.

ಜಾತಿ, ಬೇಧ, ಮತವ ಮೀರಿ, ಎಲ್ಲರೂ ಒಂದು ನಾವೆಲ್ಲರೂ ಭಾರತೀಯರು ಎಂದು ಕವಿಗಳ ವಾಣಿಯನ್ನು ಪುಟ್ಟ ಮಕ್ಕಳು ಏಕ ಕಂಠದಲ್ಲಿ ಹಾಡುವ ಮೂಲಕ ವಿವಿಧತೆಯಲ್ಲಿ ಏಕತೆ ಕಾಣಬೇಕು ಎಂದು ಮತ್ತೊಮ್ಮೆ ನೆನಪಿಸಿದ್ದಾರೆ. ಇಂತಹ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಿಕೊಂಡು ಈ ನಾಡಿನ ಶಕ್ತಿಯಾಗಿ, ಶಾಂತಿ, ಸಹನೆ, ಸಹಬಾಳ್ವೆಯ ಸತ್ಪ್ರಜೆಗಳಾಗಿ ರೂಪಿಸುವಲ್ಲಿ ಇಂತಹ ಕಾರ್ಯಕ್ರಮಗಳು ಹೆಚ್ಚೆಚ್ಚು ಆಯೋಜನೆಯಾಗಬೇಕು ಎಂದು ಅಭಿಪ್ರಾಯಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ಹೆಚ್.ರಾಜೇಶ್, ಆಯಾಮ ಅಕಾಡೆಮಿ ನಿರ್ದೇಶಕರಾದ ಡಾ.ಎಸ್. ವಿ.ಶಾಂಭವಿ ಸ್ವಾಮಿ ಉಪಸ್ಥಿತರಿದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಆಯಾಮ ಅಕಾಡೆಮಿ ವಿದ್ಯಾರ್ಥಿಗಳಿಂದ 'ನಿನಾದ' ಸಮೂಹ ಗಾಯನ ನಡೆಯಿತು. ಕನ್ನಡ ಚಲನಚಿತ್ರ ಗೀತೆಗಳು, ಭಾವಗೀತೆ ಸೇರಿದಂತೆ ಮಕ್ಕಳ ಪ್ರಧಾನ ಗೀತೆಗಳು ಹೆಚ್ಚು ಗಮನ ಸೆಳೆದವು. ಕೀಬೋರ್ಡ್‌ನಲ್ಲಿ ಪುರುಷೋತ್ತಮ್ ಕಿರಗಸೂರು, ತಬಲಾದಲ್ಲಿ ಆತ್ಮರಾಮ್, ರಿದಮ್ ಪ್ಯಾಡ್‌ನಲ್ಲಿ ಅರುಣ್ ಮೈಸೂರು ಮೋಡಿ ಮಾಡಿದರು.

ವೇದಿಕೆ ಕಾರ್ಯಕ್ರಮದ ನಂತರ ಆಯಾಮ ಅಕಾಡೆಮಿಯ ಹಿರಿಯ ವಿದ್ಯಾರ್ಥಿಗಳಿಂದ 'ದೇಸೀ ವೈಭವ' ಜಾನಪದ ನೃತ್ಯ ಸಂಗಮ ಕಾರ್ಯಕ್ರಮ ನಡೆಯಿತು. ಡಾ.ಎಸ್.ವಿ. ಶಾಂಭವಿ ಸ್ವಾಮಿ ನಿರ್ದೇಶಿಸಿ ಸಂಯೋಜಿಸಿದ್ದು, ಮಧು ಮಳವಳ್ಳಿ ಬೆಳಕಿನ ವಿನ್ಯಾಸ, ವೇಷ ಭೂಷಣ ಮತ್ತು ಪರಿಕರ ನಿರ್ವಹಣೆ ಹೊಣೆಯನ್ನು ಶ್ವೇತಶ್ರೀ, ಪೃಥ್ವಿ ವಹಿಸಿದ್ದರು. ಹಾಗೆಯೇ ಕಾರ್ಯಕ್ರಮದ ನಿರ್ವಹಣೆಯನ್ನು ಎಂ.ಎಸ್.ಅಪೂರ್ವ ನಿರ್ವಹಿಸಿದರು.



Hi! TAXI

ONLY ONE WAY TAXI CHARGE

MYSORE to BANGALORE
City drop or Pick up

BANGALORE to MYSORE
Airport drop or Pick up
MYSURU

9611177599

ಸೈಟು ಮಾರಾಟಕ್ಕಿದೆ

30x40 ದಕ್ಷಿಣಾಭಿಮುಖ ರಿಂಗ್ ರೋಡ್‌ನಿಂದ ಕೇವಲ 50 ಮೀಟರ್,ಮುಡಾ ಮಂಜೂರಾತಿ ನಿವೇಶನ, ದಟ್ಟಗಳ್ಳಿ

7349520338

CHANGE OF NAME

I, Shripad, S/O Tammayya Hegde, Residing at #204, Kannadagal, post Kodase, Yellapur, uttar Kannada - 581359 and Presently reisiding at # 1048, 8th main road, 11th cross, Sharadadevi Nagar, Mysuru -570023, karnataka, have changed my name from shripad to shripad Hegde my Own free will infront of notary N.P. Kamala Devi on dated 07.02.2026

Sd/- Shripad Hegde

FOR SALE

Prime Location Site For Sale
43x93
East Facing, 100 Mtr from Ashoka Puram Railway Station Near Bedarakannappa Temple

30x40, 30x50
Residential Sites for Sale
Various Locations

Ready to Move-in Houses for SALE
Prime Locations, Vijayanagar
40x60, 50x80

Commercial Property for Sale
Dattagalli, 80Ft Road
South East Corner, G+2

Commercial Property for Sale
42.5x100
80Ft Road, Near NIE College

Srirampura Commercial Property for Sale
50x80
North Facing, Rent Expected 3 lakhs

(Brokers Excuse)

9008111454

ಸ್ಥಾಪನೆ : 1919 ದೂ. 0821-2520894, 4259665

ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿಯಮಿತ

ಎನ್.ಮಾಧವರಾವ್ ವೃತ್ತ, ಮೈಸೂರು–570 004

ಪ್ರಕಟಣೆ

1. ಚಿನ್ನಾಭರಣಗಳ ಮೇಲೆ ಶೇ 9.5 ರಂತೆ ಗ್ರಾಂಗೆ ರೂ.9000/– ರಂತೆ ಶೀಘ್ರವಾಗಿ ಸಾಲ ನೀಡಲಾಗುತ್ತಿದೆ.
2. ಮನೆ ಹಾಗೂ ನಿವೇಶನಗಳ ಮೇಲೆ, ಮನೆ/ನಿವೇಶನ ಕೊಳ್ಳುವ ಉದ್ದೇಶಕ್ಕೆ ಶೇ 12.5 ರಂತೆ ಗರಿಷ್ಠ 40 ಲಕ್ಷ ಶೀಘ್ರವಾಗಿ ಸಾಲ ನೀಡಲಾಗುತ್ತಿದೆ. (ಸುಸ್ತಿ ಬಡ್ಡಿ ಪಾವತಿಸದೇ ಸರಿಯಾಗಿ ಕಂತುಗಳನ್ನು ಕಟ್ಟಿದವರಿಗೆ ಬಡ್ಡಿಯಲ್ಲಿ 1% ರಿಯಾಯಿತಿ ನೀಡಲಾಗುವುದು.)
3. ಠೇವಣಿಗಳ ಮೇಲೆ ಗರಿಷ್ಠ ಶೇ.7.5% ರಂತೆ ಹಾಗೂ ಹಿರಿಯ ನಾಗರೀಕರಿಗೆ ಶೇ 8.0% ರಂತೆ ಬಡ್ಡಿ ನೀಡಲಾಗುತ್ತಿದೆ.
4. 2026ನೇ ಸಾಲಿನ ಯಶಸ್ವಿನಿ ಯೋಜನೆ ಪ್ರಾರಂಭವಾಗಿದೆ.

ಶ್ರೀ ಡಿ.ಬಸವರಾಜು (ಬಸಪ್ಪ), ಅಧ್ಯಕ್ಷರು | ಶ್ರೀಮತಿ ಹೆಚ್ ಎನ್.ಸರ್ವಮಂಗಳ, ಉಪಾಧ್ಯಕ್ಷರು | ಶ್ರೀಮತಿ ಶಾಂತಲ ಪ್ರ. ವ್ಯವಸ್ಥಾಪಕರು

ನಿರ್ದೇಶಕರುಗಳಾದ: ನಂಸಿದ್ದಪ್ಪ, ಜಿ.ಎಂ.ಪಂಚಾಕ್ಷರಿ, ಹೆಚ್.ವಿ.ಭಾಸ್ಕರ್, ಎಂ.ಡಿ.ಪಾರ್ಥಸಾರಥಿ(ಪಾರ್ಥಿ), ಪ್ರತಿಧ್ವನಿಪ್ರಸಾದ್, ಟಿ.ವಿ. ಗಣೇಶಮೂರ್ತಿ, ಶ್ರೀಮತಿ ಬಿ. ನಾಗಜ್ಯೋತಿ, ನವೀನ್ ಕುಮಾರ್ ಎಂ.ಎನ್., ಎಂ.ಎಸ್. ಅರುಣ್ ಸಿದ್ದಪ್ಪ, ಹೆಚ್.ವಾಸು, ಶಿವಪ್ರಕಾಶ್ ಎಂ.

STAR OF MYSORE

SPECIAL ISSUE

Star of Mysore is completing **48 years** of service on **16th February (Monday) 2026** and entering **49th** year of publication. As in the past, this year too we will be publishing a Special Issue.


NOTE: As 15th February (Sunday) is a Government Holiday on the occasion of **Mahashivarathri**, ***Star of Mysore*** Offices will remain closed on that day. Hence, we request our advertisers & patrons to release their advertisements for the Special Issue before **12th February** to facilitate printing as per schedule.

HEAD OFFICE

0821-2496520 (5-LINES) Ad Dept. - 0821-2496522 / 23
Email : ad@starofmysore.com

Maria G. Fernandes - Advt. Manager: **94485-25060/80730-30835**
Joy Anthony Dove - Sr. Executive-Ad Sales - **89516-68960**
Prema - Sr. Executive Advertising - **98805-49879**

- K.R. Circle Office : 0821-2431774 • D.D. Urs Road Office : 0821-2428695
- Kodagu Office : 97314-69871 • Mandya Office : 87629-60325
- Chamarajanagar : 92422-65657 • T.N. Pura : 94483-05750
- Nanjangud : 98805-09200 • Bengaluru : 98440-46761



HOUSE FOR SALE

As Per Your Requirement Architect Designed.

AT MYSURU	*AT HUNSUR*
Near Vajamangala, Bannur Road. 20x30 30.5 Lakhs 20x40 34 Lakhs 30x40 54 Lakhs Near St. Josheph School. 20x40 - 44 Lakhs 30x50 - 82 Lakhs	Near KSRTC Bus Depot. 20x30 24 Lakhs 20x40 24.6 Lakhs 30x40 29 Lakhs. Contact

8123387555 / 7259348777

ಮಾರಾಟಕ್ಕಿದೆ

ರಾಷ್ಟ್ರೀಯ ಹೆದ್ದಾರಿ (N.H.73) ಉಜಿರೆ–ಧರ್ಮಸ್ಥಳ ಮಾರ್ಗದಲ್ಲಿ ಪೆಟ್ರೋಲ್ ಪಂಪ್ ಸೇರಿ 57 ಸೆಂಟ್ಸ್ ಜಾಗ ಮಾರಾಟಕ್ಕಿದೆ.

ಆಸಕ್ತರು ಸಂಪರ್ಕಿಸಿರಿ:
94481 47107

ಮೊದಲನೇ ವರ್ಷದ ಪುಣ್ಯಸ್ಮರಣೆ



ಹೆಚ್.ಎಂ. ಶಿವಸ್ವಾಮಿ
ಸಿ.ಎಸ್.ಐ (ಭಾರತ ಸರ್ಕಾರ)

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು : ಪತ್ನಿ, ಮಕ್ಕಳು, ಅಕ್ಕಂದಿರು, ತಮ್ಮ ಹಾಗೂ ಅಪಾರ ಬಂಧು ಮಿತ್ರರು

ಎರಡನೇ ವರ್ಷದ ಸವಿನೆನಪು



ಸ್ವಾಮಿ ಎಮ್

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷವಾದರೂ ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ ಮತ್ತು ಕುಟುಂಬ ವರ್ಗದವರು

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಶಿವರುದ್ರಪ್ಪ (ಸ್ವಾಮಣ್ಣ)

ಸರಸ್ವತಿಪುರಂ, 15ನೇ ಮುಖ್ಯರಸ್ತೆ, ಮೈಸೂರು
ಇವರು ದಿನಾಂಕ 07–02–2026 ಶನಿವಾರ ದೈವಾಧೀನರಾಗಿದ್ದು, ಮೃತರ ಅಂತ್ಯ ಸಂಸ್ಕಾರವನ್ನು ಜಯನಗರ ಸ್ಮಶಾನ, (ಕಾವೇರಿ ಸ್ಕೂಲ್ ಪಕ್ಕ) 8–2–2026ರ ಬೆಳಿಗ್ಗೆ 10 ಗಂಟೆಗೆ ನೆರವೇರಿಸಲಾಗುತ್ತದೆ.
ದುಃಖತಪ್ತರು : ಕುಟುಂಬವರ್ಗದವರು, ಬಂಧು–ಬಳಗ

ಇಂಪೀರಿಯಲ್ ಸಿಟಿ

HP HYLAND PROPERTIES

ಕೇವಲ ₹749/ ಪ್ರತಿ ಚದರ ಅಡಿ

ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

ಬುಕಿಂಗ್ ಪ್ರಾರಂಭವಾಗಿದೆ

ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ

MUDA LIMITS

ಸುಲಭ 4 ಕಂತುಗಳ ಸೌಲಭ್ಯವಿದೆ

30x40 | 30x50
40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಹೈಲ್ಯಾಂಡ್ ಪ್ರಾಪರ್ಟೀಸ್
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು

90713 86615
95133 01854

ಪದ್ಮ ಚಿತ್ರಮಂದಿರ

07.02.2026 ರಿಂದ
ದಿನ 3 ಪ್ರದರ್ಶನ (ತೆಲುಗು)

ಚಿರಂಜೀವಿ ನಟಿಸಿರುವ
ಮನ ಶಂಕರ ವರಪ್ರಸಾದ್ ಗಾರು



1.30
4.30
7.30

ಬುಕ್ ಮೈ ಶೋನಲ್ಲಿ ಟಿಕೇಟ್ ಲಭ್ಯವಿದೆ.

FOR SALE

Wholesale & Retail Sale
Fancy Store

15 Lakhs Less from Total Amount. Tailoring, Gift, Fancy, Plastic, Leathers Items at Hunsur-Mysore Road, Near Ganapathy Temple, Hinkal, Mysore.

Call: 9243580623

ಸಿಬ್ಬಂದಿ ಬೇಕಾಗಿದ್ದಾರೆ

SSLC/PUC ಪಾಸ್ /ಫೇಲ್–40 ಪೋಸ್ಟ್‌ಗಳು, ITI EM (ಪುರುಷರು ಮಾತ್ರ) –10 ಪೋಸ್ಟ್‌ಗಳು,
30 ವರ್ಷಕ್ಕಿಂತ ಕಡಿಮೆ ವಯಸ್ಸಿನವರು
ಆರಂಭಿಕ ವೇತನ Rs. 17,250
ಅಂಕಪಟ್ಟಿಗಳು, ಆಧಾರ್‌ನೊಂದಿಗೆ ಸಂದರ್ಶನಕ್ಕೆ ಬನ್ನಿ.
ಬೆಳಿಗ್ಗೆ 10:00 ರಿಂದ ಸಂಜೆ 4:30 ರವರೆಗೆ

ಎಕ್ಸೆಲ್–ಫಾರ್ ಎಲೆಕ್ಟ್ರಾನಿಕ್ಸ್ ಪ್ರೈವೆಟ್ ಲಿಮಿಟೆಡ್,
292/ಬಿ, ಹೆಬ್ಬಾಳ್ ಕೈಗಾರಿಕಾ ಪ್ರದೇಶ, ಮೈಸೂರು

9844157111
9900557929

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.


–ಜಾಹೀರಾತು ವ್ಯವಸ್ಥಾಪಕರು

AVADOOTHA TOURS & PACKAGES

Mysore to Dandeli, Honnavara & Murdeshwara Package Trip on 20th Feb 2026

8277774504

5ನೇ ವರ್ಷದ ಸವಿನೆನಪು



ಯ|| ಶ್ರೀಮಾನ್ ಹೊನ್ನೇಗೌಡ್ರು
ಬೊಗಾದಿ ಗ್ರಾಮ, ಮೈಸೂರು

NEW HORIZON ENGINEERING Pvt. Ltd. (NHE), Regd.

Works : B3, KSSIDC Industrial Area, Nanjangud - 571 302

Manufacturer of Rubber and Engineering Plastic Components for automobile and non-automobile applications.

Position : ENGINEER – QUALITY
(Plastic Injection Moulding Operations)

REQUIREMENTS :
Qualification : Degree -
B.Sc., / Any Diploma Engineering / CIPET / GTTC
Minimum 4 to 5 years experience in Plastics Injection Moulding.
Exposure to ISO / IATF Quality Management systems

Male candidate, age below 45 years preferred.

Email : hbramesha@newhorizonengineering.in

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ) ಇ–ಪೋರ್ಟಲ್ ನಲ್ಲಿ ಮಾತ್ರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕಾವೇರಿ ಭವನ ಸಂಕೀರ್ಣ, ಗೋಕುಲಂ ನಾಲ್ಕನೇ ಹಂತ, ಯಾದವಗಿರಿ ಅಂಚೆ, ಮೈಸೂರು – 570020
Ph. 0821-2515598 Email: eevccdn2@gmail.com

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಸಂಖ್ಯೆ: 17/2025–26 ದಿನಾಂಕ: 06.02.2026

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.2, ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು ಇವರು ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ಇ–ಟೆಂಡರ್‌ಗಳನ್ನು ಕೆಪಿಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಅರ್ಹತೆಗೆ ಬೇಕಾಗುವ ಎಲ್ಲಾ ಅವಶ್ಯಕ ಪ್ರಮಾಣ ಪತ್ರಗಳನ್ನು ಮತ್ತು ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಟೆಂಡರ್‌ಗಳ ಜೊತೆಗೆ ಸಲ್ಲಿಸುವುದು. ಕಾಮಗಾರಿಗಳ ಅಂದಾಜು ಮೊತ್ತ ರೂ.0.50 ಲಕ್ಷದ 04 ಸಂಖ್ಯೆಯ ಕಛೇರಿ ಕಟ್ಟಡದ ಒಳಭಾಗಕ್ಕೆ ವಿದ್ಯುತ್ ಸಂಪರ್ಕ ಕಲಿಸುವ ಹಾಗೂ 1 ಸಂಖ್ಯೆಯ ನಾಲಾ ಸೇವಾ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿ (ಎರಡನೇ ಕರೆ ಪ.ಜಾ ಮೀಸಲು) ಅಂದಾಜು ಮೊತ್ತ ರೂ.100.00 ಲಕ್ಷದ ಕಾಮಗಾರಿಗಳನ್ನು ಕೈಗೊಳ್ಳಲು ಐಟಂವಾರು ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಯ ವಿವರ, ಟೆಂಡರ್ ಕ್ವರಿಸ್/ಕ್ಲ್ಯಾರಿಫಿಕೇಷನ್ ಕೊನೆಯ **ದಿನಾಂಕ:11–02–2026 ಸಾಯಂಕಾಲ 04.30 ಗಂಟೆ** ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸಲು **ಕೊನೆಯ ದಿನಾಂಕ: 13–02–2026 ಸಾಯಂಕಾಲ 05.30 ಗಂಟೆ** ಯವರೆಗೆ ಹಾಗೂ ಟೆಂಡರ್ ಬಿಡ್‌ಗಳನ್ನು ತೆರೆಯುವ **ದಿನಾಂಕ:16–02–2026 ಬೆಳಿಗ್ಗೆ 11.30 ಗಂಟೆಗೆ,** ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ: www.kppp.karnataka.gov.in ರಲ್ಲಿ ಪಡೆಯಬಹುದು. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ–ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು

NKF ಪಬ್ಲಿಕ್ ಶಾಲೆ

ಕೊಳ್ಳೆಗಾಲ ಮುಖ್ಯರಸ್ತೆ, ಟಿ. ನರಸೀಪುರ – 571124

ಪ್ರೌಢಶಾಲೆ ಶಿಕ್ಷಕರು ಬೇಕಾಗಿದ್ದಾರೆ
(ಆಂಗ್ಲಮಾಧ್ಯಮ)
(SSLC ಬೋಧನೆ ಅನುಭವ ಇರುವವರಿಗೆ ಆದ್ಯತೆ)
Sub: Science and Mathematics
Qualification : B.Sc / M.Sc, B.Ed
ದಾಖಲೆಗಳೊಂದಿಗೆ ಕೂಡಲೇ ಮೇಲಿನ ವಿಳಾಸಕ್ಕೆ ಸಂಪರ್ಕಿಸಿ
Email: nkfhpstnpura@gmail.com

08227-295990

WANTED

COUNTER STAFF (M/F)
to work in MEDICAL STORE
Full Time and Part Time
Age below 40 years
SRI MURUGAN ELIXIR
Vijayanagar 2nd Stage, Mysore.

Call : 97397 39738

SITES FOR SALE

20x30 E/F & W/F
Near Uthanahalli
0.75km from Ring Road
Layout under formation
Early Bird Offer
Price Rs. 30L / Site

Call : 95912 55667 /97415 80620

PRAKRUTHI PROPERTIES

FOR SALE

Residential & Commercial Properties At Mysore

40x120 80ft Rd, Dattagalli
40x60 Shardha Lyt, JP Ngr
20x30+ Kuvempu Ngr Side
40x60 Commercial Srirampura

20x30 2 BHK @ 45L
20x30 3 BHK Duplex @ 60L
20x30 4 BHK Duplex @ 62L
Near Rainbow School, Bogadi

Sites @ 60 ft & 50 Ft Rd
Brahmins Lyt attach
HD Kote Rd, Nr RT Ngr

2 BHK & 3 BHK
Apartments @ Prime Location in Mysore
Bookings Open



Ramakrishna Nagar
Bank Loan Available

95386 90359, 90359 90359

Radisson BLU PLAZA HOTEL MYSORE

TENDER FOR ANNUAL CONTRACT

Sealed Tenders are invited for supplying the following items to the hotel on an annual contract basis for the period April 2026 to March 2027:

1. Vegetables
2. Fruits
3. Charcoal, Gel Fuel, WTP Salt
4. Dairy Products (Milk / Unsalted Butter etc.)
5. Ice Creams
6. Mutton
7. Chicken / Eggs
8. Sea Food
9. Meat (Pork, Sausages etc.)
10. Cleaning Supplies
11. F&B Catering Supplies
12. General Stationery
13. Groceries/Provisions (Rice / Oil etc.)
14. Electricals (LED Bulbs, Fittings etc.)
15. Plumbing Supplies
16. Paints
17. Scrap Clearance / Used Cooking Oil Collection
18. Frozen Items

All vendors are to comply with FSSAI Act/ GST / Shops & Establishments Act. The right to select / reject any tender without assigning any reason thereof, reserved.

Last date for application issue: **16-02-2026**
Last date for receiving sealed application: **23-02-2026**
Cost of Application (Direct / By Post) per item: **Rs. 500.00**

Contact: **Manager** - Materials
RADISSON BLU PLAZA HOTEL, MYSORE
1, M.G. Road, Mysore-570010, Karnataka, India.
Mob: +91 88844-45066

VISHVAKSHEMA TRUST

SHREE PARASHARA GURUKULAM

(Accredited Study Centre of National Institute of Open Schooling.Code-008063)

Experienced or Fresh Trimatastha Brahmins Candidates are required to Teach following subjects for grades 5th to 10th (Central Syllabus / NIOS Syllabus)

Sl.No.	Subject	Qualification	Preference
1.	**English**	M.A., with B.Ed.,	English as one of the major subject in Degree
2.	**Sanskrit**	B.A., / M.A., with B.Ed., or Vidwat	

Fluency in English is mandatory. Interested Candidates may please forward your Resume to the E-mail address given below within 7 days from the date of Advertisement.

vishvakshema@yahoo.com / parasharagurukulam@gmail.com

ಮೈಸೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

mymul

ಮೆಗಾ ಡೇರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು–570 028. ದೂರವಾಣಿ:0821–2474475, ಫ್ಯಾಕ್ಸ್.: 0821–2474476, e-mali: purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸಾಮಾಗ್ರಿಗಳನ್ನು ಖರೀದಿಸಲು /ಸೇವೆಯನ್ನು ಪಡೆಯಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ https://kppp.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
01	KMF/2025-26/ IND1853/ CALL-2	ಒಕ್ಕೂಟಕ್ಕೆ ಅಗತ್ಯವಿರುವ ವಾಟರ್ ಜೆಟ್ ಮಷಿನ್ ಅನ್ನು ಖರೀದಿಸಿ ಅಳವಡಿಸಲು ಹಾಗೂ ಒಕ್ಕೂಟದ ಮುಖ್ಯ ಪ್ರಯೋಗಾಲಯಕ್ಕೆ 5000CFM ಸಾಮರ್ಥ್ಯದ ಚಿಲ್ಡ್ ವಾಟರ್ ಏರ್ ಹ್ಯಾಡ್ಲಿಂಗ್ ಯುನಿಟ್ ಅನ್ನು ಖರೀದಿಸಿ ಅಳವಡಿಸುವ ಬಗ್ಗೆ.	13.02.2026 ಸಂಜೆ: 05.00 ಗಂಟೆಯವರೆಗೆ
02	KMF/2025-26/ SE4861	ಮೈಸೂರು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ನಂದಿನಿ ಹಾಲು ಹಾಗೂ ಹಾಲಿನ ಉತ್ಪನ್ನಗಳ ಹೋರ್ಡಿಂಗ್ ಮತ್ತು ಕ್ಯಾಂಟಿಲಿವರ್‌ಗಳನ್ನು ಅಳವಡಿಸುವ ಬಗ್ಗೆ.	13.02.2026 ಸಂಜೆ: 05.00 ಗಂಟೆಯವರೆಗೆ
03	KMF/2025-26/ IND1984	ಒಕ್ಕೂಟದಲ್ಲಿ 01 GBPS ರಿಂದ 10 GBPS ಸಾಮರ್ಥ್ಯಕ್ಕೆ ಲ್ಯಾನ್ ಅಪ್‌ಗ್ರೇಡ್ ಹಾಗೂ ರೆಡಂಡೆಂಟ್ ಕೋರ್ ಸ್ವಿಚ್ ಮತ್ತು ಫೈರ್‌ವಾಲ್ ವ್ಯವಸ್ಥೆಯನ್ನು ಮಾಡಿಸುವ ಬಗ್ಗೆ.	13.02.2026 ಸಂಜೆ: 05.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗವನ್ನು (6366430821 , 9482231739) ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರ್ಕಾರ

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ

ಜಿಲ್ಲಾ ಕೌಶಲ್ಯಾಭಿವೃದ್ಧಿ, ಅಧಿಕಾರಿಗಳ ಕಾರ್ಯಾಲಯ, ನಂ: 5/1, ವಿನೋಬಾ ರಸ್ತೆ, ಮಾನಸಗಂಗೋತ್ರಿ, ಪ್ರೀಮಿಯರ್ ಸ್ಟುಡಿಯೋ ಎದುರು, ಮೈಸೂರು–570006,
ದೂ: 0821–2970815 E-mail : dsdomysore@gmail.com

ಸಂಖ್ಯೆ: ಜಿ.ಕೌ.ಕ.ಮೈ/ಹೊ.ಗು.ವಾ/ವಿ.ವ–12/2025–26 ದಿನಾಂಕ: 06.02.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ, ಮೈಸೂರು ಕಛೇರಿಗೆ ಅವಶ್ಯವಿರುವ ಕಛೇರಿಯ ಉಪಯೋಗಕ್ಕಾಗಿ 01 ಸಂಖ್ಯೆ AC ಕಾರನ್ನು ಚಾಲಕ ಮತ್ತು ಇಂಧನ ಸಹಿತ ಮಾಸಿಕ ಬಾಡಿಗೆ ಆಧಾರದ ಮೇಲೆ ಸರಬರಾಜು ಮಾಡಲು ಹಾಗೂ ಕಛೇರಿಗೆ ಅವಶ್ಯವಿರುವ ಎರಡು (02) ಗ್ರೂಪ್ 'ಡಿ' ನೌಕರರ ಸೇವೆಯನ್ನು ಹೊರಸಂಪನ್ಮೂಲ ಸಂಸ್ಥೆಯಿಂದ ಪಡೆಯಲು 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಸೇವೆಯನ್ನು ಒದಗಿಸಲು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನ https://kppp.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.

1. ಟೆಂಡರ್‌ನ್ನು ಸಲ್ಲಿಸಲು ಕಡೆಯ **ದಿನಾಂಕ: 21.02.2026 ಸಂಜೆ 5.30 ಗಂಟೆಯವರೆಗೆ.**
2. ಟೆಂಡರ್ ತೆರೆಯುವ **ದಿನಾಂಕ: 23.02.2026 ರ ಬೆಳಿಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ ಸಂ	ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ)	ಕಾಲಾವಧಿ
1	{Vehicle}	4.80	12000.00	12 ತಿಂಗಳು
2	{Group D}	5.77	14420.00	12 ತಿಂಗಳು

ಸೂಚನೆ:1. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು https://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು

ವಾಸಾಸಂಇ/ಮೈಸೂರು/ಶಿರಡಿ ಸಾಯಿ/1624/2025–26

Santhosh Brick Manufacturers LLP

WE ARE HIRING
FIELD SALES EXECUTIVE

We are a well-established brick Manufacturing Company looking for a **Dynamic and result - oriented Field Sales Executive**

REQUIREMENTS :
- 2-years of experience in sales (brick / construction material preferred)
- Good communication and negotiation skills
- Ability to travel locally
- Qualification: Diploma/Graduate/MBA(Marketing)
- Two-wheeler preferred

Salary: Attractive salary with performance-based incentives

Location: [Mysuru / Aswalu]

Call : 96060 33443
Mail ID: santhoshbricks2024@gmail.com